ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಜನವರಿ 2026 ಬೆಲೆ ರೂ. 20/-

SAPTHAGIRI(KANNADA)
SPIRITUAL ILLUSTRATED MONTHLY
Volume:05, Issue:6, Pages:56
January - 2026, Price Rs. 20/-



## ತಿರುಮಲೆಯಲ್ಲಿ ರಥಸಪ್ತಮಿ
## 25-01-2026

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸ್ವಾಮಿಯವರ ಆರ್ಜಿತ ಸೇವೆಗಳು - ತಿರುಮಲೆ

## ಆರ್ಜಿತ ಸೇವೆಗಳು/ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ಸೇವೆ ಸಮಯ | ಟಿಕೆಟ್ಟು ಬೆಲೆ | ಪ್ರವೇಶ |
|---|---|---|---|---|
| | **ನಿತ್ಯ ಸೇವೆ** | | | |
| 1. | ಸುಪ್ರಭಾತ | ಬೆ. 3.00 ಗಂ॥ | 120.00 | 01 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಬೆ. 3.30 ಗಂ॥ | 220.00 | 01 |
| 3. | ಅರ್ಚನೆ (ಮಂಗಳ, ಬುಧ, ಗುರು) | ಬೆ. 4.30 ಗಂ॥ | 220.00 | 01 |
| | **ನಿತ್ಯ ಉತ್ಸವಗಳು** | | | |
| 4. | ಕಲ್ಯಾಣೋತ್ಸವ | ಮ. 12.00 ಗಂ॥ | 1,000.00 | 02 |
| 5. | ಊಂಜಲ್ ಸೇವೆ | ಮ. 2.00 ಗಂ॥ | 500.00 | 01 |
| 6. | ಆರ್ಜಿತ ಬ್ರಹ್ಮೋತ್ಸವ | ಮ. 3.00 ಗಂ॥ | 500.00 | 01 |
| 7. | ಸಹಸ್ರದೀಪಾಲಂಕರಣ ಸೇವೆ | ಸಾ. 5.00 ಗಂ॥ | 500.00 | 01 |
| | **ವಾರದ ಸೇವೆಗಳು** | | | |
| 8. | ಅಷ್ಟದಳ ಪಾದಪದ್ಮಾರಾಧನೆ ಸೇವೆ (ಮಂಗಳವಾರ) | ಬೆ. 9.30 ಗಂ॥ | 1,250.00 | 01 |
| 9. | ತಿರುಪ್ಪಾವಡ ಸೇವೆ (ಗುರುವಾರ) | ಬೆ. 7.00 ಗಂ॥ | 850.00 | 01 |
| 10. | ಅಭಿಷೇಕ ಸೇವೆ (ಶುಕ್ರವಾರ) | ಬೆ. 4.30 ಗಂ॥ | 750.00 | 01 |
| | **ವಾರ್ಷಿಕ ಸೇವೆಗಳು** | | | |
| 11. | ತೆಪ್ಪೋತ್ಸವ (ಫೆಬ್ರವರಿ/ ಮಾರ್ಚ್) | ರಾ. 7.00 ಗಂ॥ | 500.00 | 01 |
| 12. | ವಸಂತೋತ್ಸವ ( ಮಾರ್ಚ್/ ಏಪ್ರಿಲ್) | ಮ. 2.00 ಗಂ॥ | 300.00 | 01 |
| 13. | ಜ್ಯೇಷ್ಠಾಭಿಷೇಕ (ಅಭಿದೇಯಕ ಅಭಿಷೇಕ) (ಜೂನ್) | ಬೆ. 9.00 ಗಂ॥ | 400.00 | 01 |
| 14. | ಪವಿತ್ರೋತ್ಸವಗಳು (ಆಗಸ್ಟ್) | ಬೆ. 9.00 ಗಂ॥ | 2,500.00 | 01 |
| 15. | ಪುಷ್ಪಯಾಗ (ನವೆಂಬರ್) | ಬೆ. 9.00 ಗಂ॥ | 700.00 | 01 |

Toll free : 155257

whatsapp feedback : 9399399399

e-mail : helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಟಿಕೆಟ್‌ಗಳನ್ನು ಆನ್‌ಲೈನ್ ನಲ್ಲಿ ಮಾತ್ರವೇ ಬುಕ್ ಮಾಡಿಕೊಳ್ಳಬೇಕು.ಇತರ ವಿವರಗಳಿಗೆ: ತಿ.ತಿ.ದೇ. ವೆಬ್‌ಸೈಟ್: **ttdevasthanams.ap.gov.in** ನು ಸಂಪ್ರದಿಸಬೇಕು.

**ಗಮನಿಸಿ :** ಸೇವೆಗಳು ಮತ್ತು ಬೆಲೆಗಳು ಯಾವುದೇ ಸಂದರ್ಭದಲ್ಲಿಯಾದರೂ ಬದಲಾವಣೆಗಳು ಆಗುವ ಸಾಧ್ಯತೆ ಇದೆ.

# ಭಗವದ್ಗೀತೆ



ಭಯಾದ್ರಣಾದುಪರತಂ ಮಂಸ್ಯಂತೇ ತ್ವಾಂ ಮಹಾರಥಾಃ ।
ಯೇಷಾಂ ಚ ತ್ವಂ ಬಹುಮತೋ ಭೂತ್ವಾಯಾಸ್ಯಸಿ ಲಾಘವಮ್ ॥

ದೊಡ್ಡ ದೊಡ್ಡ ಕಾದಾಳುಗಳು ನೀನು ಯುದ್ಧಕ್ಕೆ ಹೆದರಿ ಹಿಮ್ಮೆಟ್ಟಿದೆಯಂದು ತಿಳಿಯುತ್ತಾರೆ. ಅವರಿಗೆ ಗೌರವಪಾತ್ರನಾಗಿದ್ದ ನೀನೇ ಈಗ ಹಗುರುವಾಗುತ್ತೀಯ.

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -35)



ವೇಂಕಟಾಚಲನಿಲಯಂ ವೈಕುಂಠಪುರವಾಸಂ।
ಪಂಕಜನೇತ್ರಂ ಪರಮಪವಿತ್ರಂ ॥
ಶಂಖಚಕ್ರಧರ ಚಿನ್ಮಯರೂಪಂ ॥ಪ॥

ಅಂಬುಜೋದ್ಭವ ವಿನುತಂ। ಅಗಣಿತಗುಣನಾಮಂ॥
ತುಂಬುರನಾರದ ಗಾನವಿಲೋಲಂ।
ಅಂಬುಧಿಶಯನಂ ಆತ್ಮಾಭಿರಾಮಂ ॥1॥

ಪಾಹಿ ಪಾಂಡವ ಪಕ್ಷಂ। ಕೌರವಮದಹರಣಂ॥
ಬಾಹು ಪರಾಕ್ರಮಪೂರ್ಣಂ ।
ಅಹಲ್ಯಾಶಾಪ ಭಯನಿವಾರಣಂ ॥2॥

ಸಕಲ ವೇದ ವಿಚಾರಮ್ ಸರ್ವಜೀವ ನಿಕರಂ ।
ಮಕರಕುಂಡಲಧರ ಮದನಗೋಪಾಲಂ॥
ಭಕ್ತಪೋಷಕ ಶ್ರೀ ಪುರಂದರವಿಠಲ ॥3॥

- ಶ್ರೀ ಪುರಂದರದಾಸರು





# ಈಶಾವಾಸ್ಯೋಪನಿಷತ್ತಿನ ಹಿನ್ನೆಲೆ

- ಓಂ ಪ್ರಕಾಶ್ ಭಟ್
94824 14444

ಈಶಾವಾಸ್ಯಮಿದಂ ಸರ್ವಂಯತ್ ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯ ಸ್ವಿದ್ ಧನಮ್ ॥1॥

**'ಈಶಾವಾಸ್ಯಂ'** ಎಂದರೆ-ಇದು ಈಶನ ಆವಾಸದ ಮನೆ. ಇದು ಭಗವಂತ ನೆಲೆಸಿದ ಮನೆ. 'ಇದು' ಅಂದರೆ ಈ ದೇಹವೂ ಆಗುತ್ತದೆ. ಈ ಜಗತ್ತೂ ಆಗುತ್ತದೆ. ಅಷ್ಟೇ ಅಲ್ಲ ಇಡೀ ಬ್ರಹ್ಮಾಂಡವೇ ಭಗವಂತನ ಮನೆ. ಇದರಲ್ಲಿ ಅವನು ನೆಲೆಸಿದ್ದಾನೆ. ಇಲ್ಲಿ ಒಂದು ವಿಶೇಷ ಇದೆ. ಸ್ವಾಯಂಭುವ ಮನು ತನ್ನ ಮನಸ್ಸಿಗೆ ತಾನೇ ಹೇಳಿಕೊಂಡ ಸ್ವಯಂ ಶಿಕ್ಷಣದ ವ್ಯವಸ್ಥೆ. ಅದು ಸಾಧಕನಿಗೆ ಇರಬೇಕಾದ ಮೊದಲ ಎಚ್ಚರ ಅದೇನೆಂದರೆ, ಈ ಜಗತ್ತೆಲ್ಲ ಭಗವಂತನ ಮನೆ. ಇದರಲ್ಲಿ ನನ್ನವು ಎಂದು ಏನೂ ಇಲ್ಲ. ಭಗವಂತನು ಕೊಟ್ಟರೆ ಇದೆ,ಇಲ್ಲವೆಂದರೆ ಇಲ್ಲ. ಎಲ್ಲ ಕಡೆ ತುಂಬಿರತಕ್ಕ ತತ್ತ್ವ ಒಂದಿದೆ. ಆ ತತ್ತ್ವದ ನಿಯಂತ್ರಣದಲ್ಲಿ ನಾನಿದ್ದೇನೆ. ನಾನು ನಾನಾಗಿ ಏನೂ ಮಾಡಲಾರೆ ಎನ್ನುವ ಎಚ್ಚರ ಬಂದಾಗ ಆ ತತ್ತ್ವಕ್ಕೆ ಅರ್ಪಿಸಿಕೊಳ್ಳುವಂತಹ ನಿಷ್ಠೆ ನಮ್ಮಲ್ಲಿ ಬರುತ್ತದೆ. ಅದಕ್ಕಾಗಿ ಉಪನಿಷತ್ತು ಹೇಳಿದ್ದು 'ಈಶಾವಾಸ್ಯಮಿದಂ ಸರ್ವಂ' ಎಂದು.

ನಮಗೆ ಗೊತ್ತಿರುವ ಪ್ರಪಂಚ ಮಾತ್ರವಲ್ಲ. ಗೊತ್ತಿರದ ಪ್ರಪಂಚದಲ್ಲಿಯೂ ಭಗವಂತ ಪೂರ್ಣವಾಗಿ ತೊಡಗಿಸಿಕೊಂಡಿದ್ದಾನೆ. 'ಜಗತ್ತು' ಎಂದರೆ ಚಲನೆ ಇರುವಂತಹದ್ದು ಚಲನಶೀಲ ಆಗಿರುವಂತಹದ್ದು. ಕರಾರುವಾಕ್ ಆಗಿ ವ್ಯವಸ್ಥಿತವಾಗಿ ತಿರುಗುತ್ತದೆ. ತಾನಾಗಿ ತಿರುಗಲು ಪ್ರಾರಂಭಗೊಂಡಿತೇ? ಇಲ್ಲ. ಮೊದಲು ಯಾರಾದರೊಬ್ಬರು ತಿರುಗಿಸಿದರೆಂದರೆ ಅನಂತರ ಅದು ತಿರುಗುತ್ತಾ ಇರುತ್ತದೆ. ಹಾಲಿಗೆ ಹೆಪ್ಪು ಹಾಕಿ ಮೊಸರು ಮಾಡಲು. ಮೊದಲು ಹೆಪ್ಪು ಹಾಕಲು ಯಾರಾದರೊಬ್ಬರು ಇರಬೇಕು ತಾನೇ? ಆಮೇಲೆ ತಾನೇತಾನಾಗಿ ಮೊಸರಾಗುತ್ತದೆ. ಅದೇ ರೀತಿ ವಿಶ್ವ ಕೂಡ. ಒಂದು ಚೇತನಶಕ್ತಿ ಬೇಕು. ಜಗತ್ತಿನ ಚಲನೆಯ ಹಿಂದಿರುವ ಮೂಲ ಶಕ್ತಿಯನ್ನು ಸತ್ತ್ವ,ರಜಸ್, ತಮಸ್‌ನಿಂದ ಕೂಡಿದ ಪ್ರಕೃತಿ ಎಂದು ಕರೆದರು. ಈ ಮೂರು ಗುಣಗಳ ಸಮಾವೇಶದಿಂದ ವಿಶ್ವ ಆಗುತ್ತದೆ. ಆದ್ದರಿಂದ ಜಗತ್ತಿಗೆ ಮೂಲ ಪ್ರಕೃತಿ ಕೂಡ ಸ್ವತಂತ್ರವಲ್ಲ. ಪ್ರಕೃತಿಗೂ ಆಶ್ರಯವಾಗಿರುವಂತಹದ್ದು 'ಪ್ರಕೃತೀಶ್ವರ'- ಪುರುಷ. ಪ್ರಕೃತಿಗೂ ಮೂಲಭೂತವಾಗಿರ ತಕ್ಕಂತಹ ಚೇತನಶಕ್ತಿ. ಅದು ಪರಮ ಆತ್ಮಾ. ವಿಶ್ವಶಕ್ತಿ. ಮಹಾಶಕ್ತಿ . ವಿರಾಟ್‌ಶಕ್ತಿ ಇದನ್ನು ಆಶ್ರಯಿಸಿಕೊಂಡೇ ಇಡೀ ವಿಶ್ವ ನಿಂತಿದೆ. ವಿಶ್ವದೊಳಗೆ ಆ ಶಕ್ತಿ ತುಂಬಿಕೊಂಡಿದೆ.

ಎಲ್ಲೆಡೆ ತುಂಬಿಕೊಂಡಿರುವ ಭಗವಂತನು ನಮ್ಮ ರಕ್ಷಣೆಗೆ ಇರುವಾಗ ನಮಗೆ ಯಾವುದರ ಭಯ? ಭಗವಂತನಿಗೆ ಶರಣಾಗಿ ಸಮಸ್ಯೆಯ ಪರಿಹಾರವನ್ನು ಅವನಿಗೆ ಒಪ್ಪಿಸಿ ಬಿಡುವುದೇ ಜಾಣತನ. ನಮ್ಮ ರಕ್ಷಣೆ ನಾವು ಮಾಡಲು ಸಾಧ್ಯವೇ? ಯೋಚಿಸಿ ನಮ್ಮ ದೇಹವೇ ನಮ್ಮ ನಿಯಂತ್ರಣದಲ್ಲಿ ಇಲ್ಲ ಎಂದ ಮೇಲೆ ನಾನು ನನ್ನನ್ನು ರಕ್ಷಿಸಿಕೊಳ್ಳುತ್ತೇನೆ ಎನ್ನುವುದು ಪೊಳ್ಳುತನವಾಗುತ್ತದೆ. ಭಗವಂತನಿಗೆ ಶರಣಾಗಿ ಅವನು ಕೊಟ್ಟದ್ದನ್ನು ಭಗವತ್ ಪ್ರಸಾದವೆಂದು ಸ್ವೀಕರಿಸಿ ತೃಪ್ತಿಯಿಂದ ಬಾಳುವುದೇ ಬುದ್ಧಿವಂತಿಕೆಯಾಗಿದೆ. ಆದರೆ ನಮ್ಮ ಪಾಲಿನ ಕರ್ತವ್ಯವನ್ನು ನಿರ್ವಂಚನೆಯಿಂದ ಮಾಡಬೇಕು. ನಮ್ಮಲ್ಲಿ ಇಲ್ಲದ್ದನ್ನು ಇನ್ನೊಬ್ಬರಲ್ಲಿ ಇರುವುದನ್ನು ನೋಡಿ ನಾವು ಕರುಬಬಾರದು, ಆಸೆಪಡಬಾರದು. ಈ ಎಲ್ಲವೂ, ಎಲ್ಲವನ್ನೂ ಎಲ್ಲರಿಗೂ ಅವನು ಕೊಟ್ಟಿರುವಂತಹದ್ದು. ಯಾಕೆ ಕೊಟ್ಟ ಎಂದರೆ ಅದು ಅವನ ನಿಯತಿ ಮತ್ತು ನಮ್ಮ ಕರ್ಮ ಕಾರಣ. ಹಾಗಾಗಿ ಎಲ್ಲವೂ ಅವನದ್ದೇ. ನಮಗೆ ಸಂಬಂಧಿಸಿದ್ದಲ್ಲ. ಅವನ ಅನುಗ್ರಹದಿಂದ ಬಂದದ್ದನ್ನು ಸ್ವೀಕರಿಸಿ ಬಾಳುವುದೇ ಸಾತ್ತ್ವಿಕ ಮಾರ್ಗ. ಈ ರೀತಿಯ ಉತ್ತಮ ಜೀವನ ಮಾಡಲು ತಿಳಿಸುವುದೇ ಮೊದಲ ಶ್ಲೋಕ.

ಸಂಪತ್ತು ಬಂದ ಮೇಲೆ ಅಧಿಕಾರ ಬಂದಾಗ ಹೇಗೆ ಬದುಕಬೇಕು. ಎಂದು ಎರಡನೇ ಶ್ಲೋಕವು ವಿವರಿಸುತ್ತದೆ. ಅದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

ತಿರುಮಲೆ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀವಿಶ್ವಾವಸು ನಾಮ ಸಂವತ್ಸರ ಪುಷ್ಯ - ಮಾಘ ಮಾಸ ಸಂಚಿಕೆ

ಸಂಪುಟ:05 ಜನವರಿ - 2026 ಸಂಚಿಕೆ:06



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ತಿರುಪತಿ.

**ಪ್ರಕಾಶಕರು,ಸಂಪಾದಕರು,**
**ಪ್ರಧಾನ ಸಂಪಾದಕರು** (ಎಫ್.ಎ.ಸಿ)
ಡಾ॥ವಿ.ಜಿ.ಚೊಕ್ಕಲಿಂಗಂ,ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ ಆರ್.ವಿ. ವಿಜಯ್‌ಕುಮಾರ್,ಬಿ.ಎ. ಬಿ.ಇಡಿ
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507
ಕಾರ್ಯಾಲಯ : 0877 - 2264543
: 0877 - 2264359
ಪ್ರಧಾನ ಸಂಪಾದಕರು : 0877 - 2264363
ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ:
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org**
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಪ್ರಧಾನ ಸಂಪಾದಕರು

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಸರ್ವಜ್ಞ ಪೀಠದಲ್ಲಿ ಶೀರೂರು ಶ್ರೀಗಳು | - ಡಾ॥ ಗುರುರಾಜಪ್ರೋಶೆಟ್ಟಿಹಳ್ಳಿ | 07 |
| ತಿಲದಾನ ಮಹತ್ವ ದಿನ ಮಕರ ಸಂಕ್ರಾಂತಿ | - ಹನುಮಂತ ಮ. ದೇಶಕುಲಕರ್ಣಿ | 10 |
| ಶ್ರೀ ವೈಷ್ಣವ ಕವಯತ್ರಿ ಭಕ್ತೆ | - ಡಾ॥ ಎನ್.ಕೆ. ರಾಮಶೇಷನ್ | 13 |
| ಹರಿಕಥಾಮೃತಸಾರ ಮಹಿಮೆ ಅಪಾರ | - ಶ್ರೀಮತಿ ಪ್ರಿಯ ಪ್ರಾಣೇಶ ಹರಿದಾಸ | 16 |
| ರಥ ಸಪ್ತಮಿ | - ಎಸ್. ಗೋಪಾಲ್ | 19 |
| ಭೀಷ್ಮನ ನಮನ | - ಡಾ॥ ರೂಪಶ್ರೀ ಶಶಿಕಾಂತ್ | 21 |
| ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ | - ದಿ॥ ಬಿ. ಎನ್. ಶ್ರೀನಿವಾಸನ್ | 24 |
| ಪಟ್ರೇನಹಳ್ಳಿಯ ವೇಣುಗೋಪಾಲ ದೇವಾಲಯ | - ಕೆಂಗೇರಿ ಚಕ್ರಪಾಣಿ | 26 |
| ಪುಣ್ಯಸಂಪಾದನೆಗೆ ಪ್ರೇರಕ ಪುಷ್ಯಮಾಸ | - ಶ್ರೀಮತಿ. ವಾರುಣಿ ಹೊನ್ನಾಳಿ | 31 |
| ಸಂಸ್ಕಾರಗಳ ಮಹಿಮೆ | - ಕಲ್ಯಾಣಿ ಮೂರ್ತಿರಾಮನಾಥಪುರ | 35 |
| ಮಾಘಶುದ್ಧ ನವಮೀ ಮಧ್ವನವಮೀ | - ವಿಶ್ವೇಶಪ್ರಿಯದಾಸ | 36 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | - ಶ್ರೀಮತಿ ಎನ್. ಪಾರ್ವತಿ | 38 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್. ನರಸಿಂಹನ್ | 40 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 42 |
| ಕಾಳಿಚ್ಚಿರಾಮವಿಣ್ಣಗರಂ | - ಸೂರ್ಯವಂಶಿ | 44 |
| ರಾಶಿಫಲಗಳು | - ಶ್ರೀಮಾತಾ ಅನುಗ್ರಹ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ಗುರುವಿನ ಸೂಚನೆಗಳಿಗೆ | | |
| ಬದ್ಧನಾದವನೇ ನಿಜವಾದ ಶಿಷ್ಯ | - ಎ.ಆರ್. ರಘುರಾಮ | 48 |
| ಚಿತ್ರಕಥೆ - ಅಂತಿಮ ಉಪದೇಶ | - ಆರ್.ಕೆ.ವಿ | 52 |

**ಮುಖಚಿತ್ರ** - ಸಪ್ತವಾಹನದಲ್ಲಿ ಶ್ರೀ ಮಲೆಯಪ್ಪ ಸ್ವಾಮಿಯವರು, ತಿರುಮಲೆ
**ಹಿಂಬದಿಚಿತ್ರ**- ಪಾರ್ವೇಟಿ ಉತ್ಸವದಲ್ಲಿ ಶ್ರೀ ಮಲೆಯಪ್ಪಸ್ವಾಮಿ, ತಿರುಮಲೆ

## ಸಂಪಾದಕೀಯ

# ಸೂರ್ಯ ಸಂಕ್ರಾಂತಿ

ಆದಿತ್ಯಾನಾಮಹಂ ವಿಷ್ಣುಃ ಜ್ಯೋತಿಷಾಂ ರವಿರಂಶುಮಾನ್ ।
ಮರೀಚಿರ್ಮರುತಾಮಸ್ಮಿ ನಕ್ಷತ್ರಾಣಾಮಹಂ ಶಶೀ ॥ (ಭ.ಗೀ.10-21)

ನಾರಾಯಣ ಸ್ವರೂಪನಾದ ಸೂರ್ಯ ಭಗವಾನನು ಆರಂಭದಿಂದಲೂ ಗಗನತಲದಲ್ಲಿ ಬೆಳಗುತ್ತಾ ಪ್ರಪಂಚಕ್ಕೆ ಪ್ರಕಾಶವನ್ನು, ಉಷ್ಣವನ್ನು ಪ್ರಸಾದಿಸುತ್ತಿದ್ದಾನೆ. ಸೂರ್ಯನಿಗೆ ನೂರಾರು, ಸಾವಿರಾರು ವರ್ಷಗಳಿಂದಲೂ ಅರ್ಚನೆಗಳೊಂದಿಗೆ ಆರಾಧನೆಗಳು ನಡೆಯುತ್ತಿರುವುದು ವಿಶೇಷ ಎಂದು ಹೇಳಬಹುದು. ಶ್ರೀಮದ್ ವಿರಾಟ್ ಸ್ವರೂಪನಾದ ಶ್ರೀಮನ್ನಾರಾಯಣನ ನೇತ್ರಗಳೇ ಸೂರ್ಯದೇವ! ಅಂತಹಾ ಸೂರ್ಯನು ತಿಂಗಳಿಗೆ ಒಮ್ಮೆ ಒಂದೊಂದು ರಾಶಿಯನ್ನು ಪ್ರವೇಶಿಸುತ್ತಾನೆ.

ಈ ಸಂಚಾರವನ್ನು ಸಂಕ್ರಮಣ ಅಥವಾ ಸಂಕ್ರಾಂತಿ ಎಂದು ಕರೆಯುತ್ತಾರೆ. ಹಾಗೇ ವರ್ಷಕ್ಕೆ ಹನ್ನೆರಡು ಸಂಕ್ರಾಂತಿಗಳು ಬರುತ್ತವೆ. ಅದರಲ್ಲಿ ಮುಖ್ಯವಾದುದು ಮೇಷಸಂಕ್ರಮಣ, ಕರ್ಕಾಟಕ ಸಂಕ್ರಮಣ, ತುಲಾ ಸಂಕ್ರಮಣ, ಮಕರ ಸಂಕ್ರಮಣ, ಧನಸ್ಸು ಸಂಕ್ರಮಣದಿಂದ ಮಕರ ಸಂಕ್ರಮಣದವರೆಗೂ ಇರುವ ಮೂವತ್ತು ದಿನಗಳು ಧನುರ್ಮಾಸ ವ್ರತವನ್ನು ಆಚರಿಸುತ್ತೇವೆ. ಶ್ರೀವೈಷ್ಣವ ಸಂಪ್ರದಾಯಕ್ಕೆ ಮುಖ್ಯವಾದ ವ್ರತವೆಂದು ಹೇಳುತ್ತಾರೆ. ಸೂರ್ಯ ಗಮನವನ್ನು ಆಧರಿಸಿ ಬರುವ ಹಬ್ಬವಾದ್ದರಿಂದ ಸಂಕ್ರಾಂತಿ ಎನ್ನುತ್ತಾರೆ. ಅಷ್ಟೇ ಅಲ್ಲದೇ ಸೂರ್ಯ ಭಗವಾನನಿಗೆ ಈ ಸಮಯದಲ್ಲಿ ಪ್ರತ್ಯೇಕವಾದ ಆರಾಧನೆಗಳು ನಡೆಯುತ್ತವೆ.

ಪ್ರತ್ಯಕ್ಷ ಸಾಕ್ಷಿಯಾದ ಸೂರ್ಯನು ಸ್ವಯಂಭು. ಆತ ಗ್ರಹಗಳಿಗೇ ಅಧಿಪತಿ. ಸಹಸ್ರ ಬಾರಿ ತಿರುಗುತ್ತಾ ಏಳು ಅಶ್ವಗಳೊಂದಿಗೆ, ಬಂಗಾರದ ರಥದಲ್ಲಿ ಪ್ರಯಾಣ ಮಾಡುತ್ತಾನೆ. ಅಂತಹಾ ಸೂರ್ಯನು ಮಕರರಾಶಿಯನ್ನು ಪ್ರವೇಶಿಸುವ ಸಮಯವೇ ಸಂಕ್ರಾಂತಿ. ಜೀವನದ ಪಯಣದಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಹೊಂದಿ ಸರ್ವರಿಗೂ ಇಷ್ಟವಾದ ಸಂಕ್ರಾಂತಿಯ ಪರ್ವದಿನವಾದ ಈ ಮಕರ ಸಂಕ್ರಾಂತಿಯನ್ನು ಸ್ವರ್ಣ ಸಂಕ್ರಾಂತಿ ಎಂದೂ ಕರೆಯುತ್ತಾರೆ.

ರಥಸಪ್ತಮಿ ಹಬ್ಬದಂದು ತಿರುಮಲೆಯಲ್ಲಿ ಅತ್ಯಂತ ವೈಭವದಿಂದ ಅರ್ಧ ಬ್ರಹ್ಮೋತ್ಸವದ ಹೆಸರಿನಲ್ಲಿ ಏಳು ವಾಹನಗಳ ಮೇಲೆ ಶ್ರೀಮಲೆಯಪ್ಪಸ್ವಾಮಿ ತನ್ನ ದೇವಿಯರೊಂದಿಗೆ ನಾಲ್ಕೂ ಸನ್ನಿಧಿ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಬರುತ್ತಾ ಭಕ್ತರಿಗೆ ದರ್ಶನವನ್ನು ನೀಡುತ್ತಾ ಎಲ್ಲರನ್ನೂ ಅನುಗ್ರಹಿಸುತ್ತಾನೆ. ಆ ದಿನದಂದು ಬೆಳಗ್ಗೆಯಿಂದ ಸೂರ್ಯಪ್ರಭವಾಹನ, ಚಿಕ್ಕಶೇಷವಾಹನ, ಗರುಡವಾಹನ, ಹನುಮಂತವಾಹನದ ಮೇಲೆ ಮೆರವಣಿಗೆಯ ನಂತರ ಮಧ್ಯಾಹ್ನದಂದು ಸ್ವಾಮಿ ಪುಷ್ಕರಿಣಿಯಲ್ಲಿ ಚಕ್ರಸ್ನಾನವು ನಡೆಯುತ್ತದೆ. ನಂತರ ಮಧ್ಯಾಹ್ನದಿಂದ ಕಲ್ಪವೃಕ್ಷವಾಹನ, ಸರ್ವಭೂಪಾಲವಾಹನ, ಚಂದ್ರಪ್ರಭವಾಹನಗಳಲ್ಲಿ ಮೆರವಣಿಗೆಯಲ್ಲಿ ಬರುತ್ತಾನೆ. ಅಂತಹಾ ಶ್ರೀ ವೇಂಕಟೇಶ್ವರನನ್ನು ದರ್ಶಿಸಿ ಸ್ವಾಮಿಯವರ ಆಶೀರ್ವಾದ ಪಡೆದು ಧನ್ಯರಾಗೋಣ.

॥ಗೋವಿಂದ..ಗೋವಿಂದಾ...ಗೋವಿಂದಾ!!॥




# ಸರ್ವಜ್ಞ ಪೀಠದಲ್ಲಿ ಶೀರೂರು ಶ್ರೀಗಳು


**ಡಾ।। ಗುರುರಾಜ ಪೋಶೆಟ್ಟಿಹಳ್ಳಿ**
**97393 69621**


**ನೋಡ ಬನ್ನಿರೋ ಉಡುಪಿ ಶ್ರೀ ಕೃಷ್ಣನ ಸಿರಿ ಮಹಿಮೆಯ :**

ಭಗವಾನ್ ಪರಶುರಾಮನಿಂದ ನಿರ್ಮಿತ. ಈ ಭೂಮಿಯಲ್ಲಿ ಅತ್ಯಂತ ಪ್ರಸಿದ್ಧವಾದದ್ದು. ರಜತ ಪೀಠಪುರ, ಅದು ಇಂದು ಉಡುಪಿ ಯೆಂದೇ ಖ್ಯಾತವಾಗಿದೆ. ಚೆಲುವ ಕೃಷ್ಣನ ಊರು ಉಡುಪಿ ಪರ್ಯಾಯದ ಸಂಭ್ರಮದಲ್ಲಿ ಮಿಂದೇಳಲು ಸಜ್ಜಾಗಿದೆ. ಉಡುಪಿ ವಾಸಿಗಳು ಮಾತ್ರವಲ್ಲ. ಕೃಷ್ಣನ ದರ್ಶನಕ್ಕೆ ಬರುವ ಪರವೂರ ಯಾತ್ರಿಗಳಲ್ಲೂ ಪರ್ಯಾಯದ ಸಡಗರ ಪ್ರತಿಫಲಿಸುತ್ತಿದೆ. ಎರಡು ವರ್ಷಗಳಿಗೊಮ್ಮೆ ನಡೆಯುವ ಈ ಉತ್ಸವ ಮೊದಲು ಉಡುಪಿಯ ಹಬ್ಬವಾಗಿತ್ತು. ತುಳು ನಾಡಿನ ಹಬ್ಬವಾಗಿತ್ತು. ಅಲ್ಲಿಂದ ಕನ್ನಡನಾಡಿನ ಹಬ್ಬವಾಯಿತು. ಭಾರತದೇಶದ ಹಬ್ಬವಾಯಿತು. ಈಗ ವಿಶ್ವದ ಹಬ್ಬವಾಗುವತ್ತ ದಾಪುಗಾಲಿಡುತ್ತಿದೆ. ಮಧ್ವಾಚಾರ್ಯರಿಂದ ಪ್ರಾರಂಭಿಸಲ್ಪಟ್ಟ ಶ್ರೀಕೃಷ್ಣ ಪೂಜೆಯ ಪರ್ಯಾಯ ಪೀಠವನ್ನು ಅಲಂಕರಿಸುವ ಭಾಗ್ಯ ಈ ಬಾರಿ ಅಷ್ಟಮಠಗಳಲ್ಲಿ ಒಂದಾದ ಶೀರೂರು ಮಠಕ್ಕೆ ದೊರೆಯಲಿದೆ. ಅದರೊಂದಿಗೆ ಜ. 18 ಕ್ಕೆ ಶೀರೂರು ಮಠವು ಜಾಗತಿಕ ಐತಿಹಾಸಿಕ ಘಟನೆಯೊಂದಕ್ಕೆ ಸಾಕ್ಷಿಯಾಗಲಿದೆ. ಪ್ರಸ್ತುತ ಸರ್ವಜ್ಞ ಪೀಠವೇರುವ ಶೀರೂರು ಮಠದ ಶ್ರೀವೇದವರ್ಧನ ತೀರ್ಥ ಶ್ರೀಪಾದರದ್ದು ಮೊದಲನೇ ಪರ್ಯಾಯವಾಗಿದೆ.

ಮಧ್ವಾಚಾರ್ಯರು ಮಠ, ಸಂಸ್ಥಾನವನ್ನು ಕಟ್ಟಿದವರಲ್ಲ. ತನ್ನ ಸನ್ಯಾಸಿ ಶಿಷ್ಯರಿಗೆ ಅವರು ನೀಡಿದ ಆಸ್ತಿಯೆಂದರೆ ದೇವರ ಪೆಟ್ಟಿಗೆ ದಂಡ. ಜೋಳಿಗೆ ಮಾತ್ರ ಶಿಷ್ಯ ಸಂಪತ್ತು ವೃದ್ಧಿಯಾದಂತೆ ಮಠಗಳು ರೂಪುಗೊಂಡವು. ಶ್ರೀಕೃಷ್ಣನ ಆರಾಧನೆಯ ಹೊಣೆ ಹೊತ್ತು ಉಡುಪಿಯಲ್ಲೆ ನೆಲೆ ನಿಂತ ಅವರ ಎಂಟು ಮಂದಿ ಶಿಷ್ಯ ಯತಿಗಳ ಹೆಸರು ಆಶ್ರಮ ಜ್ಯೇಷ್ಠತೆಯಂತೆ ಹೀಗಿದೆ: ಶ್ರೀಹೃಷಿಕೇಶತೀರ್ಥ (ಫಲಿಮಾರು ಮಠ) ಶ್ರೀನರಸಿಂಹ ತೀರ್ಥ (ಅದಮಾರು ಮಠ) ಶ್ರೀಜನಾರ್ದನ ತೀರ್ಥ (ಕೃಷ್ಣಾಪುರ ಮಠ) ಶ್ರೀಉಪೇಂದ್ರ ತೀರ್ಥ (ಪುತ್ತಿಗೆ ಮಠ) ಶ್ರೀವಾಮನತೀರ್ಥ (ಶೀರೂರು ಮಠ) ಶ್ರೀ ವಿಷ್ಣುತೀರ್ಥ (ಸೋದೆ ಮಠ). ಶ್ರೀರಾಮತೀರ್ಥ (ಕಾಣಿಯೂರು ಮಠ) ಶ್ರೀಅಧೋಕ್ಷಜತೀರ್ಥ (ಪೇಜಾವರ ಮಠ).

ಮಠಗಳಿಗೆ ಮೂಲತಃ ಉಂಬಳಿ ಬಂದ ಆಸ್ತಿಯಿರುವ ಗ್ರಾಮ ಅಥವಾ ಹಳ್ಳಿಯ ಹೆಸರಿನಲ್ಲೆ ಮಠಗಳನ್ನು ಕರೆಯುವುದು ಇಲ್ಲಿನ ರೂಢಿ. ಉದಾ: ಪೇಜಾವರ ಗ್ರಾಮದಲ್ಲಿ ಆಸ್ತಿ ಹೊಂದಿದ ಮಠ ಪೇಜಾವರ ಮಠ. ಸೋದೆಯನ್ನು ಹೊರತು ಪಡಿಸಿ ಉಳಿದ ಏಳೂ ಗ್ರಾಮಗಳು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿವೆ. ಸೋದೆ ಮಠದ ಹಿಂದಿನ ಹೆಸರು ಕುಂಭಾಸಿ ಮಠ. ಈ ಗ್ರಾಮವೂ ಈಗಿನ ಉಡುಪಿ ಜಿಲ್ಲೆಯಲ್ಲಿದೆ. ಮುಂದೆ ವಾದಿರಾಜರ ಕಾಲದಲ್ಲಿ ಉತ್ತರ ಕನ್ನಡದ ಸೋದೆಯಲ್ಲಿ ಮಠ ಸ್ಥಾಪನೆಯಾದ ಬಳಿಕ ಅದು ಸೋದೆಮಠ ಎಂದು ಖ್ಯಾತಿ ಪಡೆಯಿತು.

**ಇಲ್ಲಿಯ ಪೂಜೆಯ ಕ್ರಮವೂ ವಿಶಿಷ್ಟವಾದದ್ದು :**

ಪ್ರತಿದಿನವೂ 14 ಪೂಜೆಗಳನ್ನು ಶ್ರೀ ಕೃಷ್ಣನಿಗೆ ಯತಿಗಳು ಸಮರ್ಪಿಸುತ್ತಾರೆ. ದಿನವೂ ಬೆಳಗ್ಗೆ 4 ರಿಂದ ರಾತ್ರಿ 10 ರ ವರೆಗೆ ಶ್ರೀಕೃಷ್ಣ ಮಠದ ಬಾಗಿಲು ತೆರೆದಿರುತ್ತದೆ. ಪವಿತ್ರವಾದ ಮಧ್ವಸರೋವರದಲ್ಲಿ ಸ್ನಾನ ಮಾಡಿ ಶುದ್ಧರಾಗಿ ನಿರ್ಮಾಲ್ಯಾದಿ ಪೂಜೆಗಳನ್ನು ಬೇರೆ ಬೇರೆ ಅಷ್ಟಮಠದ ಯತಿಗಳು ನೆರವೇರಿಸುತ್ತಾರೆ. ಪರ್ಯಾಯ ಪೀಠಾಧೀಶರಾದ ಯತಿಗಳು ಮಧ್ಯಾಹ್ನದ ಮಹಾಪೂಜೆ ಮತ್ತು ರಾತ್ರಿಯ ಚಾಮರಸೇವೆಯನ್ನು ಸಮರ್ಪಿಸುತ್ತಾರೆ. ಪರ್ಯಾಯ ಮಹೋ






ತ್ಸವ ಪೂರ್ವ ತಯಾರಿಯೇ ವಿಶಿಷ್ಟವಾದದ್ದು. ಪರ್ಯಾಯ ಪೀಠವೇರುವ ಒಂದು ವರ್ಷದ ಮೊದಲೇ ಅನೇಕ ಧಾರ್ಮಿಕ ಕಾರ್ಯಕ್ರಮಗಳು ಪ್ರಾರಂಭವಾಗುವುವು.

ಶ್ರೀಕೃಷ್ಣ ಅನ್ನಬ್ರಹ್ಮನಾಗಿ ದೇಹಕ್ಕೂ, ಮನಕ್ಕೂ ಬೇಕಾದ ಶುದ್ಧಾನ್ನವನ್ನು ಕ್ಷೇತ್ರದಲ್ಲಿ ಆಚಾರ್ಯಮಧ್ವರ ಕಾಲದಿಂದ ಇಂದಿನವರೆಗೂ ತನ್ನೆಲ್ಲ ಭಕ್ತರಿಗೆ ಪ್ರಸಾದವಾಗಿ ನೀಡುತ್ತಿರುವನು. ನಿತ್ಯಾನ್ನದಾನಕ್ಕೆ ಕಡಿಮೆಯಿರದಂತೆ ಆಚಾರ್ಯಮಧ್ವರು ಅಕ್ಷಯ ಪಾತ್ರೆಯನ್ನು ಬೆಳ್ಳಿಯ ಸಟ್ಟುಗವನ್ನು ನೀಡಿದ್ದಾರೆ. ಅದಿಂದು ಶ್ರೀಕೃಷ್ಣನ ಜೊತೆಯಲ್ಲೇ ಪ್ರತಿನಿತ್ಯ ಪೂಜೆಗೊಳ್ಳುತ್ತಿದೆ. ದೇಶವಿದೇಶಗಳಿಂದ ತನ್ನಡೆಗೆ ತತ್ವಚಿಂತನೆಗಾಗಿ ಮತ್ತೆ ಶ್ರೀಕೃಷ್ಣನ ಸನ್ನಿಧಾನಕ್ಕಾಗಿ ಎಲ್ಲರೂ ಬರುವಂಥ ಉಡುಪಿ ಮತ್ತೆ ಮತ್ತೆ ಸ್ವಾಗತವನ್ನು ಸಾರುತ್ತಿದೆ.

**ಕೃಷ್ಣನ ಪೂಜೆಯ ಆಧ್ಯಾತ್ಮ :**

ಉಡುಪಿಯಲ್ಲಿ ಎಲ್ಲವೂ ಅದ್ವಿತೀಯ ಅನುಪಮ ಉಡುಪಿಯ ಕೃಷ್ಣನಂತಹ ಕೃಷ್ಣಮೂರ್ತಿ ಇನ್ನೊಂದಿಲ್ಲ. ಕೃಷ್ಣನಷ್ಟೇ ಅಲ್ಲ. ಉಡುಪಿಯ ಕೃಷ್ಣನ ಅರ್ಚಕರೂ ವಿಲಕ್ಷಣ. ದೇಶದ ಇನ್ನಾವುದೇ ಮಂದಿರಗಳಲ್ಲಿ ಯತಿಗಳಿಂದ ಪೂಜೆಗೊಳ್ಳುವ ದೇವತಾ ಮೂರ್ತಿಯಿಲ್ಲ. ಉಡುಪಿಯ ಕೃಷ್ಣನೊಬ್ಬನೇ ಯತಿಗಳಿಂದ ಮಾತ್ರ ಪೂಜೆಗೊಳ್ಳುವವನು ಎಂಥ ವಿಚಿತ್ರವಿದು! ಷೋಡಶ ಸ್ತ್ರೀಸಹಸ್ರೇಶನನ್ನು ಗೃಹಸ್ಥರು ಮುಟ್ಟುವಂತಿಲ್ಲ. ಅವನಿಗೆ ಯತಿಗಳೇ ಬೇಕು. ಷೋಡಶ ಸ್ತ್ರೀ ಸಹಸ್ರೇಶನಾದರೂ ಅನಾದಿ ಬ್ರಹ್ಮಚಾರಿಯಲ್ಲವೇ ಅವನು!

ಪೂಜಾ ಮಂದಿರವೂ ವಿಲಕ್ಷಣವೇ ಮಠಗಳು ದೇವಾಲಯಗಳಲ್ಲ. ದೇವಾಲಯಗಳು ಮಠಗಳಲ್ಲ ಇದು ಬೇರೆಡೆಯ ದೇವಮಂದಿರಗಳ ಕಥೆ. ಉಡುಪಿಯ ಕೃಷ್ಣನ ಮಂದಿರ ಮಾತ್ರ ಮಠವೂ ಹೌದು ದೇವಾಲಯವೂ ಹೌದು. ಇಂಥ ಒಂದು ಪೂಜಾ ಮಂದಿರ ಉಡುಪಿಯಲ್ಲಿ ಮಾತ್ರವೆ ಇರುವುದು ಸಾಧ್ಯ. ಇಲ್ಲಿ ಕೃಷ್ಣನನ್ನು ಯತಿಗಳು ಮಾತ್ರವೇ ಪೂಜೆ ಮಾಡುತ್ತಾರೆ. ಆದರಿಂದ ಇದು ಕೃಷ್ಣಮಠ. ಆದರೆ ಬರಿಯ ಮಠವಷ್ಟೇ ಅಲ್ಲ. ಏಕೆಂದರೆ ಈ ಮಠಕ್ಕೆಂದೇ ಪ್ರತ್ಯೇಕವಾದ ಯತಿಯೊಬ್ಬರಿಲ್ಲ. ಜತೆಗೆ ಇಲ್ಲಿ ಕೃಷ್ಣ ಸಾರ್ವಜನಿಕರಿಂದಲೂ ಸೇವೆಕೊಳ್ಳುತ್ತಾನೆ.

ಅದರಿಂದ ಇದು ದೇವಾಲಯ ಕೂಡಾ. ಅದಕ್ಕೆಂದೇ ಇದು ಅಷ್ಟಮಠಗಳ ಅಧಿಕಾರಕ್ಕೆ ಒಳಪಟ್ಟು ದೇವಾಲಯ ಎಂದು ಸರ್ವೋಚ್ಚನ್ಯಾಯಾಲಯ ತೀರ್ಪು ನೀಡಿದೆ.ಹೀಗೆ ಇದು ಸಾರ್ವಜನಿಕರ ಸೇವೆಗೆ ತೆರೆದಿಟ್ಟ ದೇವಾಲಯ ಮತ್ತು ಮಠ. ಅದರಿಂದಲೇ ಕನಕದಾಸರಂಥ ಮಹನೀಯರು ಈ ಮಠದ ಅಚ್ಚಿನ್ನ ಭಕ್ತರಾಗುವುದು ಸಾಧ್ಯವಾಯಿತು.

ಬಾಡ-ಕಾಗಿನೆಲೆಗಳಿಗಿಂತ ಕನಕದಾಸರಿಗೆ ಈ ಕೃಷ್ಣನ ಉಡುಪಿ ಹೆಚ್ಚು ಆತ್ಮೀಯವಾಯಿತು. ಉಡುಪಿ ಅವರ ಇತಿಹಾಸವನ್ನು ಚಿರಂತನಗೊಳಿಸಿತು. ಹೀಗೆ ಉಡುಪಿಯ ಕೃಷ್ಣನೂ ಅನನ್ಯ. ಅವನ ಮಂದಿರವೂ ಅನನ್ಯ. ಅವನ ಪೂಜಕರೂ ಅನನ್ಯ ಅಷ್ಟೇ ಅಲ್ಲ, ಅವನ ಪೂಜಾಕ್ರಮವೂ ಅನನ್ಯ.

ಪರ್ಯಾಯ ಮೆರವಣಿಗೆ ಜೋಡುಕಟ್ಟೆಯಿಂದ ಉಷಃಕಾಲದಲ್ಲಿ ಹೊರಟು ಪರ್ಯಾಯ ಮಠಾಧೀಶರ ಹೊರತು ಭಾವೀಪರ್ಯಾಯ ಪೀಠಾಧೀಶರ ಸಹಿತ ಸಪ್ತ ಮಠಾಧೀಶರನ್ನು ಮೇನೆಗಳಲ್ಲಿ ಭಕ್ತಾದಿಗಳು ಹೊತ್ತು ತರುತ್ತಾರೆ. ಸ್ತಬ್ಧ ಚಿತ್ರಗಳು ವಾದ್ಯಘೋಷಗಳು ಮೆರವಣಿಗೆಗೆ ಕಳೆ ನೀಡುತ್ತವೆ.

ಮೆರವಣಿಗೆಯಲ್ಲಿ ಸಾಗಿ ಬಂದ ಭಾವೀ ಪರ್ಯಾಯ ಪೀಠಾಧಿಪತಿಗಳು ಸರ್ವದೇವರ ದರ್ಶನ ಪಡೆದ ಬಳಿಕ ಬೆಳಗಿನ ಮುಹೂರ್ತದಲ್ಲಿ ಸರ್ವಜ್ಞ ಪೀಠದಲ್ಲಿ ಕೂರಿಸಿ, ಅಕ್ಷಯ ಪಾತ್ರೆ-ಸಟ್ಟುಗ ಹಸ್ತಾಂತರಿಸುತ್ತಾರೆ ಸರ್ವೋಪಚಾರದ ಬಳಿಕ ಬಡಮಾಳಿಗೆಯಲ್ಲಿ ಅರಳು ಗದ್ದುಗೆಯೇರುತ್ತಾರೆ, ಬಳಿಕ ರಾಜಾಂಗಣದಲ್ಲಿ ಪರ್ಯಾಯ ದರ್ಬಾರ್ ವೈಭವ.

ಅಷ್ಟ ಮಠದ ಯತಿಗಳು, ಗಣ್ಯರ ಉಪಸ್ಥಿತಿಯಲ್ಲಿ ಆಸ್ಥಾನ ವಿದ್ವಾಂಸರ ಘೋಷಣೆಯ,ಯತಿಗಳಿಗೆ ವಿವಿಧ ಕ್ಷೇತ್ರಗಳ ಪ್ರಸಾದ ಸಮರ್ಪಣೆ, ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ನಡೆಯುತ್ತದೆ.

**ಮತ್ತೆ ಬಂದಿದೇ ಶೀರೂರು ಪರ್ಯಾಯ:**

ಶೀರೂರು ಮಠವು ಉಡುಪಿಯ ಅಷ್ಟ ಮಠಗಳಲ್ಲಿ ಒಂದಾಗಿದೆ,ಇದನ್ನು ತತ್ವಜ್ಞಾನಿ ಮಧ್ವಾಚಾರ್ಯರು ಸ್ಥಾಪಿಸಿದರು. ಮಠದ ಪಟ್ಟದ ದೇವತೆ ಶ್ರೀದೇವಿ ಮತ್ತು ಭೂದೇವಿ ಸಹಿತ ವಿಠಲ ವಿಗ್ರಹವಾಗಿದ್ದು, ಮುಖ್ಯ ಶಾಖೆ ಶಿರೂರು ಗ್ರಾಮದಲ್ಲಿದೆ. ಒಂದು ಶಾಖೆ ಉಡುಪಿ ಕೃಷ್ಣ ಮಠದ ಕನಕ ದೇವಾಲಯದ ಮುಂದೆಯೂ ಇದೆ.

ಶೀರೂರು ಮಠವು ಆಧ್ಯಾತ್ಮಿಕ ಜ್ಞಾನ ಮತ್ತು ಭಕ್ತಿಯ ಸಂಕೇತವಾಗಿ ನಿಂತಿವೆ. ಶತಮಾನಗಳ ಪವಿತ್ರ ಸಂಪ್ರದಾಯಗಳನ್ನು ಮುಂದಕ್ಕೆ ಕೊಂಡೊಯ್ಯುತ್ತದೆ. ಆಧ್ಯಾತ್ಮಿಕ ಗುರುಗಳ ಶಾಶ್ವತ ಬೋಧನೆಗಳನ್ನು ಸಂರಕ್ಷಿಸುವ ಮತ್ತು ಪ್ರಚಾರ ಮಾಡುವ ದೈವಿಕ ಧ್ಯೇಯದೊಂದಿಗೆ ಸ್ಥಾಪನೆಯಾಗಿದ್ದು, ಪ್ರಾಚೀನ ಜ್ಞಾನ ಮತ್ತು ಸಮಕಾಲೀನ ಅನ್ವೇಷಕರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ.

ಪೂರ್ವ ಪೀಠಾಧಿಪತಿ ಶ್ರೀಲಕ್ಷ್ಮಿವರತೀರ್ಥರು ಅತ್ಯುನ್ನತ ಮಟ್ಟದ ವೈಭವದಿಂದ ಕೃಷ್ಣದೇವರ ಅಲಂಕಾರದ ವಿಷಯದಲ್ಲಿ ಅವರು ಹೆಚ್ಚಿನ ಪರಿಣತಿಯನ್ನು ಹೊಂದಿ ಕೃಷ್ಣನಿಗೆ 300 ವಿಧದ ಅಲಂಕಾರಗಳನ್ನು ಮಾಡುವ ದಾಖಲೆಯನ್ನು ಸೃಷ್ಟಿಸಿದ್ದರು. 2010-12 ರಿಂದ ಅವರು ತಮ್ಮ ಮೂರನೇ ಮತ್ತು ಕೊನೆಯ ಪರ್ಯಾಯವನ್ನು ಮಾಡಿ ವಿಲಂಬಿ ಸಂವತ್ಸರದ ಆಷಾಢ ಶುದ್ಧ ಸಪ್ತಮಿಯಂದು (19 7-2018 ) ಬೃಂದಾವನಸ್ಥರಾದರು.

ಶ್ರೀವೇದವರ್ಧನ ತೀರ್ಥರು ಶ್ರೀಮಠದ 30ನೇ ಪೀಠಾಧಿಪಾತಿಗಳಾಗಿದ್ದು, ಶ್ರೀಮಠದ ದಿವಾನರಾದ ಡಾ.




ಉದಯಕುಮಾರ್ ಸರಳತ್ತಾಯ ಮತ್ತು ಶ್ರೀಮತಿ. ವಿದ್ಯಾ ದಂಪತಿಗಳಿಗೆ ಅನಿರುದ್ಧ ಸರಳತ್ತಾಯರಾಗಿ 2005 ರಲ್ಲಿ ಜನಿಸಿದರು. ಅವರಿಗೆ ಸೋದೆ ಮಠದ ಶ್ರೀ ವಿಶ್ವವಲ್ಲಭ ತೀರ್ಥರಿಂದ ಸನ್ಯಾಸ ದೀಕ್ಷೆಯನ್ನು ನೀಡಲಾಯಿತು. (14-05-2021) ಪ್ರಸ್ತುತ ಕೃಷ್ಣಾಪುರ ಮಠದ ಶ್ರೀವಿದ್ಯಾಸಾಗರ ತೀರ್ಥರ ಮಾರ್ಗ ದರ್ಶನದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ವೇದವರ್ಧನ ತೀರ್ಥರು ತಮ್ಮ ಮೊದಲನೇ ಪರ್ಯಾಯವನ್ನು 2026-28 ರಿಂದ ನಡೆಸಲಿದ್ದಾರೆ.

ಶೀರೂರು ಮಠಾಧೀಶರಾದ ಶ್ರೀ ಶ್ರೀ ವೇದವರ್ಧನ ತೀರ್ಥ ಶ್ರೀಪಾದರ ಪ್ರಥಮ ಪರ್ಯಾಯ ಸ್ವಾಗತ ಸಮಿತಿ ಗೌರವಾಧ್ಯಕ್ಷರಾಗಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ॥ಡಿ.ವೀರೇಂದ್ರ ಹೆಗ್ಗಡೆಯವರು ಅಧ್ಯಕ್ಷರಾಗಿ ಯಶಪಾಲ್ ಸುವರ್ಣ ಭಗವದ್ಭಕ್ತರನ್ನು ಸ್ವಾಗತಿಸುತ್ತಿದ್ದಾರೆ.


# ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**


**ಹೆಲ್ಮೆಟ್ ಧರಿಸಿ ವಾಹನ ನಡೆಸಿ**

# ತಿಲದಾನ ಮಹತ್ವ ದಿನ ಮಕರ ಸಂಕ್ರಾಂತಿ

– ಹನುಮಂತ ಮ. ದೇಶಕುಲಕರ್ಣಿ
94803 64915



ಸಂಕ್ರಾಂತಿ ಹಬ್ಬ ದೇಶ ವಿದೇಶಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಆಚರಿಸುವ ಒಂದು ಸುಗ್ಗಿ ಹಬ್ಬ. ಕನ್ನಡ ನಾಡಿನಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಸಂಕ್ರಾಂತಿ ಎಂದು ಆಚರಿಸಿದರೆ,ಅದನ್ನು ತಮಿಳುನಾಡಿನಲ್ಲಿ ಪೊಂಗಲ್ ಎಂದು ಆಚರಿಸುತ್ತಾರೆ. ಸೂರ್ಯನು ಮಕರಸಂಕ್ರಾಂತಿಯಂದು ಮಕರ ರಾಶಿಯನ್ನು ಪ್ರವೇಶ ಮಾಡುತ್ತಾನೆ. ಆದ್ದರಿಂದಲೇ ಉತ್ತರ ಭಾರತದಲ್ಲಿ ಈ ಹಬ್ಬಕ್ಕೆ ಮಕರ ಸಂಕ್ರಾಂತಿಯೆಂದು ಹೆಸರು.



ದಕ್ಷಿಣದತ್ತ ಚಲಿಸುತ್ತಿದ್ದ ಸೂರ್ಯ ಇನ್ನು ಮುಂದೆ ಉತ್ತರ ದಿಕ್ಕಿಗೆ ತಿರುಗಿ ಚಲಿಸುತ್ತಾನೆ. ಹೀಗೆ ಸೂರ್ಯ ಪಥ (ದಾರಿ) ಬದಲಾವಣೆಯಿಂದ ನಮ್ಮ ದೇಶದಲ್ಲಿ ಕೊರೆಯುವ ಚಳಿ ಕಡಿಮೆಯಾಗಿ ಬಿಸಿಲಿನ ತಾಪವನ್ನು ಮತ್ತು ಹಗಲು ಹೆಚ್ಚಾಗಲು ಪ್ರಾರಂಭಿಸುತ್ತದೆ. ಈ ಹಬ್ಬವನ್ನು ಭೋಗಿ ಹಬ್ಬ, ಸಂಕ್ರಮಣ ಮತ್ತು ಕನುಹಬ್ಬ ಎಂದು ನಾನಾ ರೀತಿಯಿಂದ ಕರೆಯುತ್ತಾರೆ. ಇದನ್ನು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ (ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳಗಳಲ್ಲಿ) ವಿವಿಧ ರೀತಿಯಲ್ಲಿ ಆಚರಿಸುತ್ತಾರೆ. ಇದು ಸುಗ್ಗಿಯನ್ನು ಸಾರುವ ಹಬ್ಬ. ಸಂಕ್ರಾಂತಿ ಹಬ್ಬದ ಹಿಂದಿನ ದಿನವೇ ಭೋಗಿ ಹಬ್ಬ. ಅಂದು ಹಳೆಯದನ್ನು ತೊರೆದು ಹೊಸದನ್ನು ಪಡೆದು ಸಂತೋಷಪಡುವ ಸಡಗರ. ಮನೆಯನ್ನು ಶುದ್ಧಿಗೊಳಿಸುವುದು, ಮನೆ ಮಂದಿಯೆಲ್ಲಾ ಎಣ್ಣೆ ಸ್ನಾನ ಮಾಡಿ ನೂತನ ವಸ್ತ್ರಗಳನ್ನು ಧರಿಸುವುದು, ಮೂರನೆಯ ದಿನ ಹೊಸ ಫಸಲನ್ನು ಉಂಡು ಸಂತೋಷಪಡಲು ಎಲ್ಲಾ ಸನ್ನದ್ಧತೆ ನಡೆಸುತ್ತಾರೆ.

ಭೂಮಿಯಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳಿಗೆ ಸೂರ್ಯನೇ ಆಧಾರ. ಇಂತಹ ಸೂರ್ಯ ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವ ಸಂಧಿಕಾಲಕ್ಕೆ ಸಂಕ್ರಾಂತಿ ಅಥವಾ ಸಂಕ್ರಮಣ ಅಂತ ಕರೆಯುತ್ತಾರೆ. ಮಕರ ಸಂಕ್ರಾಂತಿಯಂದು ಸೂರ್ಯನು ಮಕರ ರಾಶಿಗೆ ಪ್ರವೇಶಿಸುತ್ತಾನೆ. ಇದೇ ಸಮಯ ಉತ್ತರಾಯಣ ಮತ್ತು ದಕ್ಷಿಣಾಯಣ ಪ್ರಾರಂಭದ ದಿನಗಳಾದ್ದರಿಂದ ಇನ್ನು ವಿಶೇಷ ಮಹತ್ವ ಹೊಂದಿದೆ. ಅತಿ ಉದ್ದದ ದಿನ ಹಾಗೂ ಅತಿ ಸಣ್ಣ ರಾತ್ರಿ ಅಥವಾ ಅತಿ ಚಿಕ್ಕ ದಿನ ಹಾಗೂ ಅತಿ ಉದ್ದದ ರಾತ್ರಿ ಪ್ರಮಾಣದ ಕಾಲವನ್ನು ಹೊಂದಿದ ದಿನ. ಭೂಮಿಯ ಮಕರ ಸಂಕ್ರಾಂತಿ ವೃತ್ತದ ಮೇಲೆ ಸೂರ್ಯನು ನೇರವಾಗಿ ಪ್ರಕಾಶಿಸಲಾರಂಭಿಸುವ ಕಾಲ.

ಉತ್ತರಾಯಣ ಆರಂಭ ಕಾಲದಲ್ಲಿ ವೈದಿಕರು ಸ್ನಾನ, ತರ್ಪಣ ಮೊದಲಾದುವನ್ನು ಮಾಡುವುದಿದೆ. ಸೂರ್ಯ ಅಸ್ತನಾಗುವುದಕ್ಕೆ ಸ್ವಲ್ಪಕಾಲ ಮೊದಲು ಮಕರರಾಶಿಯನ್ನು ಪ್ರವೇಶಿಸಿದರೆ ಆ ದಿವಸದಲ್ಲೂ ಸಾಯಂಕಾಲ ನಂತರ ಪ್ರವೇಶಿಸಿದರೆ ಮಾರನೆಯ ದಿವಸದ ಹಗಲಿನಲ್ಲೂ ಮಕರಸಂಕ್ರಮಣ ಪುಣ್ಯಕಾಲವಾಗುತ್ತದೆ. ಇದರ ಅವಧಿ ಪ್ರವೇಶ ಕಾಲದಿಂದ ಮುಂದೆ ಎಂಟು ಗಂಟೆಗಳವರೆಗೆ ಕೆಲವರು ಹನ್ನೆರಡು ಗಂಟೆ ಕಾಲದವರೆಗೂ ಇರುತ್ತದೆಂದೂ ಅಭಿಪ್ರಾಯ

ಪಡುತ್ತಾರೆ. ಇದನ್ನು ಮಕರಸಂಕ್ರಾಂತಿ ಎಂದೂ ಕರೆಯುತ್ತಾರೆ. ಈ ದಿವಸ ತಿಲದಾನ ಮಾಡುವುದು ವಿಶೇಷ. ಅದಕ್ಕಾಗಿಯೇ ಇಂದಿಗೂ ಮಕರಸಂಕ್ರಾಂತಿಯಂದು ಎಳ್ಳಿಗೆ ಬೆಲ್ಲ ಮೊದಲಾದವನ್ನು ಕೂಡಿಸಿ ಎಲ್ಲರಿಗೂ ತಿನ್ನಲು ಕೊಡುತ್ತಾರೆ.


ಸಂಕ್ರಮಣದಲ್ಲಿ ಎಳ್ಳಿನ ದಾನ ಅಕ್ಷಯದಾನ ಫಲವನ್ನು ಕೊಡುತ್ತದೆಂದು ಯಮನೇ ಹೇಳಿರುತ್ತಾನೆ. ಯಮದೂತರು ತಪ್ಪಿನಿಂದ ಒಬ್ಬ ಬ್ರಾಹ್ಮಣನನ್ನು ನರಕಕ್ಕೆ ಒಯ್ದಿದ್ದರು. ಯಮನು ಅವನನ್ನು ಸತ್ಕರಿಸಿ, ಅವನೊಡನೆ ಧರ್ಮಸಂವಾದ ನಡೆಸಿ ಹಿಂದಕ್ಕೆ ಕಳಿಸಿಕೊಡುತ್ತಾನೆ. ಈ ಸಂದರ್ಭದಲ್ಲಿ ತಿಲದಾನದ ಮಹತ್ವವು ವಿಶೇಷವಾಗಿ ಹೇಳಲ್ಪಟ್ಟಿದೆ. ಎಳ್ಳಿನಿಂದ ಮಾಡಿದ ಗೋವನ್ನು ದಾನ ಮಾಡಿ, ಗೋದಾನದ ಫಲವನ್ನು ಪಡೆಯಬಹುದು.

**ತಿಲೋದ್ವರ್ತೀ ತಿಲಸ್ನಾಯೀ**
**ತಿಲಹೋಮೀ ತಿಲಪ್ರದಃ।**
**ತಿಲಭುಕ್ ತಿಲವಾಪೀ ಚ**
**ಷಟ್ತಿಲೇ ನಾವಸೀದತಿ ॥**

ಎಳ್ಳಿನ ಎಣ್ಣೆಯಿಂದ ದೀಪ ಹಚ್ಚುವುದು, ಎಳ್ಳೆಣ್ಣೆಯನ್ನು ಹಚ್ಚಿಕೊಂಡು ಸ್ನಾನ ಮಾಡುವುದು, ಎಳ್ಳನ್ನು ಹೋಮ ಮಾಡುವುದು, ದಾನ ಮಾಡುವುದು, ತಿನ್ನುವುದು ಮತ್ತು ಬಿತ್ತುವುದು, ಹೀಗೆ ಈ ಆರು ವಿಧಗಳಿಂದಲೂ ಎಳ್ಳನ್ನು ಬಳಸಿಕೊಳ್ಳುವವನು ನಾಶವಾಗುವುದಿಲ್ಲ. ಶನಿಗ್ರಹದ ಪೀಡಾಪರಿಹಾರಾರ್ಥವಾಗಿ ಎಳ್ಳಿನ ದೀಪ ಹಚ್ಚುವ ವಾಡಿಕೆಯಿದೆ. ಎಳ್ಳಿನ ದಾನವು ಪವಿತ್ರವೆಂದರೂ, ಬರಿಯ ಎಳ್ಳನ್ನು ದಾನವಾಗಿ ಯಾರೂ ಸ್ವೀಕರಿಸುವುದಿಲ್ಲ.

**ಬ್ರಾಹ್ಮಣಃ ಪ್ರತಿಗೃಹ್ಣೀಯಾತ್**
**ವೃತ್ತ್ಯರ್ಥಂ ಸಾಧುತಸ್ತಥಾ।**
**ಅತ್ಯಲ್ಪಮಪಿ ಮಾತಂಗ**
**ತಿಲತಾಹಾಂಶ್ಯ ವರ್ಜಯೇತ್ ॥**

ಎಂದು ಧರ್ಮಶಾಸ್ತ್ರ ಹೇಳುತ್ತದೆ. ಆನೆ, ಎಳ್ಳು ಮತ್ತು ಕಬ್ಬಿಣಗಳ ದಾನವನ್ನು ತೆಗೆದುಕೊಳ್ಳಬಾರದೆಂದು ಇಲ್ಲಿ ನಿಷೇಧಿಸಿದೆ. ಆದ್ದರಿಂದ ಬರಿಯ ಎಳ್ಳನ್ನು ದಾನ ಕೊಡಲು ಹೋದರೆ ಯಾರೂ ತೆಗೆದುಕೊಳ್ಳುವುದಿಲ್ಲ. ಅದಕ್ಕಾಗಿಯೇ ನಮ್ಮ ಹಿರಿಯರು ಉತ್ತರಾಯಣ ಪುಣ್ಯ ಕಾಲದಲ್ಲಿ ಈ ರೀತಿ ಎಳ್ಳಿನ ಜೊತೆಗೆ ಹುರಿದಕಡಲೆ ಕಾಯಿ, ಬೆಲ್ಲ, ಹುರಿಗಡಲೆ ಮತ್ತು ಕೊಬ್ಬರಿಯನ್ನು ಸೇರಿಸುವುದರಿಂದ



ಅದರ ಪುಷ್ಟಿ ಮತ್ತು ರುಚಿ ಗಳೆರಡೂ ಹೆಚ್ಚುತ್ತದೆ. ಈ ಐದನ್ನೂ ಸೇರಿಸಿ ಮಾಡಿದ ಎಳ್ಳನ್ನು ಪಂಚಕಜ್ಜಾಯ ವೆಂದೂ ಕರೆಯುತ್ತಾರೆ. ಗಣಪತಿಗೂ ಇದು ಪ್ರಿಯವಾದ ತಿನಿಸು.

ಹಿಂದೂ ಪ್ರತಿ ಸಂವತ್ಸರ (ವರ್ಷ)ವನ್ನು ಸೂರ್ಯನ ಸಂಚಲನವನ್ನು ಅನುಸರಿಸಿ, ಎರಡು ಅಯನಗಳಾಗಿ ವಿಂಗಡಿಸಲಾಗಿದೆ. 1.ಉತ್ತರಾಯಣ. 2. ದಕ್ಷಿಣಾಯನ. ಸೂರ್ಯನು ಉತ್ತರ ಧ್ರುವ ರೇಖೆಯಲ್ಲಿ ಕಾಣಿಸುವ ಕಾಲ-ಉತ್ತರಾಯಣ. ಇದು ಹಿಂದೆ ಮಕರ ಸಂಕ್ರಾಂತಿಯಿಂದ ಕಟಕ ಸಂಕ್ರಾಂತಿಯವರೆಗೆ ಅಥವಾ ಸಾಮಾನ್ಯವಾಗಿ ಪುಷ್ಯಮಾಸದಿಂದ ಆಷಾಢಮಾಸದವರೆಗೆ 6 ತಿಂಗಳ ಕಾಲದ ಅವಧಿಗೆ ಹೊಂದುತ್ತಿತ್ತು. ಆದರೆ, ಭೂಮಿಯ ಧ್ರುವಚಲನೆ ಅಥವಾ ವಕ್ರಾಯನದ ಪರಿಣಾಮವಾಗಿ, ಉತ್ತರಾಯಣವೂ, ಸೂರ್ಯನ ಮಕರಸಂಕ್ರಮಣವೂ ಈಗ ಬೇರೆ ಬೇರೆ ದಿನಗಳಂದು ನಡೆಯುತ್ತವೆ.

ಆದರೂ, ಉತ್ತರಾಯಣ ಪುಣ್ಯಕಾಲವನ್ನು ಈ ಹಿಂದಿನಂತೆಯೇ ಆಚರಿಸಲಾಗುತ್ತಿದೆ. ಉತ್ತರಾಯಣದ 6 ತಿಂಗಳ ಪುಣ್ಯ ಕಾಲದಲ್ಲಿ ಸ್ವರ್ಗದ ಬಾಗಿಲು ತೆರೆದಿರುತ್ತದೆಂದೂ ಈ ಕಾಲದಲ್ಲಿ ಸಾಯುವವರು ನೇರ ಸ್ವರ್ಗಕ್ಕೆ ಹೋಗುತ್ತಾರೆಂದೂ ನಂಬಿಕೆ ಇದೆ. ಭೀಷ್ಮನು ಶರಶಯ್ಯೆಯ ಮೇಲೆ ಮಲಗಿದ್ದಾಗಲೂ ಇಚ್ಛಾಮರಣದ ವರವನ್ನು ಪಡೆದಿದ್ದ ಕಾರಣ ಉತ್ತರಾಯಣ ಪುಣ್ಯಕಾಲ ಬರುವವರೆಗೂ ಕಾದಿದ್ದು, ಉತ್ತರಾಯಣ ಪುಣ್ಯಕಾಲ ಬಂದ ನಂತರ ದೇಹತ್ಯಾಗ ಮಾಡಿದನೆಂಬ ವಿಚಾರ ಕಾಣಸಿಗುತ್ತದೆ.

ಮಕರ ಮೊದಲಾಗಿ ಆರು ರಾಶಿಗಳಲ್ಲಿ ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ಸಂಚರಿಸುವ ಕಾಲ. ಪ್ರಾಚೀನ ಸಂಪ್ರದಾಯದ ಪ್ರಕಾರ ಇದು ಸಾಮಾನ್ಯವಾಗಿ ಜನವರಿ 13 ಅಥವಾ 14 ನೆಯ ದಿವಸ ತೊಡಗಿ ಜುಲೈ 16 ಅಥವಾ 17 ನೆಯ ದಿವಸ ಕೊನೆಗೊಳ್ಳುತ್ತಿತ್ತು. ಉತ್ತರಾಯಣಾರಂಭ ಪುಷ್ಯಮಾಸದಲ್ಲಿ ಶಿಶಿರ, ವಸಂತ, ಗ್ರೀಷ್ಮ ಋತುಗಳು ಉತ್ತರಾಯಣ ಕಾಲದಲ್ಲಿ ಬರುತ್ತವೆ. ಇವು ನಿರಯನ ಉತ್ತರಾಯಣದ ಪ್ರಾರಂಭ ಮತ್ತು ಮುಗಿಯುವ ಕಾಲಗಳು.

ಅಯನಾಂಶದ ಕಾರಣದಿಂದ ಇದು ಕಾಲಕಾಲಕ್ಕೆ ಬದಲಾಗುತ್ತದೆ. ಆದರೂ ಸಾಯನ ಉತ್ತರಾಯಣ ಕಾಲ ಕರ್ಮಾಚರಣೆಗೆ ಗ್ರಾಹ್ಯವಾಗಿರುವುದಿಲ್ಲ. ಒಮ್ಮೆ ಉತ್ತರಾಯಣ ಪ್ರಾರಂಭಕಾಲ ಮಾಘ ಶುಕ್ಲ ಸಪ್ತಮೀ ದಿವಸ ಇದ್ದ ಕಾರಣದಿಂದ ಅಂದು ಅದರ ದ್ಯೋತಕವಾಗಿ ಸೂರ್ಯ ಮಂಡಲದಿಂದ ಕೂಡಿದ ರಥದಲ್ಲಿ ಭಗವಂತನನ್ನು ಸೂರ್ಯೋದಯ ಕಾಲಕ್ಕೆ ಸರಿಯಾಗಿ ರಥಾರೋಹಣ ಮಾಡಿಸುವುದು ಇಂದಿಗೂ ಆಚರಣೆಯಲ್ಲಿದೆ.

ದನಕರುಗಳನ್ನು ತೊಳೆದು ಬಣ್ಣ ಮೊದಲಾದುವುಗಳಿಂದ ಶೃಂಗರಿಸಿ ಕಿಚ್ಚು ಹಾಯಿಸುತ್ತಾರೆ. ಸಂಕ್ರಾಂತಿ ಎಂಬುದು ಒಂದು ದೇವತೆ. ಅದಕ್ಕೆ ಎಂಟು ಬಾಹುಗಳೂ ನಾಲ್ಕು ತಲೆಗಳೂ ಇವೆಯೆಂದು ಪ್ರತೀತಿ. (ಕೆಲವರು ಮೂರು ತಲೆಗಳೆಂದೂ ಮತ್ತೆ ಕೆಲವರು ಎರಡು ತಲೆಗಳೆಂದೂ ಹೇಳುತ್ತಾರೆ.) ಈ ದೇವತೆ ಬೃಹದಾಕಾರದಿಂದ ಕೂಡಿ ನೋಡಲು ಭಯಂಕರಳಾಗಿರುತ್ತಾಳೆ.

ಇವಳು ಪ್ರಪಂಚದ ಯಾವ ಭಾಗದಲ್ಲಿ ಸಂಕ್ರಾಂತಿಯಂದು ಗೋಚರಿಸುತ್ತಾಳೋ ಆ ಭಾಗಕ್ಕೆ ತೊಂದರೆಯೆಂದೂ ಇವಳ ವಾಹನ ಇವಳು ಧರಿಸಿರುವ ಪದಾರ್ಥಗಳಿಂದ ಎಲ್ಲಕ್ಕೂ ಹಾನಿಯುಂಟಾಗುತ್ತದೆಂದೂ ಶಾಸ್ತ್ರ ಹೇಳುತ್ತದೆ.

ಈ ಫಲಗಳನ್ನು ಯುಗಾದಿಯ ದಿನದಂದು ಕೇಳಿ ತಿಳಿದುಕೊಳ್ಳುವ ರೂಢಿ ಇದೆ. ಉತ್ತರಾಯಣದ ಆರು ತಿಂಗಳ ಅವಧಿಯನ್ನು ದೇವತೆಗಳಿಗೆ ಒಂದು ಹಗಲಿಗೆ ಸಮಾನವೆಂದು ಜ್ಯೋತಿಶಾಸ್ತ್ರದಲ್ಲಿ ಪರಿಗಣಿಸಲಾಗಿದೆ. ಮದುವೆ, ಮುಂಜಿ, ದೇವ ಪ್ರತಿಷ್ಠೆ ಮೊದಲಾದ ಕಾರ್ಯಗಳನ್ನು ವಿಶೇಷವಾಗಿ ಮಾಡಲು ಈ ಅವಧಿ ಪ್ರಶಸ್ತ ಈ ಕಾಲವನ್ನು ಅಗ್ನಿ, ಜ್ಯೋತಿಸ್ಸು, ಅಹಸ್ಸು, ಶುಕ್ಲ ಎಂದೂ ಇದರಲ್ಲಿ ಮೃತರಾದ ಯೋಗಿಗಳಿಗೆ ಪುನರಾವೃತ್ತಿ ಇಲ್ಲವೆಂದೂ ಶ್ರೀಭಗವದ್ಗೀತೆ ಸಾರುತ್ತಿದೆ. ಇದಕ್ಕಾಗಿಯೇ ಭೀಷ್ಮ ಯುದ್ಧದಲ್ಲಿ ಬಾಣಗಳಿಗೆ ತುತ್ತಾಗಿ ಬಿದ್ದರೂ ಇಚ್ಛಾಮರಣಿಯಾದ ಕಾರಣ ಪ್ರಾಣೋತ್ಕ್ರಮಣಕ್ಕಾಗಿ ಉತ್ತರಾಯಣವನ್ನೇ ನಿರೀಕ್ಷಿಸುತ್ತ ಅರ್ಜುನಕೃತ ಶರಶಯ್ಯೆಯಲ್ಲಿ ಮಲಗಿದ್ದನೆಂದು ಮಹಾಭಾರತದಲ್ಲಿದೆ.

ಸಂಕ್ರಾಂತಿ ಹಬ್ಬ ದೇಶ ವಿದೇಶಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಆಚರಿಸುವ ಒಂದು ಸುಗ್ಗಿ ಹಬ್ಬ. ಆಂಧ್ರ,ತಮಿಳುನಾಡುಗಳಲ್ಲಿ ಸಂಕ್ರಾಂತಿ, ಕನು, ಭೋಗಿ ಎಂದು ಆಚರಿಸಲ್ಪಡುತ್ತದೆ. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿ ಸುವ ಕಾಲವನ್ನು "ಸಂಕ್ರಮಣ ಅಥವಾ ಸಂಕ್ರಾಂತಿ'' ಎಂದು ಜ್ಯೋತಿಷ್ಯಾ ಧಾರದ ಮೇಲೆ ಪರಿಗಣಿಸಲಾಗುವುದು.

ಸಂಕ್ರಾಂತಿಯ ಒಂದು ವಿಧದಲ್ಲಿ ಸೂರ್ಯನ ಆರಾಧನೆಯಾಗಿದ್ದು, ಉತ್ತರಾಯಣ ದಕ್ಷಿಣಾಯಣಗಳ ಪ್ರಾರಂಭದ ದಿನವಾದ್ದರಿಂದ ಹೆಚ್ಚಿನ ಮಹತ್ವವನ್ನು ಪಡೆದಿದೆ. ಸಾಮಾನ್ಯವಾಗಿ ಸುಗ್ಗಿಯ ಸಂದರ್ಭದಲ್ಲಿ ಆಚರಿಸುವ ಸಂಕ್ರಾಂತಿ ಹಬ್ಬವು ಭಾರತೀಯ ಕಾಲಮಾನ ಪುಷ್ಯ ಮಾಸದಲ್ಲಿ ಬರುವುದು. ಉತ್ತರಾಯಣದ ಪುಣ್ಯಕಾಲವೆಂದೂ (ದೇವತೆಗಳ ಕಾಲವೆಂದೂ) ಸಹ ಕರೆಯಲಾಗುತ್ತದೆ.

ಮಕರ ಸಂಕ್ರಾಂತಿಯ ದಿನದಿಂದ ದೇವತೆಗಳಿಗೆ ಹಗಲು ಮತ್ತು ರಾಕ್ಷಸರಿಗೆ ರಾತ್ರಿ ಆಗುವುದೆಂದು ನಮ್ಮ ಪುರಾಣಗಳು ಹೇಳುತ್ತವೆ. ಆದ್ದರಿಂದಲೇ ಹಿರಿಯರು "ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡು'' ಏಕೆಂದರೆ ದೇವತೆಗಳು ಸದಾ ಜಾಗೃತರಿರುತ್ತಾರೆ ಅಂತ ಹೇಳುತ್ತಾರೆ. ಸಂಕ್ರಾಂತಿ ಹಬ್ಬದ ಹಿಂದಿನ ದಿನವೇ ಭೋಗಿ ಹಬ್ಬ. ಅಂದು ಹಳೆಯದನ್ನು ತೊರೆದು ಹೊಸದನ್ನು ಪಡೆದು ಸಂತೋಷಪಡುವ ಸಡಗರ. ಮನೆಯನ್ನು ಶುದ್ಧಿಗೊಳಿಸುವುದು.

ಮನೆ ಮಂದಿಯೆಲ್ಲಾ ಎಣ್ಣೆ ಸ್ನಾನ ಮಾಡಿ ನೂತನ ವಸ್ತ್ರಗಳನ್ನು ಧರಿಸುವುದು, ಮೂರನೆಯ ದಿನ ಹೊಸ ಫಸಲನ್ನು ಉಂಡು ಸಂತೋಷಪಡಲು ಎಲ್ಲಾ ಸನ್ನದ್ಧತೆ ನಡೆಸುತ್ತಾರೆ. ಗ್ರಾಮೀಣ ಭಾಗದಲ್ಲಿ ರೈತರು ತಾವು ಬೆಳೆದ ವರ್ಷದ ಮೊದಲ ಬೆಳೆಯನ್ನು ದೇವರಿಗೆ ಅರ್ಪಿಸಿ ತದನಂತರ ಮುಂದಿನ ದಿನಗಳಲ್ಲಿ ತಮಗೆ ಒಳ್ಳೆ ಬೆಳೆ ಬರಲಿ ಅಂತ ದೇವರಲ್ಲಿ ಪ್ರಾರ್ಥಿಸುತ್ತಾರೆ.

ಈ ಹಬ್ಬದ ಸಂದರ್ಭದಲ್ಲಿ ಭಕ್ತರು ಪುಣ್ಯ ನದಿಗಳೆಂದು ಹೆಸರುವಾಸಿಯಾದ ಗಂಗಾ, ಕಾವೇರಿ ಮೊದಲಾದವುಗಳಲ್ಲಿ ಸ್ನಾನ ಮಾಡುವುದು ಉಂಟು. ಶಾಸ್ತ್ರದೃಷ್ಟಿಯಿಂದ ಈ ಹಬ್ಬದಂದು ಕಪ್ಪು ಎಳ್ಳಿನಿಂದ ಸ್ನಾನ ಮಾಡಿ ಬ್ರಾಹ್ಮಣರಿಗೆ ಎಳ್ಳುದಾನವನ್ನು ಮಾಡುತ್ತಾರೆ. ಸಂಜೆಯ ಹೊತ್ತು ದೇವಸ್ಥಾನಕ್ಕೆ ತೆರಳಿ ಎಳ್ಳಿನ ದೀಪ ಹಚ್ಚಬೇಕು. ಈ ದಿನ ಮಾಡಿದ ದಾನದಿಂದ ಸೂರ್ಯನು ಆಜನ್ಮ ಪರ್ಯಂತ ಅನುಗ್ರಹಿಸುತ್ತಾನೆಂಬ ನಂಬಿಕೆಯು ಇದೆ. ಅಲಹಾಬಾದಿನಲ್ಲಿ ಈ ಸಂದರ್ಭದಲ್ಲಿ ಕುಂಭಮೇಳ ನಡೆಯುವುದನ್ನು ಕಾಣಬಹುದು.

ಎಳ್ಳು, ಬೆಲ್ಲವನ್ನು ಊರಿನಲ್ಲೆಲ್ಲಾ ಹಂಚುವುದು. ಇದರೊಂದಿಗೆ ಬೇರೆ ದಿನಗಳಲ್ಲಿ ಎಳ್ಳನ್ನು ಬೇರೆಯವರಿಗೆ ಕೊಡುವುದಾಗಲೀ ಅವರಿಂದ ಪಡೆಯುವುದಾಗಲೀ ಶುಭಕರವಲ್ಲ. ಎಳ್ಳು ಧಾನ್ಯ ಏನಿದ್ದರೂ ಋಣಾನುಬಂಧ ಸಂಕೇತವಾಗಿರುವುದರಿಂದ ಅದನ್ನು ನೆಂಟರಿಷ್ಟರೆಲ್ಲರಿಗೂ ಆ ದಿನ ಹಂಚುವುದು ಮುಖ್ಯವಾಗಿ ಬಾಂಧವ್ಯ ನಿರಂತರವಾಗಿರಲಿ ಎಂಬುದನ್ನು ಆ ದಿನ ಕೇಳುತ್ತೇವೆ.

ಗ್ರಾಮೀಣ ಭಾಗದಲ್ಲಿ ರೈತರು ತಾವು ಬೆಳೆದ ವರ್ಷದ ಮೊದಲ ಬೆಳೆಯನ್ನು ದೇವರಿಗೆ ಅರ್ಪಿಸಿ ತದನಂತರದ ಮುಂದಿನ ದಿನಗಳಲ್ಲಿ ತಮಗೆ ಒಳ್ಳೆ ಬೆಳೆ ಬರಲಿ ಅಂತ ದೇವರಲ್ಲಿ ಪ್ರಾರ್ಥಿಸುತ್ತಾರೆ. ತಮ್ಮ ದನಕರುಗಳಿಗೆ ಮೈತೊಳೆದು ಸಿಂಗರಿಸಿ ಮೆರೆವಣಿಗೆ ಮಾಡುತ್ತಾರೆ. ಸಂಜೆ ಬೆಂಕಿ ಹಾಕಿ ಕಿಚ್ಚು ಹಾಯಿಸುತ್ತಾರೆ.



# ಶ್ರೀ ವೈಷ್ಣವ ಕವಯತ್ರಿ ಭಕ್ತೆ

– ಡಾ।। ಎನ್.ಕೆ. ರಾಮಶೇಷನ್
82771 46110



ಆಳ್ವಾರರಲ್ಲಿ "ಸ್ತ್ರೀ" ತನ್ನ ಪರಮ ಕೃಷ್ಣ ಭಕ್ತಿ-ಆಂತರಿಕ ತಪಸ್ಸಿನಿಂದ ಆಳ್ವಾರ್ ಶ್ರೇಣಿಗೇರಿ ಪರಮಾತ್ಮನನ್ನು ಪತಿಯಾಗಿ ವರಿಸಿದ ದಿವ್ಯ ಚೇತನ ಗೋದಾದೇವಿ ಅಥವಾ ಆಂಡಾಳ್ ಭಗವಂತನನ್ನೇ ತನ್ನ ಭಕ್ತಿ ಪ್ರೇಮದಿಂದ ಆಳುವವಳು ಆಂಡಾಳ್.

ಪೆರಿಯಾಳ್ವಾರ್ ಅವರು ತುಲಸೀ ಹೂ ಉದ್ಯಾನದಲ್ಲಿ ಸಂಚರಿಸುವಾಗ ತುಲಸಿ ಪಾತಿಯಲ್ಲಿ ಲಭಿಸಿದ ಮುದ್ದು ಮಗು ಗೋದಾ. ಪೆರಿಯಾಳ್ವಾರ್ ಅವರ ಸಾಕು ಮಗಳು ಹಾಗೆಯೇ ಕಪ್ಪುನೀಳ ಸುಂದರ ಕೇಶರಾಶಿ ಉಳ್ಳವಳಾದ್ದರಿಂದ "ಪೂಂಕುಳಲ್ ಕೋದೈ" ಎಂದೇ ಪ್ರಶಂಸಿತೆ. ಅದೇ ರೀತಿ, ಗೋದಾ ಎಂದರೆ ಭೂದೇವಿ ಅಂಶ, ಭೂದೇವಿಯ ಕೊಡುಗೆ (ಸೀತಾದೇವಿ ಜನಕರಾಜನಿಗೆ ದೊರೆತಂತೆ ಪೆರಿಯಾಳ್ವಾರಿಗೆ ಗೋದೆ ಲಭಿಸಿದ್ದು. ತಾನೊಲಿದ ಶ್ರೀರಂಗನನ್ನೇ ಹಾಡಿದಳು, ಪತಿಯಾಗಿ ಪಡೆದು ಲೀನಳಾದಳು.

ಆಂಡಾಳ್ ರಚಿಸಿ ಹಾಡಿರುವ ಒಂದು ಭಕ್ತಿ ಕಾವ್ಯ "ತಿರುಪ್ಪಾವೈ" ಪ್ರತಿ ವರ್ಷದ ಡಿಸೆಂಬರ್ ಧನುರ್ಮಾಸ ಮಾಗಿ ಹೇಮಂತ ಋತುವಿನ ಸಮಯ ಮೂವತ್ತು ದಿನ ದಿನವೊಂದಕ್ಕೆ ಒಂದು ಪದ್ಯದಂತೆ ಮೂವತ್ತು ಪದ್ಯ ಹಾಡುವ ಸಂಪ್ರದಾಯ "ಮಾಸಾನಾಂ ಮಾರ್ಗಶೀರ್ಷೋರ್ಸ್ಮಿ" ಎನ್ನುತ್ತಾನೆ ಗೀತಾಚಾರ್ಯ. ಈ ಮಾಸದಲ್ಲಿ ಆಳ್ವಾರರ ಮಾರ್ಗಶಿರಮಾಸ ನಾನು, ಅರ್ಜುನ-ಭಕ್ತರು ಎಚ್ಚೆತ್ತು ತಮ್ಮ ಆಹ್ನಿಕದ ಜೊತೆ ವಿಶೇಷ ಸಾಧನೆ ಮಾಡುವ ತಿಂಗಳು, ತಿರುಪ್ಪಾವೈ ಕಾವ್ಯದಂತೆಯೇ ಆಂಡಾಳ್ ಹಾಡಿರುವ ಇನ್ನೊಂದು, "ನಾಚ್ಚಿಯಾರ್ ತಿರುಮೊಳಿ" ಅಥವಾ ನಾಯಕೀ ಗೀತೆ - 143 ಪದ್ಯಗಳುಳ್ಳ ಕಾವ್ಯ.

ಶ್ರೀ ವಿಲ್ಲಿಪುತ್ತೂರು, ಆಂಡಾಳ್ ಜನಿಸಿದ ಪರಿಸರ, ಇಂದು ಶಾಂತವಾಗಿ ಇರುವ ಪ್ರಕೃತಿ ಪರಿಸರ. ಪೆರಿಯಾಳ್ವಾರರು ಗೋದಾ ದೇವಿಯನ್ನು ಆದರ್ಶ ಹೆಣ್ಣು ಮಗಳಂತೆ ಬೆಳೆಸಿದರೆಂದರೆ ಉತ್ಪ್ರೇಕ್ಷೆಯಲ್ಲ. ಈಗಲೂ ಆ ತುಲಸೀ ಹೂತೋಟ, ಅಲ್ಲಿ ಒಂದು ಪುಟ್ಟ ಬಾವಿ, ಆಂಡಾಳ್ ತಾನು ಮುಡಿದುಕೊಂಡ ಹೂ ತುಲಸಿ ಮಾಲೆಯನ್ನು ಆ ನೀರಿನ ಪ್ರತಿಬಿಂಬದಲ್ಲಿ ನೋಡಿಕೊಳ್ಳುತ್ತಿದ್ದಳಂತೆ.

ಮಗಳು ಬೆಳೆದಂತೆ ಅವಳಿಗೆ ಪುರಾಣ,ಭಾರತ, ಭಾಗವತ, ಎಲ್ಲ ಕಥೆಗಳನ್ನು ಪೆರಿಯಾಳ್ವಾರ್ ವಿವರಿಸುತ್ತಿದ್ದರು. ಹಾಗೆಯೇ ಆಕೆ ಸೇವೆಗೋಸ್ಕರ ತುಲಸಿ, ಹೂ ಮಾಲೆಹಾರ ಸಿದ್ಧಪಡಿಸುವ ರೂಢಿ ಇಟ್ಟುಕೊಂಡು ಆಳ್ವಾರರ ಹಗುರಾಯಿತು.

ಒಮ್ಮೆ ಗೋದಾ, ಆಳ್ವಾರರು ಮನೆಯಲ್ಲಿ ಇರದಾಗ ತುಲಸೀಮಾಲೆ ಕಟ್ಟಿ ತಾನು ಮೊದಲು ಮುಡಿದು ಕನ್ನಡಿಯಲ್ಲಿ ನೋಡಿಕೊಂಡು ತನ್ನ ಅಲಂಕಾರದಿಂದ ಪರಮಾತ್ಮ ಸಂತೋಷಪಡುವನೆಂದು ಭಾವಿಸಿ, ಮಾಲೆ



ಯನ್ನು ಮತ್ತೆ ಹೂಬುಟ್ಟಿಯಲ್ಲಿ ಇರಿಸುತ್ತಿದ್ದಳು, ಎಂದಿನಂತೆ ಆಳ್ವಾರರು ಮಾಲೆಯನ್ನು ದೇವರಿಗೆ ಅರ್ಪಿಸುವಾಗ ಏನೊ ಒಂದು ವಿಶೇಷ ಕಾಣಿಸಿಕೊಂಡಿರುವಂತೆ ಭಾಸ !ಗೋದೆ ಗುಟ್ಟಾಗಿ ಹೂತುಲಸಿಮಾಲೆ ದೇವರಿಗೆ ಅರ್ಪಿಸುವುದು ಮುಂದುವರಿಯಿತು.

ಒಂದು ದಿನ, ಅರ್ಚಕರು, ದೇವರಿಗೆ ಹೂ ಅರ್ಪಿಸುವಾಗ ಅದರಲ್ಲಿ ಒಂದು ನೀಳವಾದ ಕೂದಲನ್ನು ಕಂಡರು. ಪೆರಿಯಾಳ್ವಾರರಿಗೂ ತೋರಿಸಿದರು, ಆಳ್ವಾರರು ನೊಂದರು.

ಆ ಹೊತ್ತು ಭಗವಂತನಿಗೆ ತುಲಸಿಹೂ ಅರ್ಪಿಸಲಿಲ್ಲ. ಭಾಗವತ ಅಪಚಾರ ಮಾಡಿದೆನೇ ಎಂಬುವ ನೋವು ಆಳ್ವಾರರಿಗೆ! ಮರುದಿನ ಆಳ್ವಾರರು ಏಕೋ ಹೊರ ಹೋದವರು ಬೇಗನೆ ಮನೆಗೆ ಮರಳಿ, ನೋಡುತ್ತಾರೆ,

ಆಂಡಾಳ್ ಹೂವನ್ನು ತಾನು ಮೊದಲು ಮುಡಿದು, ಅನಂತರ ಬುಟ್ಟಿಯಲ್ಲಿ ಇಡುವುದನ್ನು! ಆಳ್ವಾರರು ಏನೂ ಹೇಳಲಿಲ್ಲ. ಗೋದಾದೇವಿಗೂ ದುಃಖವಾಯಿತು.

ಆದರೆ ಅಚ್ಚರಿಯೆಂದರೆ ಆ ರಾತ್ರಿಯೇ ದೇವರು ಆಳ್ವಾರರಿಗೆ ಸ್ವಪ್ನಮುಖೇನ ತಿಳಿಸಿದ. ಆಳ್ವಾರರೆ, ನಿಮ್ಮ ಮುಗ್ಧ ಮಗಳು ಭಕ್ತಿಯಿಂದ ತಾನು ಮೊದಲು ಮುಡಿದು ಅನಂತರ ನನಗೆ ಅರ್ಪಿಸುವುದೇ ನನಗೆ ಭಾಗ್ಯವಾದದ್ದು.

ಶುದ್ಧ ಭಕ್ತಿ ಮುಖ್ಯ ಅಲ್ಲವೇ? ಅದೇ ಸಮಯ ಅರ್ಚಕರಿಗೂ ಸ್ವಾಮಿ ಕನಸಿನಲ್ಲಿ ಕಾಣಿಸಿಕೊಂಡದ್ದು! ಬೆಳಗಾಯಿತು. ಅಂದಿನಿಂದ ಗೋದಾ''ಶೂಡಿಕುಡುತ್ತ ನಾಚ್ಚಿಯಾರ್'' ಎಂದರೆ ಹೂಮುಡಿದು ಅನಂತರ ದೇವರಿಗೆ ಅರ್ಪಿಸಿದ ಶ್ರೇಷ್ಠ ಭಕ್ತೆ ಎಂಬುದಾಗಿ. ಆಳ್ವಾರರು ಮಗಳಿಗೆ ಮದುವೆಗೆಂದು ವರನನ್ನು ಹುಡುಕಲು ಪ್ರಾರಂಭಿಸಿದಾಗ ಗೋದಾ ತಾನು ಶ್ರೀರಂಗನನ್ನೇ ವರಿಸುವ ದೃಢಸಂಕಲ್ಪ ಮಾಡಿದ್ದೇನೆ ಎಂದು ನುಡಿದಳು.

ಇದು ಆಳ್ವಾರರಿಗೆ ಸಮಸ್ಯೆಯೇ! ಈ ಕಲಗಾಲದಲ್ಲಿ ಇಂಥದು ನಡೆದೀತೆ?ಮತ್ತೆ ಭಗವಂತನನೇ ಆಳ್ವಾರಿಗೆ ಆದೇಶಿಸಿ ಯೋಚಿಸಿದಿರಿ. ಗೋದಾದೇವಿಯನ್ನು ಮದುವೆ ಹೆಣ್ಣಿನಂತೆ ಸಿಂಗರಿಸಿ, ದಿಬ್ಬಣದಲ್ಲಿ ನನ್ನ ಸನ್ನಿಧಿಗೆ ಕರೆತನ್ನಿರಿ. ಮುಂದಿನ ನೀನೇ ಗಮನಿಸುವಿರಂತೆ ಆಳ್ವಾರರೇ!

ಆಳ್ವಾರರು ಮಾಡಿದ್ದ ಹಾಗೆಯೇ ಗೋದಾದೇವಿಯನ್ನು ವಧುವಿನಂತೆ ಸಿಂಗರಿಸಿ ಶ್ರೀವಿಲ್ಲಿಪುತ್ತೂರಿಂದ ಶ್ರೀರಂಗನ ಸನ್ನಿಧಿಗೆ ಕರೆತಂದರು ದೇವಳದ ಒಳಬಿಡು ಸನ್ನಿಧಿಗೆ ಬಂದ ಆಂಡಾಳ್, ಸ್ವಾಮಿಯ ಪದ್ಯಂಕವೇರಿ ಲೀನಲಾದಳು.

ಕ್ಷಣ ಕಾಲ ಕಂಬನಿಗರೆದು ಆಳ್ವಾರರು ಧನ್ಯತಾಭಾವ ತಳೆದರು. ಆಂಡಾಳ್ ಅವತರಿಸಿದ ಶುಭದಿನ "ತಿರುವಾಡಿಪ್ಪೂರಂ"ಎಂದೇ ಆಚರಣೆ ವಿಶೇಷತಃ ಶ್ರೀವೈಷ್ಣವರಲ್ಲಿ. ಹಾಗೆಯೇ ಈ ಬಿಡಿ ಶ್ಲೋಕ ಹೇಳುತ್ತಾರೆ.

ಆಷಾಢೇ ಪೂರ್ವ ಫಲ್ಗುಣ್ಯಾಂ ತುಲಸೀ ಕಾನನೋದ್ಭವಾಂ।
ಪಾಂಡ್ಯೇ ವಿಶ್ವಂಭರಾಂ ಗೋದಾಂ ವಂದೇ ಶ್ರೀರಂಗ
ನಾಯಕೀಂ॥

ಆಂಡಾಳ್ ರಚಿಸಿರುವ ತಿರುಪ್ಪಾವೈ ಮತ್ತು ನಾಯಕೀ ಗೀತೆಯನ್ನು ಪಠಿಸುತ್ತಾರೆ. ತಿರುಪ್ಪಾವೈ ಬಹು ಪ್ರಸಿದ್ಧ ಭಕ್ತಿ ಕಾವ್ಯ. ಅಲ್ಲಿ ಇಲ್ಲದ ವಿವರ ಇನ್ನಾವ ಶಾಸ್ತ್ರ ಗ್ರಂಥ ಸಾಹಿತ್ಯ

ದಲ್ಲೂ ಇಲ್ಲ. ರಾಮಾನುಜಾಚಾರ್ಯರೇ ದಿನ ನಿತ್ಯ ತಮ್ಮ ಭಿಕ್ಷೆಯ ಸಂದರ್ಭದಲ್ಲಿ ತಿರುಪ್ಪಾವೈ ಹಾಡಿಕೊಂಡು ಹೋಗುತ್ತಿದ್ದ ಅವರಿಗೆ "ತಿರುಪ್ಪಾವೈಜೀಯರ್"ಎಂದೇ ಹೆಸರಾಗಿತ್ತು. ಒಂದು ಪದ್ಯವಷ್ಟೇ ಉದ್ಧರಿಸಿ, ತಾತ್ಪರ್ಯ ತಿಳಿಸುತ್ತಾ ಈ ಲೇಖನಕ್ಕೆ ಗೋದಾಮಂಗಳ ಹಾಡಬಹುದೇನೋ.

ಶಿತ್ತಂ ಶಿರುಕಾಲೇ ವಂದ್ ಉನ್ನೈಶೇವಿತ್ತುನ್
ಪೊತ್ತಾಮಲ್ಯೆಯಡಿಯೇ ಪೋತ್ತುಂ ಪ್ದೆರುಳ್ ಕೇಳಾಯ್
ಪೆತ್ತಮೆಯ್‌ತ್ತುಣ್ಣುಮ್ ಕುಲತ್ತಿಲ್ ಪಿರಂದನೀ
ಕುತ್ತೇವಳೆಂಗಳ್ಯೆ ಕೊಳ್ಳಾದುಮ್ ಪೋಗಾಡು
ಇತ್ತೃಪರೈಕೊಳ್ವಾನ್ ಅನ್ರುಂ ಕಾಣ್‌ಗೋವಿಂದಾ!
ಎತ್ತೈಕ್ಕುಂ ಏಳೇಳು ಪಿರವಿಕ್ಕುಂ ಉನ್‌ತನ್ನೋಡು
ಉತ್ತೋಮೇಯಾವೋನ್ ಉನಕ್ಕೇ ನಾಮ್ ಆಳ್‌ಚೆಯ ವೋಂ
ಮುತ್ತೈನು ಕಾಮಂಗಳ್ ಮಾತ್ತೇಲೋ ಎಂಬಾವಾಯ್ ಮತ್ತೇಲೋ

ಬೆಳ್ಳಂಬೆಳಗ್ಗೆ-ಪ್ರತ್ಯೂಷ ಸಮಯದಲ್ಲಿ ಎಚ್ಚೊತ್ತು ನಾವೆಲ್ಲರೂ ಬಂದು ನಮಿಸುತ್ತ ನಿನ್ನ ಪಾದಕಮಲಗಳಿಗೆ ಮಂಗಳಾಶಾಸನ ಹಾಡುವ ನಮ್ಮ ಉದ್ದೇಶವನ್ನು ದಯಮಾಡಿ ಕೇಳಿಸಿತೋ,ಪಾಲಿಸು-ಹಸುಗಳನ್ನು ಮೇಯಿಸಿ,ಜೀವಿಸುವ (ಗೊಲ್ಲರ) ಕುಲದಲ್ಲಿ ಅವತರಿಸಿದ ನೀನು ನಮ್ಮನ್ನು ನಿನ್ನ ಅಂತರಂಗ ಕೈಂಕರ್ಯಕ್ಕೆ ಸೇರಿಸಿಕೊಳ್ಳದೆ ಇರಕೂಡದು ಕಂಡೆಯಾ.

ನಮಗೆ ಬರೀ 'ಪರೈ'(ವಾದ್ಯ) ಮಾತ್ರವಲ್ಲ ಇನ್ನೂ ನಮಗೆ ನಿನ್ನ ಕೃಪೆ ಗೋವಿಂದ ಗೋವಿಂದ ಏಳೇಳು ಜನ್ಮಕ್ಕೆ ನಾವು ನಿನ್ನೊಂದಿಗೇ ಅನನ್ಯಾರ್ಹರಾಗಿಯೇ ಇದ್ದು ಬಾಳುವೆವು ಗೋವಿಂದ! ನಿತ್ಯ ಸೇವೆ ಮಾಡುತ್ತೇನೆ.

ನಮಗೆ ಬೇರೆ ಯಾವ ವಿಧ ಮನೋಕಾಮನೆ ಉಂಟಾಗದಂತೆ ಮಾಡಬೇಕು ನೀನು. ನಮ್ಮನ್ನು ಸ್ವೀಕರಿಸಿ ಕೃತಾರ್ಥರಾಗಿಸು ಸ್ವಾಮಿ, ನಮ್ಮ ಈ ಶ್ರೀಕೃಷ್ಣ ಸೇವಾವ್ರತ ಸಿದ್ಧಿಸಲಿ (ತಿರುಪ್ಪಾವೈ ಶ್ರೇಷ್ಠವಾದ ವ್ರತ, ನೋಂಪಿ ಎಂದರ್ಥ)


ಆಂಡಾಳ್/ಗೋದಾದೇವಿಯ ಕಾವ್ಯ ಹೇಗೋ ಆಕೆಯ ಬದುಕು ನಮ್ಮ ಸಂಸ್ಕೃತಿ-ನಮ್ಮ ಹೆಣ್ಣು ಮಕ್ಕಳಿಗೂ ದೀಪವಾದರೆ ಸಾರ್ಥಕವಾಗುವುದಲ್ಲವೇ?



# ಹರಿಕಥಾಮೃತ ಸಾರ ಮಹಿಮೆ ಅಪಾರ

- ಶ್ರೀಮತಿ. ಪ್ರಿಯ ಪ್ರಾಣೇಶ ಹರಿದಾಸ

80504 36752



ಹರಿಕಥಾಮೃತಸಾರದಲ್ಲಿ ಪ್ರತಿ ಸಂಧಿಯಲ್ಲೂ ಸಮಸ್ತ ಅಣು ತೃಣಾದಿಯಿಂದ ಹಿಡಿದು ಸರ್ವತ್ರ ವ್ಯಾಪಿಯಾದ ಭಗವಂತನ ವಿಶೇಷತೆಯ ಬಗ್ಗೆ ಹೇಳಿದ್ದಾರೆ. ಈ ಧ್ಯಾನ ಪ್ರಕ್ರಿಯೆ ಸಂಧಿಯಲ್ಲಿ ಸುಂದರ ಅರ್ಥಪೂರ್ಣ ಉದಾಹರಣೆಯನ್ನು ಕೊಡುತ್ತಾ, ಹರಿಸೇವೆ ಬಗ್ಗೆ, ದೇವ ಜೀವರ ಭೇದ, ಜೀವ ಜೀವರ ಭೇದ, ನರಕ, ಸಂಸಾರ, ರಸ, ಪ್ರಕೃತಿ, ಭೂತಗಳಲ್ಲಿ ಚಿಂತನೆಗೆ ಹೀಗೆ ಹಲವಾರು ವಿಷಯಗಳ ಜ್ಞಾನದ ಅರಿವು ಮೂಡಿಸುತ್ತಾ ಧ್ಯಾನದ ಬಗ್ಗೆ ದಾಸರು ಹೇಳಿದ್ದಾರೆ. ಇದಕ್ಕೆ ಸ್ಥಾವರ ಜಂಗಮ ಸಂಧಿ ಎನ್ನುವ ಇನ್ನೊಂದು ಹೆಸರು.

**ಹರಿಕಥಾಮೃತಸಾರ ಗುರುಗಳ**
**ಕರುಣಾದಿಂದಾಪನಿತು ಪೇಳುವೆ**
**ಪರಮ ಭಾಗವದ್ಭಕ್ತರಿದನಾದರಿದಿ ಕೇಳುವುದು**

ಪ್ರತಿ ಸಂಧಿಯಲ್ಲೂ ಈ ಪಲ್ಲವಿಯನ್ನು ಪುರಾವರ್ತಿಸಿದ್ದಾರೆ. ಗುರುಗಳ ಕರುಣೆಯಿಂದ ತಿಳಿದಷ್ಟು ಹೇಳುತ್ತಿರುವೆ ಭಗವಂತನ ಭಕ್ತರು ಆದರದಿಂದ ಉದಾಸೀನ ಮಾಡದೇ ಕೇಳಿ ಎಂದಿದ್ದಾರೆ.

**ನುಡಿ**

**ಪಾದುಕೆಯ ಕಂಟಕಸಿಕ್ತ ಮೊದಲಾದವು ಅನುದಿನ ಬಾಧಿಸುವನೆ**
**ಏಕಾದಶ ಇಂದ್ರಿಯಗಳಲಿ ಬಿಡದೆ**
**ಹೃಷೀಕಪನ ಮೂರ್ತಿ ಸಾದರದಿ ನೆನೆವವನು**
**ಏನಪರಾಧಗಳ ಮಾಡಿದರು ಸರಿಯೇ**
**ನಿರೋಧಗೈಸವು ಮೋಕ್ಷಮಾರ್ಗಕೆ ದುರಿತ ರಾಶಿಗಳು ॥ 1॥**

ಪಾದರಕ್ಷೆಗಳಿಂದ ನಮ್ಮ ಕಾಲುಗಳು ಹೇಗೆ ಸಂರಕ್ಷಿಸಲ್ಪಾಡುವುದೋ ಹಾಗೇ ಏಕಾದಶ ಇಂದ್ರಿಯಗಳ ನಿಯಾಮಕನಾದ ಹೃಷಿಕೇಶನ ಭಗವಂತನ ನಿರಂತರ ನಾಮಸ್ಮರಣೆಯಿಂದ ಪಾಪಗಳನ್ನು ಕ್ಷಮಿಸುತ್ತಾನೆ. ಮೋಕ್ಷ ಮಾರ್ಗಕ್ಕೆ ಯಾವ ಅಡತಡೆ ಮಾಡಲಾರದು.

ಜೀವನದಲ್ಲಿ ಭಗವಂತ ಕೊಟ್ಟದ್ದು ಸ್ವೀಕರಿಸಿ ಎಲ್ಲವನ್ನು ಅವನ ಅಧೀನ ನಾವು ಪರಾಧೀನ ಎಂದು ತಿಳಿದು ನಡೆಯಬೇಕು. ಏಕೆಂದರೆ ಜೀವನು ಅಸ್ವತಂತ್ರನು ತ್ರಿಗುಣಗಳಾದ ಸತ್ವ, ರಜೋತಮಗಳಿಂದ ಕೂಡಿದವರು ಮತ್ತು ಸುಖದುಃಖಗಳ ಲೇಪ ಇರುತ್ತದೆ. ಆದರೆ ಶ್ರೀಹರಿಗೆ ಯಾವುದೇ ಬಂಧಕಗಳು ಇಲ್ಲ, ಸ್ವತಂತ್ರನು ನಿತ್ಯಾನಂದನು, ಸರ್ವವ್ಯಾಪ್ತ, ಸರ್ವಶಕ್ತ  ಸಕಲ ದೇವತೆಗಳಿಗೂ ನಾಥನಾಗಿದ್ದಾನೆ.

ಅಷ್ಟವಿಧ ಪ್ರಕೃತಿಗಳಾದ ಭೂಮಿ, ಅಪ್,ತೇಜ, ವಾಯು, ಆಕಾಶ, ಮನ ಬುದ್ಧಿ, ಅಹಂಕಾರಗಳಲ್ಲಿ ವಿಶ್ವಾದಿ ಎಂಟು ರೂಪಗಳಾದ ವಿಶ್ವ, ತೈಜಸ, ಪ್ರಾಜ್ಞ, ತುರ್ಯ, ಆತ್ಮ ಅಂತರಾತ್ಮ ಪರಮಾತ್ಮ ಜ್ಞಾನಾತ್ಮ ರೂಪಗಳಿಂದ ಆಹಾರ, ಆರೋಗ್ಯ, ತೇಜಸ್ಸು, ಯಾತ್ರಾ, ಸದವಕಾಶ, ಶಾಂತತೆ, ಜ್ಞಾನಶುದ್ಧಿ, ಪ್ರಸನ್ನತೆ ಎಂಬ ಫಲಗಳನ್ನು ಕೊಡುತ್ತಾ ಕಾಪಾಡುತ್ತಾನೆ.

ರಸಗಳಲ್ಲಿ ಹರಿಯ ರೂಪಗಳು ಆರು ರಸಗಳು ಕಹಿ, ಸಿಹಿ, ಒಗರು, ಹುಳಿ, ಉಪ್ಪು, ಖಾರ ಇವುಗಳಿಗೆ ಷಡ್ರಸಗಳು  ಎನ್ನುವರು.

ಈ ಮೇಲಿನ ಆರು ರಸಗಳು  ಅನುಭವಕ್ಕೆ ಬರುತ್ತದೆ.ಅನುಭವಕ್ಕೆ ಬಾರದ ಇನ್ನು ಆರು  ರಸಗಳು ಇವೆ. ಅವು ಯಾವುದೆಂದರೆ ಸ್ವಾಖ್ಯರಸ, ರಮಾರಸ, ಬ್ರಹ್ಮರಸ, ಭಾರತಿರಸ , ದೇವತಾರಸ, ಜೀವರಸ, ಅನುಭವಕ್ಕೆ ಬರುವ ಆರು ರಸಗಳಾದ ಕಹಿ, ಸಿಹಿ, ಒಗರು, ಹುಳಿ, ಉಪ್ಪು, ಖಾರ ಇವುಗಳಲ್ಲಿ ಭಗವಂತನು ಸುರುಚಿ,ರುಚಿರ, ಸುಗಂಧ, ಶುಚಿ ಎಂಬಲ್ಲಿ ಅಭಿಮಾನಿ ದೇವತೆಗಳಾದ ಶ್ರೀ,ಭೂ,ದುರ್ಗಾ,  ಲಕ್ಷ್ಮಿ ಬ್ರಹ್ಮ ರುದ್ರ ಅಂತರ್ಗತನಾಗಿ ವಾಯುದೇವರ  ಮೂಲಕ ಮತ್ಸ್ಯ, ಭಾರ್ಗವ, ನರಸಿಂಹ, ಕಪಿಲ ನಾಮಕದಿಂದ 32 ಸಾವಿರ  ನಾಡಿಗಳಲ್ಲಿ ಇದ್ದು ಕರ್ತೃ ಎನಿಸುವನು.

ಭಗವಂತನ ಸ್ಮರಿಸದೇ ಮಾಡುವ ಯಾವ ಸುಕರ್ಮದಿಂದ ನಮಗೆ ಪುಣ್ಯ  ಲಭಿಸುವುದಿಲ್ಲ ಎಂದಿದ್ದಾರೆ. ತತ್ವಾಭಿಮಾನಿದೇವತೆಗಳ ಮೂಲಕ ಜ್ಞಾನ, ಕರ್ಮಗಳನ್ನು ಮಾಡಿಸುತ್ತಾನೆ.

ಇನ್ನು ವಾಯುದೇವರು ಜ್ಞಾನೇದ್ರಿಂಯಗಳಲ್ಲಿ "ಶುಚಿಷಿತ್" ನಾಮದಿಂದ ಕರ್ಮೆಂದ್ರೀಯಗಳಲ್ಲಿ "ಹೋತಾ"ಇದ್ದಾರೆ.ದೇಹದ ಮಧ್ಯದಲ್ಲಿ ವಾಮನನಾಗಿ ಇಂದ್ರಿಯಗಳಲ್ಲಿ ಹೃಷಿಕೇಶನಾಗಿ ವಾಯುದೇವರ ಮೂಲಕ ಪ್ರಾಕೃತಿಕ  ಅನುಭವಗಳನ್ನು ಕೊಡುತ್ತಾನೆ.

**ನುಡಿ**

**ಹರಿಯೆ ಮುಖ್ಯ ನಿಯಾಮಕನು ಎಂದರಿತು ಪುಣ್ಯಾಪುಣ್ಯ**
**ಹರುಷಾಹರುಷ ಲಾಭಾಲಾಭ ಸುಖದುಃಖಾದಿ ದ್ವಂದ್ವಗಳ**
**ನಿರುತ ಅವನಂಘ್ರಿಗೆ ಸಮರ್ಪಿಸಿ ನರಕ ಭೂ ಸ್ವರ್ಗಾ**
**ಪವರ್ಗಾದಿ ಕರಣ ನಿಯಾಮಕನ ಸರ್ವತ್ರದಲಿ ನೆನೆವುತಿರು**

ಪ್ರೇರ್ಯ, ಪ್ರೇರಕನಾಗಿ, ಕಾರ್ಯ ಕಾರಣನಾಗಿರುವನು ಭಗವಂತ. ಮೋಹ, ಸುಖ,ದುಃಖ,ಪುಣ್ಯ,ಪಾಪ,ಲಾಭ ನಷ್ಟ, ಜಯಾಪಜಯ ಮೊದಲಾದ ದ್ವಂದಗಳನ್ನು ಪರಮಾತ್ಮನ ಪಾದಕ್ಕೆ ಸಮರ್ಪಿಸಿ ನಡೆದರೆ, ಸ್ವರ್ಗಮೋಕ್ಷ ಕೊಡುವನು.

ಒಟ್ಟಾರೆ ಪರಮಾತ್ಮನು ಕಟ್ಟಿಗೆಯಲ್ಲಿ ಅಡಗಿರುವ ಅಗ್ನಿಯಂತೆ ಕಾಣಿಸದೇ ಇರುತ್ತಾನೆ. ಒಳಗು ಹೊರಗು ಇದ್ದು ಸ್ವತಂತ್ರನಾದ ಶ್ರೀಹರಿ ತಂದೆ ತಾಯಿಯಂತೆ ಸಂತೈಸುತ್ತಾನೆ.

ಖೇಚರ (ಆಕಾಸದಲ್ಲಿ ಸಂಚರಿಸುವ), ಭೂಚರ (ಭೂಮಿಯ ಮೇಲೆ ಸಂಚರಿಸುವರು) ವಾರಿಚರ (ನೀರಿನಲ್ಲಿ ಸಂಚರಿಸುವರು) ಎಲ್ಲ ತರಹದ ಪ್ರಾಣಿ,ಮೃಗ, ಪಕ್ಷಿಯಾದಿಗಳಲ್ಲಿಯೂ ಕರ್ಮವನ್ನು ಮಾಡುವನು. ಜಗತ್ತಿನ ಒಳಗು ಹೊರಗು ವ್ಯಾಪ್ತನಾಗಿರುವನು, ಹಾಗೇ ಜೀವನದಲ್ಲಿ ಭೋಗ್ಯ, ಭೋಕ್ತನಾಗಿ, ಎಲ್ಲದರಲ್ಲೂ ಇದ್ದು ಕಾರ್ಯ ಮಾಡುವನು.

**ನುಡಿ :**

**ಇನಿತು ವ್ಯತಿರೇಕ ಅನ್ವಗಳೆಂ ದೆನಿಪ ಪೂಜಾ ವಿಧಿಗಳನೆ ತಿಳಿ**
**ದನಿಮಿಷೇಶನ ತೃಪ್ತಿಪಡಿಸುತಲಿರು ನಿರಂತರದಿ**
**ಘನ ಮಹಿಮೆ ಕೈಕೊಂಡು ಸ್ಥಿತಿ ಮೃತಿ**
**ಜನುಮಗಳ ಪರಿಹರಿಸಿ ಸೇವಕ**
**ಜನರೊಳಿಟ್ಟಾನಂದಬಡಿಸುವ ಭಕ್ತವತ್ಸಲ**

ಭಗವಂತನನ್ನು ಚಿಂತಿಸಲು ಎರಡು ವಿಧಗಳಿವೆ.

**ವ್ಯತಿರೇಕ ಪೂಜೆ ಮತ್ತು ಅನ್ವಯ ಪೂಜೆ:**

ವ್ಯತಿರೇಕ ಪೂಜೆ ಎಂದರೆ ಅಣುತೃಣಾದಿ ಮತ್ತು ಪ್ರತಿ ಪದಾರ್ಥಗಳಲ್ಲಿ ಸಾಧನಗಳಲ್ಲಿ ಹೀಗೆ ಪ್ರತಿಯೊಂದು ಅಧಿಷ್ಠಾನದಲ್ಲಿ ತದಂತರ್ಗತನಾದ ಭಗವಂತನನ್ನು ಚಿಂತಿಸುವುದು.ಅನ್ವಯ ಪೂಜೆ ಎಂದರೆ ಸರ್ವತ್ರ ವ್ಯಾಪ್ತಿಯಾದ ಸರ್ವಜ್ಞನಾದ ಭಗವಂತನನ್ನು ಅಭೇಧ ಕಾಣದೇ ಪೂಜಿಸುವುದು. ಭಗವಂತನು ಜಡ ಮತ್ತು ಚೇತನ ಪ್ರತಿಮೆಗಳಲ್ಲಿ ನೆಲೆಸಿರುವನು.

ಜಡ ಪ್ರತಿಮೆಯಲ್ಲಿ ಅಹಿತ ಮತ್ತು ಸಹಜಾಚಲ ಇವೆ. ಅಹಿತ ಪ್ರತಿಮೆ ಎಂದರೆ ಭಗವಂತನ ಸನ್ನಿಧಾನ ಆಹ್ವಾನಿಸುವುದು. ಇನ್ನು ಸಹಜಾಚಲ ಪ್ರತಿಮೆ ಎಂದರೆ ಪ್ರಾಕೃತಿಕವಾಗಿ ಸನ್ನಿಧಾನ ಇರುವುದು (ಸಾಲಿಗ್ರಾಮ).

ಇನ್ನು ಚೇತನ ಪ್ರತಿಮೆಯಲ್ಲಿಯು ಎರಡು ವಿಧ. ಸ್ತ್ರೀ ಮತ್ತು ಪುರುಷ ಪ್ರತಿಮೆ ಎಂಬ ಎರಡು ವಿಧ.

ಪಂಚ (ಐದು) ಮತ್ತು ತ್ರಯ (ಮೂರು) ಗೋಳಕ (ಅಧಿಷ್ಠಾನ) ಚಿಂತನೆ ಮಾಡಬೇಕು. ಪಂಚಗೋಳಕ ಎಂದರೆ 1.ಲೋಹದ ಪ್ರತಿಮೆ 2.ಲೋಹದ ಅಭಿಮಾನಿ ದೇವತೆ 3. ಅದರಲ್ಲಿನ ಪ್ರತಿಮಾ ದೇವತಾ 4. ವಾಯ್ವಾತ್ಮಕ 5. ಲಕ್ಷ್ಮ್ಯಾತ್ಮಕ ಎಂದು ಚಿಂತಿಸಬೇಕು.

ಇನ್ನು ಗೋಳತ್ರಯ ಚಿಂತನೆ ಎಂದರೆ

1.ಲೋಹಾದಿ 2.ವಾಯ್ವಾತ್ಮಕ 3.ಲಕ್ಷ್ಮ್ಯಾತ್ಮಕ ಚಿಂತಿಸಬೇಕು. ವಿಷ್ಣು, ಲಕ್ಷ್ಮಿ, ವಾಯು ಪ್ರತಿಮೆಯಲ್ಲಿ ಮೂರು ಗೋಳಕ ಆದರೆ ಉಳಿದ ಪ್ರತಿಮೆಗಳಲ್ಲಿ ಪಂಚಗೋಳಕ ಚಿಂತನೆ ಮಾಡಬೇಕು.

ಹಂತ ಹಂತವಾಗಿ ಭಗವಂತನ ವಿಸ್ತಾರ ರೂಪವನ್ನು ತಿಳಿಸುತ್ತಾ ಇನ್ನು ಪುರುಷ ದೇಹದಲ್ಲಿ ಬ್ರಹ್ಮ,ವಾಯು, ಗರುಡ,ರುದ್ರ,ಇಂದ್ರ,ಮನ್ಮಥ,ಅಹಂಕಾರಿಕ,ಪ್ರಾಣ, ಮುಂತಾದವರ ಅಂತರ್ಗತನಾಗಿ ಹರಿಯು ಅನಿರುದ್ಧ ಮತ್ತು ನಾರಾಯಣ ರೂಪದಿಂದ ಸುಖ ಕೊಡುವನು.

ಸ್ತ್ರೀಯರಲ್ಲಿಯೂ ಸಹ ಲಕ್ಷ್ಮೀ, ಸರಸ್ವತಿ,ಭಾರತಿ, ಸೌಪರ್ಣಿ, ವಾರುಣಿ, ಪಾರ್ವತಿ ಮೊದಲಾದವರಲ್ಲಿ ಸಂಕರ್ಷಣ ಮತ್ತು ಪ್ರದ್ಯುಮ್ನ ರೂಪದಿಂದ ಇದ್ದು ಸುಖ ಕೊಡುವನು ಪುರುಷರಲ್ಲಿ ಮತ್ತು ಸ್ತ್ರೀಯರಲ್ಲಿ ಇದ್ದು ಹಗಲಿರುಳು ಇದ್ದು ಸುಖ ಕೊಡುವನು.

ಪ್ರತಿಮೆಗಳನ್ನು ಮಾಡುವವನು ಅಕ್ಕಸಾಲಿಗನು. ಆ ಪ್ರತಿಮೆ ಗಳಲ್ಲಿಯೂ ಸಹ ಟಂಕಿ ಮತ್ತು ಭಾರ್ಗವ ರೂಪದಲ್ಲಿದ್ದು ಅಗ್ನಿ, ವಾಯು ದೇವತೆಗಳಿಂದ ಸ್ತೋತ್ರ ಮಾಡಿಸಿಕೊಳ್ಳುತ್ತಾ, ನಿತ್ಯದಲ್ಲಿಯೂ ತುಳಸಿ, ಗಂಧ, ಅಕ್ಷತೆ, ಪುಷ್ಪ, ಫಲ, ದೀಪ ಪೂಜೆಯನ್ನು ಸ್ವೀಕರಿಸುತ್ತ ಎಲ್ಲ ವರಗಳ ಕೊಡುವನು.

ಪರ್ವತಾಭಿಮಾನಿ 5535 ರೂಪದಿಂದ ಸುರರಲ್ಲಿ ಸಾಲಿಗ್ರಾಮದ ಅಭಿಮಾನಿ ದೇವತೆಗಳಲ್ಲಿ ಶ್ರೀ ವಾಸುದೇವ ರೂಪದಿಂದ ಪೂಜೆಗೊಂಬುವನು.

ಹಾಗೇ ನಾಲ್ಕು ಪ್ರಕಾರಗಳಾದ ಪುರುಷ, ಸ್ತ್ರೀ, ಆಹಿತ, ಸಹಜ ಪ್ರತಿಮೆಗಳಲ್ಲಿದ್ದು ನಮ್ಮನ್ನು ಸಂಸಾರ ಎಂಬ ಸಾಗರದಿಂದ ದಾಟಿಸಿ ಮುಕ್ತಿ ಕೊಡುವನು.

**ನುಡಿ :**

**ಆವ ಕ್ಷೇತ್ರಕೆ ಪೋದರೇನು? ಇನ್ನಾವ ತೀರ್ಥಾದಿ ಮುಳುಗಲೇನು? ಇನ್ನಾವ ಜಪ ತಪ ಹೋಮ ದಾನವ ಮಾಡಿ ಫಲವೇನು? ಶ್ರೀವರ ಜಗನ್ನಾಥ ವಿಠಲ ಈ ವಿಧದಿ ಜಂಗಮ ಸ್ಥಾವರ ಜೀವ ರೊಳು ಪರಿಪೂರ್ಣನೆಂದು ಅರಿಯದಿಹ ಮಾನವನು ॥**

ಯಾವುದೇ ಕ್ಷೇತ್ರವಿರಲಿ, ತೀರ್ಥ ಸ್ನಾನವಿರಲಿ, ಯಾವುದೇ ಜಪ ತಪ, ಹೋಮ, ದಾನ, ಯಾವುದೇ ಏನೇ ಮಾಡಿದರೂ ಜಗನ್ನಾಥ ವಿಠ್ಠಲನಿರುವನೆಂದು ತಿಳಿದು "ನಾಹಂ ಕರ್ತಾ ಹರಿಕರ್ತಾ" ಭಾವದಿಂದ ಮಾಡಿದರೆ ಆ ಕಾರ್ಯ ಭಗವಂತನಿಗೆ ಸಂಪ್ರೀತವಾಗಿ ಪೂರ್ಣವಾಗುತ್ತದೆ.

ಒಟ್ಟಾರೆ ಈ ನುಡಿಯಲ್ಲಿ ಭಗವಂತನ ಪ್ರತೀಕಗಳಲ್ಲಿನ ರೂಪ, ಅಧಿಷ್ಠಾನದಲ್ಲಿ ಮಾಡಬೇಕಾದ ಹರಿಯ ಧ್ಯಾನ ಮತ್ತು ಮಹಿಮೆಯನ್ನು ತಿಳಿಸಿದೆ. ಆದ್ದರಿಂದ ನಾವು ಮನುಜರು ಈ ಕಲಿಯುಗದ ಬಾಧೆಯಿಂದ ರಕ್ಷಿಸಿಕೊಳ್ಳಬೇಕಾದರೆ ಭಗವಂತನ ಮೊರೆ ಹೋಗಬೇಕು.

## ಗ್ರಂಥಾವಲೋಕನ

# ಮಧ್ವಾಚಾರ್ಯರ ಜೀವನದ ಸಮತೋಲನದ ಕಥನ – ಸನ್ನಿಧಿ


-**ಪ್ರಣವ**

**90356 18076**

ಸನ್ನಿಧಿ ಒಂದು ಅಪೂರ್ವ ಕಾದಂಬರಿ. ಜೀವನ ಚರಿತ್ರೆಯನ್ನು ಕಾದಂಬರಿ ಮಾಡಿದ ಹಳೆಯ ಪರಂಪರೆಯೇ. ಆದರೆ ಎರಡು ಅರ್ಥದಲ್ಲಿ ಇದು ಹೊಸದು.

ಜೀವನ ಚರಿತ್ರೆ ಕಾದಂಬರಿ ಆಗುವಾಗ ಕಲ್ಪನೆಯ ಆಚ್ಛಾದನೆ ಇಲ್ಲ ಹಾಗೆಂದು ವಾಸ್ತವದ ಒಣ ಬರೆಹವೂ ಅಲ್ಲ. ಒಂದು ಜೀವನ ಚರಿತ್ರೆಯನ್ನು ರಸವತ್ತಾಗಿ ವಿವರಿಸುವುದು ಅಷ್ಟು ಸುಲಭದ ಕೆಲಸವಲ್ಲ. ಅದರಲ್ಲೂ ಸಿದ್ಧಾಂತ ಬೇರೆ ಪ್ರಸ್ತುತ ಪಡಿಸಬೇಕು. ಎಲ್ಲಿಯೂ ನೀರಸವಾಗದಂತೆ ನೋಡಬೇಕು. ಹಾಗೆಂದ ಮಾತ್ರಕ್ಕೆ ಅತಿರಂಜಿತವಾಗದ ಎಚ್ಚರವೂ ಬೇಕು. ಮನರಂಜನೆಯನ್ನೇ ಮುಖ್ಯ ಮಾಡಿದರೆ ವ್ಯಕ್ತಿಯ ಸಿದ್ಧಾಂತ, ಜೀವನ ಮರೆಯಾಗಬಹುದು. ಡಾ॥ ಸುರೇಶ ಪಾಟೀಲರದು ಇಂಥದೊಂದು ಸಾಹಸ. ಅವರು ಬರೆಯ ಹೊರಟದ್ದು ಶ್ರೀ ಮಧ್ವಾ ಚಾರ್ಯರ ಜೀವನ ಮತ್ತು ಸಿದ್ಧಾಂತವನ್ನು.

**ಲೇಖಕರು:**
**ಡಾ॥ಸುರೇಶ್ ಪಾಟೀಲ**
**ಪ್ರಕಾಶಕರು :**
**ಐಸಿರಿ ಪ್ರಕಾಶನ, ಬೆಂಗಳೂರು**
**ಪುಟಗಳು : 200**
**ಬೆಲೆ : ರೂ. 200/-**




ಊರಿನ ಒಬ್ಬನನ್ನು ಹುಡುಕಲು ಉತ್ತರದ ಜನಮೇಜಯ ಆ ನೆಪದಲ್ಲಿ ದಕ್ಷಿಣಕ್ಕೆ ಬರುವುದು ಒಂದು ಪ್ರಯಾಣ. ಆದರೆ ಆ ಪ್ರಯಾಣ ಹುಡುಕಿ ತೆಗೆದದ್ದು ಶ್ರೀಮಧ್ವಾಚಾರ್ಯರ ಜೀವನ ಮತ್ತು ಸಿದ್ಧಾಂತವನ್ನು ಸಿದ್ಧಾಂತದ ಪ್ರತಿಯೊಂದು ವಿಷಯವನ್ನೂ ಕೂಲಂಕುಷವಾಗಿ ಬಿಡಿಸಲಾಗಿದೆ.

ಮಧ್ವಾಚಾರ್ಯರ ಜೀವನದಲ್ಲಿ ನಡೆದ ಎಲ್ಲಾ ಪವಾಡ ಸದೃಶ ಘಟನೆಗಳ ವಿವರವಿದೆ. ಆದರೆ ಎಲ್ಲಿಯೂ ಭಾವಾವೇಶವಿಲ್ಲ, ಪವಾಡ ಮಾಡಬೇಕು ಎಂಬ ಆವೇಗವಿಲ್ಲ, ಅತಿಯಾದ ಮತಾಭಿಮಾನವೋ ಮೌಢ್ಯವೋ ಇಲ್ಲ.

ಈ ಎಲ್ಲ ಅರ್ಥಗಳಲ್ಲಿ ಪಾಟೀಲರು ಅಭಿನಂದನೀಯರು. ಅದರಲ್ಲೂ ಅವರು ಆಯ್ಕೆ ಮಾಡಿರುವುದು ಶ್ರೀಮಧ್ವಾಚಾರ್ಯರ ಜೀವನ ಚರಿತ್ರೆಯ ಕಾದಂಬರಿ. ಇದು ಬಹುಶಃ ಕನ್ನಡದಲ್ಲಿ ಪ್ರಥಮ. ಅವರ ಈ ಸಮಚಿತ್ತತೆಯ ನಿರೂಪಣೆ ಮತ್ತು ಶ್ರೀಮದಾಚಾರ್ಯರ ವ್ಯಕ್ತಿತ್ವ ಮತ್ತು ಬೌದ್ಧಿಕ ಶ್ರೀಮಂತಿಕೆ ತಿಳಿಯಬೇಕು ಎನ್ನುವವರು ಈ ಕೃತಿ ಓದಬೇಕು. ಒಂದೇ ಓದಿನಲ್ಲಿ ಮುಗಿಸುವಂತೆ ಸೆಳೆದಿಡುವ ಜಾಗ್ರತೆಯ ಶೈಲಿ ಇದೆ. ಮನಸ್ಸಿಗೆ ಮುದ ನೀಡುತ್ತಾ ಕರೆದುಕೊಂಡು ಹೋಗುವ ಒಳ್ಳೆಯ ನಿರೂಪಣೆ ಇದು ಎಂದು ಮುನ್ನುಡಿ ಬರೆದ ಆಧ್ಯಾತ್ಮ ಚಿಂತಕಿ ವೀಣಾ ಬನ್ನಂಜೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಧಾರವಾಡದ ಸಂಶೋಧಕ ಡಾ.ಕೃಷ್ಣ ಕಟ್ಟಿ ವಿಶ್ಲೇಷಿಸುವಂತೆ ಆಚಾರ್ಯಮಧ್ವರ ನಾಲ್ಕು ಜನ ನೇರ ಶಿಷ್ಯರಲ್ಲಿ ಒಬ್ಬರಾದ ಶ್ರೀ ಅಕ್ಷೋಭ್ಯತೀರ್ಥರು ಜಮಖಂಡಿ ಪ್ರಾಂತದವರು ಎಂಬುದು ಇತಿಹಾಸ. ಅದನ್ನು ಸಮರ್ಪಕವಾಗಿ ಬಳಸಿಕೊಂಡು ಆ ವಸ್ತು. ವಿಷಯಕ್ಕೆ ಒಂದು ಸುಂದರವಾದ ಹಂದರವನ್ನು ಕಟ್ಟಿ. ಕಾದಂಬರಿ ಯುದ್ಧಕ್ಕೂ ಅದಕ್ಕೊಂದು ಮಹತ್ವದ ಸ್ಥಾನ ಕೊಟ್ಟಿದ್ದಾರೆ. ಆಚಾರ್ಯಮಧ್ವರ ತತ್ವವಾದದ ಮತ್ತು ಮಹಿಮೆಯ ವಿಚಾರಗಳನ್ನು ಜನರು ಮಾತು ಕತೆಯಿಂದ ಕೇಳಿ ಪ್ರಭಾವಿತನಾದವನು ಜನಮೇಜಯ. ಅವರ ಸನ್ನಿಧಿಯನ್ನು ಬಯಸಿ ತನ್ನ ಪರಿವಾರದ ಅಪ್ಪಣೆ ಪಡೆದುಕೊಂಡು ಉಡುಪಿಗೆ ಹೋಗಿ ಅಲ್ಲಿ ಶ್ರೀಕೃಷ್ಣನ ಹಾಗೂ ಮಧ್ವರ ಸಾನ್ನಿಧ್ಯದಲ್ಲಿ ಇದ್ದು ಕಂಡುಂಡ ಅನುಭವ ಈ ಕಾದಂಬರಿಯ ತಿರುಳು.

**ಪ್ರತಿಗಳಿಗೆ ಸಂಪರ್ಕಿಸಿ :**
**94487 00315/93418 04700**



# ರಥ ಸಪ್ತಮಿ


**ಎಸ್. ಗೋಪಾಲ್**

**84533 26571**


ಉತ್ತರಾಯಣ ಪುಣ್ಯಕಾಲದ ದಿನವಾದ ನಂತರ ಹಿಂದೂ ಪಂಚಾಗದ ರಿತ್ಯ ಮಾಘಶುದ್ಧ ಸಪ್ತಮಿಯಿಂದ ಸೂರ್ಯ ದೇವರು ಸಪ್ತಾಶ್ವ (ಗಾಯತ್ರಿ, ಬೃಹತಿ, ಉಷ್ಣಿಕ್ ಜಗತಿ,ತ್ರಿಷ್ಟುಪ್,ಅನುಷ್ಟುಪ್,ಪಂಕ್ತಿ)ರಥಾರೂಢನಾಗಿ ದಕ್ಷಿಣ ದಿಂದ ಉತ್ತರ ದಿಕ್ಕಿಗೆ ಪಯಣ ಪ್ರಾರಂಭಿಸುತ್ತಾನೆ. ಈ ದಿನ ವನ್ನೇ 'ರಥಸಪ್ತಮಿ'ಎನ್ನಲಾಗುವುದು. ಇಲ್ಲಿಂದ ಮುಂದೆ ಬಿಸಿಲು ಮತ್ತು ಹಗಲು ವೇಳೆ ಹೆಚ್ಚಾಗುವುದು. ಸಪ್ತಮಿ ತಿಥಿಯು ಸೂರ್ಯನಿಗೆ ಪ್ರಿಯವಾದುದು. ಅವನ ಬೆಳಕಿನಲ್ಲಿ ಸಪ್ತ ವರ್ಣಗಳಿರುತ್ತದೆ. ಇವನ್ನೇ ಅವನ ರಥದ ಅಶ್ವಗಳೆಂದು ಬಣ್ಣಿಸುತ್ತಾರೆ. ಏಳು ಕುದುರೆಗಳು ಎಳೆಯುವ ಒಂದೇ ಚಕ್ರ ವುಳ್ಳ ವಿಶೇಷ ರಥಕ್ಕೆ ಕಾಲಿಲ್ಲದ ಅರುಣ ಸಾರಥಿ. ಇಂತಹ ಸೂರ್ಯ ದೇವನನ್ನು ಆರಾಧಿಸುವುದು ನಮ್ಮೆಲ್ಲರ ಕೃತ ಜ್ಞತೆಯ ದ್ಯೋತಕ.

ಇನ್ನು ರಥಸಪ್ತಮಿ ದಿನದ ಸ್ನಾನ ಅತಿ ಪ್ರಮುಖ ವಾದುದು. ಏಕೆಂದರೆ ಎಕ್ಕದೆಲೆಗಳನ್ನು ದೇಹದ ಹಲವು ಭಾಗ ಗಳಲಿಟ್ಟುಕೊಂಡು (ಶಿರ, ಪಾದಗಳು, ಭುಜಗಳು.) ಈ ಕೆಳ ಕಂಡ ಶ್ಲೋಕ

"ಸಪ್ತ ಸಪ್ತ ಮಹಾಸಪ್ತಃ ಸಪ್ತದ್ವೀಪಾ ವಸುಂಧರಾ।
ಶ್ವೇತಾರ್ಕ ಪರ್ಣಮಾದಾಯಃ ಸಪ್ತಮೀ ರಥ ಸಪ್ತಮಿ॥


ಹೇಳಿಕೊಂಡು ಸ್ನಾನ ಮಾಡುವುದರಿಂದ ಉತ್ತಮ ಫಲ ಗಳನ್ನು ಕಂಡುಕೊಳ್ಳಬಹುದು. ಪಾಪಗಳನ್ನು ನೀಗಿಸುವುದು ಚರ್ಮ ರೋಗಗಳ ನಿವಾರಣೆ, ಆಯುರ್‌ವೃದ್ಧಿ ಇತ್ಯಾದಿ ಉಪ ಯೋಗ. ಪುಣ್ಯ ನದೀ ತೀರಗಳಲ್ಲಿ ಸ್ನಾನ ಮಾಡಿದರೆ ಅಗಣಿತ ಪುಣ್ಯ ಲಭಿಸುವುದೆಂದು ಪ್ರತೀತಿ. ಏಳು ಜನ್ಮಗಳಲ್ಲಿ ಮಾಡಿದ ಪಾಪಗಳು ಜನ್ಮಾಂತರಗಳಲ್ಲಿ ಫಲಿಸಿರುವವ,ಮಾನಸಿಕ ವಾಚಿಕ ಮತ್ತು ದೈಹಿಕವಾದವು, ಅರಿತೋ ಅರಿಯದಯೇ ಮಾಡಿದ ಮಾಡಿದಂತೆ ಕೆಟ್ಟ ಕರ್ಮಗಳು ಹೋಗುವುದು. ಸ್ನಾನಾನಂತರ ಶಾಸ್ತ್ರೋಕ್ತ ನಮಸ್ಕಾರ, ಅರ್ಘ್ಯಪ್ರದಾನ ಪೂಜೆ ಸಲ್ಲಿಸಬೇಕು. ಸೂರ್ಯನಿಗೆ ಕಮಲದ ಹೂ, ಮಂದಾರಪುಷ್ಪ ಪ್ರಿಯವಾದುದು. ಆದ್ದರಿಂದ ಈ ಹೂಗಳಿಂದ ಪೂಜಿಸಿ ಪಾಯಸ ನೈವೇದ್ಯವಾಗಿ ನೀಡಬೇಕು.

### ವೈದ್ಯರೂಪಿ ಸೂರ್ಯಪ್ರಭು :

ಸೂರ್ಯನ ಕಿರಣಗಳಿಲ್ಲದ ಜಾಗದಲ್ಲಿ ಕೀಟಾಣುಗಳು ಅಧಿಕವಾಗಿರುತ್ತವೆ. ಒಂದೇ ಸಮನೆ ಸುರಿಯುವ ಮಳೆಗಾಲ ದಲ್ಲಿ ಮೋಡಮುಸುಕಿದ ವಾತಾವರಣದಲ್ಲಿ ಸೂರ್ಯನನ್ನು ಯಾವಾಗ ಕಾಣುವೆವೋ ಎಂದು ಹಪಹಪಿಸುತ್ತಿರುತ್ತೇವೆ. ಸೂರ್ಯನ ಕಿರಣಗಳಲ್ಲಿ ರಕ್ತದ ಕೊರತೆಯನ್ನು ನೀಗಿಸುವ ಶಕ್ತಿ ಇದೆ. ರೋಗ ನಿರೋಧಕ ಶಕ್ತಿ ಸಹ ಇದೆ. ಕೆಲವು ಅಸಾಧ್ಯ ರೋಗಗಳಿಗೆ ಪ್ರಕೃತಿ ಚಿಕಿತ್ಸೆಯೊಡನೆ ಸೂರ್ಯ ಕಿರಣಸ್ನಾನ ಸೂಚಿಸುತ್ತಾರೆ. ಹಾಗೂ ಬೆಳಗಿನ ವೇಳೆ ಸೂರ್ಯೋದಯದ ಸಮಯದಲ್ಲಿ ಕಾಲ್ನಡಿಗೆ ಆರೋಗ್ಯಕ್ಕೆ ಒಳ್ಳೆಯದೆಂದು ಹೇಳಲಾಗಿದೆ.

ಸೂರ್ಯದೇವ ಬಹು ನಿಷ್ಟೆಯ ಕರ್ಮಯೋಗಿ ಎನ್ನ ಬಹುದು.ನಾವು ಮಾತ್ರ ಏನನ್ನು ಬೇಕಾದರೂ ಮಾಡ ಬಹುದು ಬಿಡಬಹುದು. ಆದರೆ ಸೂರ್ಯ ಮಾತ್ರ ತನ್ನ ಕರ್ತವ್ಯವನ್ನು ಕರಾರುವಕ್ಕಾಗಿ ನಿರ್ವಹಿಸಲೇಬೇಕು. ಸದಾ ಸರ್ವಕಾಲ ನಿರಂತರವಾಗಿ. ತಪ್ಪಿದರೆ ಲೋಕವೆಲ್ಲಾ ಅಲ್ಲೋಲ ಕಲ್ಲೋಲ ವಾಗಿ ಅಯೋಮಯವಾಗುವುದು. ಜೀವನ ಚಕ್ರನಿಂತು ಹೋಗುವುದು.

ರಥಸಪ್ತಮಿ ಕುರಿತು ಇನ್ನಷ್ಟು ಹೇಳುವುದಾದರೆ ಮಕರ ಸಂಕ್ರಾಂತಿಯಿಂದ ಉತ್ತರಾಯಣ ಪ್ರಾರಂಭವಾಗಿ ಉತ್ತರ



ದಿಕ್ಕಿನ ಕಡೆಗೆ ಸೂರ್ಯನ ಪಯಣ ರಥಸಪ್ತಮಿ ಮೊದಲಾಗಿ ಋಗ್ವೇದದಲ್ಲಿನ ಉಷೋದಯವರ್ಣನೆ ಕವಿತಾತ್ಮಕಗಳು ನೂರಕ್ಕೂ ಮೀರಿ ಸೂರ್ಯಸೂಕ್ತಿಗಳು ಈ ವೇದದಲ್ಲಿ ಕಂಡು ಬರುವುದು.

ಮಾನವರ ಶ್ರೇಯಸ್ಸಿಗೋಸ್ಕರವೇ ಮಹರ್ಷಿಗಳು ಸೂರ್ಯ ನಮಸ್ಕಾರ ಪದ್ಧತಿಯನ್ನು ಅನುಷ್ಠಾನಗೊಳಿಸಿದರು. ಭಾನುದೇವನು ಮೇರು ಪರ್ವತದ ಸುತ್ತಾ ತಿರುಗುತ್ತಾ ಹನುಮಂತನಿಗೆ ವೇದಶಾಸ್ತ್ರ ವ್ಯಾಕರಣ, ಛಂದಸ್ಸು ಮೀಮಾಂಸೆ ವಿಷಯಗಳನ್ನು ಬೋಧಿಸಿದನು. ವನವಾಸದಲ್ಲಿನ ಪಾಂಡವ ಪುತ್ರ ಯುಧಿಷ್ಟರನಿಗೆ ಸೂರ್ಯದೇವನು ಅಕ್ಷಯಪಾತ್ರೆ ಕೊಟ್ಟು ಆದರಿಸಿದ. ಸೂರ್ಯನ ಈ ವಿಶೇಷ ರಥದ ಹೆಸರು "ಚಿತ್ರ ರಥ" ಎನ್ನಲಾಗಿ ಅವನನ್ನು ಚಿತ್ರರಥನೆಂದು ಸಂಬೋಧಿಸುತ್ತಾರೆ.

ಸೂರ್ಯನ ಪತ್ನಿಯರು ಸಂಜ್ಞ, ಛಾಯ, ಇವರ ಮಕ್ಕಳು ಯಮ,ವೈವಸ್ವತ,ಸಾಪರ್ಣಿ,ಶನಿ ಪ್ರತೀಕ ಹೆಸರುಗಳು ಯಮುನ, ತಪತಿ ರಥಸಪ್ತತಿಯಂದು ಸೌರ ಮಂತ ಹೋಮದಿಂದ ಸತ್ಫಲಿತಗಳು ಲಭಿಸುತ್ತದೆ ಎಂದು ಪುರಾಣ ಕತೆಗಳು ಹೇಳುತ್ತದೆ. ತ್ರಿಮೂರ್ತಿ ಸ್ವರೂಪನಾದ ರವಿಯನ್ನು ಉದಯ ಕಾಲದಲ್ಲಿ "ಬ್ರಹ್ಮದೇವ"ನೆಂದು, ಮಧ್ಯಾಹ್ನ ಶಿವನೆಂದು ಸಂಧ್ಯಾ ಕಾಲದಲ್ಲಿ ವಿಷ್ಣುದೇವನೆಂದು ಸ್ಮರಿಸಲಾಗುವುದು. ಪ್ರತ್ಯಕ್ಷ ಸಾಕ್ಷಿಯಾಗಿ ಸಹಸ್ರ ಕಿರಣನೆಂದು ಆರಾಧಿಸುತ್ತಾರೆ.

ಶ್ರೀರಾಮನಿಗೆ ಅಗಸ್ತ್ಯ ಮಹರ್ಷಿ"ಆದಿತ್ಯಹೃದಯ" ಉಪದೇಶಿಸಿದರು. ಆನಂತರ ರಾವಣ ವಧೆಗೆ ಅನುವುಮಾಡಿಕೊಡಲಾಯಿತು. ಸೂರ್ಯದೇವನನ್ನು ಪ್ರತ್ಯಕ್ಷದೈವವಾಗಿ ಸಮಸ್ತ ಜೀವರಾಶಿಗಳಲ್ಲಿರುವ ಭಕ್ತಿ ವಿಶ್ವಸಾಕ್ಷಿಯಾಗಿ ನಿಂತಿದೆ ಎಂದು ಭಕ್ತರು ಅಭಿಪ್ರಾಯ ಪಡುತ್ತಾರೆ.

'ರಥಸಪ್ತಮಿ' ದಿನದಿಂದ ಶಾಸ್ತ್ರೋಕ್ತವಾಗಿ ಸಪ್ತಮಿವ್ರತ ಆಚರಿಸಲಾಗುವುದು. ಓಂ ಪ್ರಥಮವಾಗಿ ತುಳಸಿಕಟ್ಟೆ ಬಳಿ ರಂಗೋಲಿ, ಅರಿಶಿನ, ಕುಂಕುಮ, ಪುಷ್ಪಗಳಿಂದ ಅಲಂಕರಿಸಿ ಬಟ್ಟಲಲ್ಲಿ ಹಸುವಿನ ಹಾಲು ಹೊಸ ಅಕ್ಕಿ,ಬೆಲ್ಲ,ಹಾಕಿ ಒಲೆ ಮೇಲಿಟ್ಟು ಬೇಯಿಸಿ ಉಕ್ಕಿಸಿ ಪಾಯಸವನ್ನು ಮಾಡಿ ಕೆಂಪು ಕಮಲ ಪುಷ್ಪಗಂಧಾಕ್ಷತೆ ನೀವೇದಿಸಿ ಅಷ್ಟೋತ್ತರ ಸಹಿತವಾಗಿ ಸೂರ್ಯನನ್ನು ಪೂಜಿಸಲಾಗುವುದು.

ಈ ವ್ರತಾಚರಣೆಯಿಂದ ಎಲ್ಲರಲ್ಲೂ ಸದ್ಭಾವನೆ ವುಂಟಾಗಿ ಉತ್ತಮ ಫಲಿತಗಳು ಲಭಿಸುತ್ತವೆ ಎಂದು ಧರ್ಮರಾಯನಿಗೆ ಶ್ರೀಕೃಷ್ಣನು ವಿವರಿಸುತ್ತಾನೆನ್ನುವುದು ಭವಿಷ್ಯೋತ್ತರ ಪುರಾಣದ ಕಥನೆ. ಪ್ರಭಾಕರನ ಆಲಯವಿಲ್ಲದೆಡೆ ಅವನು ತ್ರಿಮೂರ್ತಿ ಸ್ವರೂಪನೆಂದೂ ಭಕ್ತರು ಶಿವಕೇಶವಾಲಯಳಿಗೆ ಹೋಗಿ ದರ್ಶನ ಪಡೆದುಕೊಳ್ಳಬಹುದೆಂದು ಹಿರಿಯರು ಹೇಳುತ್ತಾರೆ. ವ್ರತ ಚೂಡಾಮಣಿ ಧರ್ಮ ಸಿಂಧು ನಿರ್ಣಯಾಮೃತವೆಂದು ಅನೇಕ ಗ್ರಂಥಗಳು ರಥಸಪ್ತಮಿ ಬಗ್ಗೆ ತಿಳಿಸಿ ಹೇಳುತ್ತದೆ.

ಸೂರ್ಯದೇವ ವಿಶ್ವಚಲನ ಶಕ್ತಿ ಸೂರ್ಯಮಂತ್ರ ಅತ್ಯಂತ ಪವಿತ್ರ ಪ್ರಸಿದ್ಧಿಯಾದುದು. ಆದಿತ್ಯನಿಗೆ ಅಮರಕೋಶದಲ್ಲಿ ಐವತ್ತೆರಡು ಹೆಸರುಗಳಿವೆಯೆಂದು ತಿಳಿಸುತ್ತಾರೆ. ಶಿಲ್ಪಶಾಸ್ತ್ರದಲ್ಲಿ ಸಹ ಆದಿತ್ಯನನ್ನು ಕುರಿತು ವರ್ಣನೆ ಇದೆ. ಕಲ್ಯಾಣ ಸಪ್ತಮಿ, ಕಮಲಸಪ್ತಮಿ, ಮಹಾಸಪ್ತಮಿ, ರಥಗಳ ಸಪ್ತಮಿ, ಜಯಸಪ್ತಮಿ, ಮಾರ್ತಾಂಡಸಪ್ತಮಿ, ಅರ್ಕ ಸಂಪುಟ ಸಪ್ತಮಿ ಎಂದೂ ಇನ್ನೂ ಅನೇಕ ಹೆಸರುಗಳಿಂದ ಕರೆಯುವ ಸಪ್ತಮಿ ವ್ರತಾಚರಣೆ ಇದೆ ಎನ್ನಲಾಗಿದೆ.

ಈ ರೀತಿ ಇನ್ನೂ ಅನೇಕ ಸೂರ್ಯರಾಧನೆ ರಥ ಸಪ್ತಮಿ ಕುರಿತು ಪುರಾಣಕತೆಗಳಿದ್ದರೂ ಅವನನ್ನು ಕಾಲಾತ್ಮನೆಂದು ಪರಿಗಣಿಸಿ ಮನಃ ಪೂರ್ವಕವಾಗಿ ಸ್ಮರಿಸಿ ಪೂಜಿಸಿದಲ್ಲಿ ಮೈಮನ ಪುಳಕಗೊಂಡು ಆದರಿಂದ ಉತ್ತಮ ಫಲಿತಾಂಶವನ್ನು ನಿರೀಕ್ಷಿಸಬಹುದೆನ್ನುತ್ತಾರೆ. ಪೂರ್ವಜರು, ಅದಕ್ಕಾಗಿಯೇ ನಿತ್ಯವೂ ಸೂರ್ಯ ನಮಸ್ಕಾರ ಮಾಡಿ ಆದಿತ್ಯ ಹೃದಯ ಪಠಿಸಿದಲ್ಲಿ ಸರ್ವತೋಮುಖದ ಪ್ರಗತಿ, ಜಯ, ಯಶಸ್ಸುಗಳಿಸಿ ಸಂತಸದಿಂದ ಜೀವನ ಸಾಗಿಸಲು ಸಹಾಯಕಾರಿ ಎನ್ನುತ್ತಾರೆ ಪಂಡಿತ ಮಹಾಶಯರು.



# ಭೀಷ್ಮ ನಮನ

– ಡಾ॥ ರೂಪಶ್ರೀ ಶಶಿಕಾಂತ್
890 41 26661

ಭೀಷ್ಮ ಪಿತಾಮಹರು ಎಂದ ತಕ್ಷಣ ನೆನಪಾಗುವುದು ಶರಶಯ್ಯೆಯಲ್ಲಿ ಮಲಗಿರುವಂತಹ, ತಂದೆಯ ಸೇವೆಯಿಂದ ಇಚ್ಛಾಮರಣದ ವರವನ್ನು ಪಡೆದ ಕುರುವಂಶದ ದಿಗ್ಗಜರು. ಪ್ರತಿಯೊಬ್ಬರಿಗೂ ಮಾರ್ಗದರ್ಶಕವಾಗುವಂತಹ ಜೀವನ ನಡೆಸಿದಂತಹ ಚೇತನ. ಅಷ್ಟ ವಸುಗಳಲ್ಲಿ ಕಡೆಯವರಾದ ದ್ಯು ನಾಮಕ ವಸುವಿನ ಅವತಾರವಾಗಿ, ತಮ್ಮ ಎಂಟು ಜನ ಅಣ್ಣಂದಿರ ಆಯುಷ್ಯವನ್ನು ತಾವೇ ಜೀವಿಸಿ 800 ವರ್ಷ ಬದುಕಿದಂತಹ ಪುಣ್ಯಾತ್ಮರು "ದ್ಯು" ವಸುವಿನ ಪತ್ನಿಯು ಆಸೆ ಪಟ್ಟ ಗೌತಮರ ಹಸುವನ್ನು ಕದಿಯಲು ಹೋದಾಗ ಎಂಟು ಜನ ವಸುಗಳಿಗೂ ಭೂಲೋಕವಾಸಿಗಳಾಗಿ ಎಂಬ ಶಾಪ ಬಂದಿರುತ್ತದೆ. ತಮ್ಮ ಅಣ್ಣಂದಿರ ಶಾಪವನ್ನು ತಾವೇ ಅನು ಭವಿಸುತ್ತಾರೆ.

ಅವರು ದಾಶರಾಜನಿಗೆ, "ಆಜನ್ಮ ಬ್ರಹ್ಮಚಾರಿ' ಆಗಿರುವ ಭೀಷಣ ಪ್ರತಿಜ್ಞೆ ಮಾಡಿದ್ದರಿಂದ "ದೇವವ್ರತ" ಎಂಬ ಅವರಿಗೆ "ಭೀಷ್ಮ"ಎಂಬ ಹೆಸರು ಬಂದಿತು. ಗಂಗಾದೇವಿಯಿಂದ ಶಂತನು ಮಹಾರಾಜನಿಗೆ ಜನಿಸಿದಂತಹ ಇವರು ಗಂಗಾ ದೇವಿಯಷ್ಟೇ ಪವಿತ್ರವಾದಂತಹ ಜೀವನ ನಡೆಸಿದರು. ಗಂಗಾದೇವಿಯು ಅವರಿಗೆ ದೇವಗುರು ಬೃಹಸ್ಪತ್ಯಾಚಾರ್ಯ ರಲ್ಲಿ ಶಾಸ್ತ್ರ ವಿದ್ಯೆಯನ್ನು ಮತ್ತು ಪರಶುರಾಮ ದೇವರಲ್ಲಿ ಶಸ್ತ್ರ ವಿದ್ಯೆಯನ್ನು ಕಲಿಸಿಕೊಟ್ಟರು. 600 ವರ್ಷ ಅವರು ವಿದ್ಯಾ ಭ್ಯಾಸವನ್ನು ಮಾಡಿದರು. ಸಕಲ ಶಸ್ತ್ರ, ಶಾಸ್ತ್ರಗಳಲ್ಲಿ ಪಾರಂಗ ತರಾದಂತಹ ಇವರು ತಮ್ಮ ತಂದೆಯ ಮನಸ್ಸಿನ ಆಸೆಯನ್ನು ಅರಿತು, ಸತ್ಯವತಿ ದೇವಿಯ ತಂದೆ ದಾಶರಾಜ ಇಟ್ಟ ಶರತ್ತಿಗೆ ಒಪ್ಪಿ, ತಾನು ಎಂದೂ ಮದುವೆಯಾಗದೆ, ಹಸ್ತಿನಾಪುರದ ಸಿಂಹಾಸನಕ್ಕೆ ಕಾವಲಾಗಿ ನಿಲ್ಲುವುದಾಗಿ ಪಣತೊಟ್ಟರು. ಆ ಪ್ರತಿಜ್ಞೆಯಿಂದ ತಮ್ಮ ತಂದೆಗೆ ಅಚ್ಚು ಮೆಚ್ಚಾಗಿ ಅವರಿಂದ ಇಚ್ಛಾಮರಣದ ವರವನ್ನು ಪಡೆದುಕೊಂಡರು. ಮುಂದೆ ತಮ್ಮಂದಿರ ಸಾವು ನೋವು ಎಲ್ಲದಕ್ಕೂ ತಾವು ಬೆನ್ನೆಲುಬಾಗಿ ಸಿಂಹಾಸನವನ್ನು ಕಾಯ್ದುಕೊಂಡರು.

ತಮ್ಮ ಮರಿಮಕ್ಕಳಾದ ಕೌರವರು ಮತ್ತು ಪಾಂಡವರಿಗೆ ಉತ್ತಮ ವಿದ್ಯಾಭ್ಯಾಸವನ್ನು ಕೊಡಬೇಕು. ಸಿಂಹಾಸನಕ್ಕೆ ಸರಿ ಯಾದಂತಹ ವಾರಸುದಾರರನ್ನು ತಯಾರು ಮಾಡ ಬೇಕು ಎಂದು ದ್ರೋಣರನ್ನು ಗುರುವನ್ನಾಗಿ ನೇಮಿಸುತ್ತಾರೆ. ಧರ್ಮಿಷ್ಠ ರಾದ ಪಾಂಡವರ ಬಗ್ಗೆ ಅತ್ಯಂತ ಪ್ರೀತಿ, ಕಾಳಜಿಯನ್ನು ತೋರಿಸುತ್ತಾರೆ. ಆದರೆ ತಮ್ಮ ಮನಸ್ಸಿಗೆ ಅತ್ಯಂತ ಬೇಸರ ವನ್ನು ತಂದಂತಹ ದುರ್ಯೋಧನನ ಪಕ್ಷದಲ್ಲಿ ಅವನು ಸೋತೇ ಸೋಲುತ್ತಾನೆ ಎಂದು ಗೊತ್ತಿದ್ದರೂ ಯುದ್ಧ ಮಾಡು ತ್ತಾರೆ. ಸಿಂಹಾಸನವನ್ನು ಕಾಪಾಡುವ ಪ್ರತಿಜ್ಞೆಗೊಸ್ಕರ! ತಮ್ಮನ್ನು ಸೋಲಿಸುವ ರೀತಿಯನ್ನು ಕೂಡ ಪಾಂಡವರಿಗೆ ತಾವೇ ಉಪದೇಶಿಸುತ್ತಾರೆ! ಇದು ಅವರ ಧರ್ಮಪರತೆ ಮತ್ತು ನಿಷ್ಠೆಯನ್ನು ತೋರಿಸುತ್ತದೆ. ಅಂತರಂಗದಲ್ಲಿ ಧರ್ಮ ಪರತೆ ಬಹಿರಂಗದಲ್ಲಿ ಕರ್ತವ್ಯ ನಿಷ್ಠೆ ಎಷ್ಟು ಕಷ್ಟದ ಆಚರಣೆಯ ಲ್ಲವೇ? ಭಕ್ತಾಗ್ರೇಸರರಾದ ಅವರು ಶ್ರೀಕೃಷ್ಣನ ಪ್ರತಿಜ್ಞೆಯನ್ನು ಮುರಿಸಿ ಅವನಿಂದ ಆಯುಧವನ್ನು ಹಿಡಿಸಿದರು. ಅರ್ಜುನನ ಬಾಣಗಳಿಗೆ ಬಿದ್ದು ಶರಶಯ್ಯೆಯಲ್ಲಿ ಮಲಗಿ ಉತ್ತರಾಯಣ ಪುಣ್ಯಕಾಲಕ್ಕೆ ಕಾದರು. ಹಿಂದೂ ನಂಬಿಕೆಯ ಪ್ರಕಾರ ಉತ್ತರಾಯಣ ಪುಣ್ಯ ಕಾಲದವರೆಗೆ ಸ್ವರ್ಗದ ಬಾಗಿಲು ಮುಚ್ಚಿರುತ್ತದೆ. ಆದ್ದರಿಂದ ಭೀಷ್ಮರು ಆ ಯುದ್ಧ ಭೂಮಿಯಲ್ಲಿ ತಮ್ಮ ದೇಹ ತ್ಯಾಗವನ್ನು ಮಾಡದೆ ಅತ್ಯಂತ ನೋವು ಕಷ್ಟ ಗಳನ್ನು ಸಹಿಸಿಕೊಂಡು ಆ ಉತ್ತಮ ಕಾಲಕ್ಕಾಗಿಕಾದರು. ಭೀಷ್ಮರು ಹೊರಡುವ ಕಾಲ ಹತ್ತಿರ ಬಂದಾಗ ಶ್ರೀ ಕೃಷ್ಣನೇ ದುಃಖಿತನಾಗಿ ಸೂರ್ಯಾಸ್ತವಾಗುತ್ತಿದೆ. ಜ್ಞಾನದ ಸೂರ್ಯ ಮುಳುಗುತ್ತಿದ್ದಾನೆ ಎಂದು ಹೇಳಿದನಂತೆ ಧರ್ಮರಾಯನು ತನ್ನ ತಾತನ ಬಳಿ ಬರಲು ನಾಚಿ ನಿಂತಾಗ ಶ್ರೀ ಕೃಷ್ಣನೇ ಅವನನ್ನು ಕರೆದುಕೊಂಡು ಬಂದು ಭೀಷ್ಮರಿಗೆ ಎಲ್ಲ ಉಪ ದೇಶವನ್ನು ತನ್ನ ಜ್ಞಾನವನ್ನು ವಂಶಜನಿಗೆ ಧಾರೆ ಎರೆಯಲು ಹೇಳುತ್ತಾನೆ ಆಗ ಭೀಷ್ಮರು ನಿತ್ರಾಣವಾಗಿರುವ ನನ್ನ ಶರೀರ ದಲ್ಲಿ ರಕ್ತ ಕೂಡ ಇಲ್ಲ, ನಾನು ಹೇಗೆ ಮಾತನಾಡಲಿ? ಅದಕ್ಕೂ ಮಿಗಿಲಾಗಿ ಧರ್ಮದ ಮೂರ್ತಿರೂಪವಾದ ನೀನೇ ಇರುವಾಗ ನಿನಗಿಂತ ನಾನು ಉಪದೇಶ ಕೊಡಬೇಕೇ ಎಂದು ಕೇಳುತ್ತಾರೆ. ಆಗ ಭಗವಂತನು ನಿಮ್ಮ ವಂಶದವರಿಗೆ ನಿಮ್ಮ ಜ್ಞಾನ ವರ್ಗಾವಣೆಯಾಗಬೇಕು ನಿಮ್ಮೊಳಗೆ ನಿಂತು ನಾನೇ ಮಾತನಾಡುತ್ತೇನೆ ಎಂದು ಹೇಳುತ್ತಾನೆ ಅಂತಹ ಪುಣ್ಯ ವಂತರು ಭೀಷ್ಮ ಪಿತಾಮಹರು!

ಭಗವಂತನನ್ನು ಕೊಂಡಾಡುತ್ತಾ ಸಕಲ ರೋಗಗಳಿಗೂ ಔಷಧಿಯಾಗಿರುವಂತಹ ಮೋಕ್ಷಕ್ಕೆ ಹೆದ್ದಾರಿಯಾಗಿರುವಂತಹ ವಿಷ್ಣು ಸಹಸ್ರನಾಮವನ್ನು ಲೋಕಕ್ಕೆ ಕೊಟ್ಟು ಮಹದುಪಕಾರವನ್ನು ಮಾಡಿದ್ದಾರೆ. ಇದರ ಜೊತೆ "ಭೀಷ್ಮ ಸ್ತವರಾಜ" ಎಂಬ ಸ್ತೋತ್ರವನ್ನು ಕೊಟ್ಟಿದ್ದಾರೆ.

ಭಗವಂತ ತಮ್ಮ ಕಣ್ಣ ಮುಂದೆ ಕುಳಿತಿರುವಾಗ ಅವನನ್ನು "ಸಾವಿರದ", ಸಾವಿರ ನಾಮಗಳಿಂದ ಸೊಗಸಾಗಿ ಕೊಂಡಾಡಿ ಅದೆಷ್ಟು ಪುಣ್ಯ ಸಂಪಾದಿಸಿದ್ದಾರೆ! ನಮಗೆಲ್ಲ ಎಂತಹ ಗುರುವಾಗಿದ್ದಾರೆ! ಪ್ರತಿಯೊಂದು ನಾಮಕ್ಕೂ ವಿಧ ವಿಧವಾದ ತಾಪತ್ರಯಗಳನ್ನು ಪರಿಹರಿಸುವಂತಹ ಶಕ್ತಿ ಇದೆ.

ಸಿಂಹಾಸನವು ಧರ್ಮರಾಯನ ಸುರಕ್ಷಿತ ಕೈ ಸೇರಿದ ಮೇಲೆ ನಿರಾತಂಕವಾಗಿ ಭಗವಂತ ಮುಂದೆ ಕುಳಿತಾಗಲೇ ಉತ್ತರಾಯಣ ಕಾಲದಲ್ಲಿ ತಮ್ಮ ಪಾರ್ಥಿವ ಶರೀರವನ್ನು ಬಿಟ್ಟು ವಸು ಲೋಕವನ್ನು ಸೇರುತ್ತಾರೆ. ಎಷ್ಟೇ ಮಹಾತ್ಮರಾಗಿದ್ದರೂ ಭೀಷ್ಮರಿಗೆ ತಮ್ಮ ಅವಸಾನ ಕಾಲದಲ್ಲಿ ತಮ್ಮ ಮೂಲ ರೂಪ ಸ್ಮರಣೆಯಾಗಿದ್ದರಿಂದ ಮತ್ತೆ ವಸುಗಳಾಗುತ್ತಾರೆ.

ಹೀಗೆ ಜೀವನವನ್ನೇ ಒಂದು ಮಹಾಯಜ್ಞದ ರೀತಿ ಬಾಳಿ ಬದುಕಿದಂತಹ, ಬ್ರಹ್ಮಚರ್ಯವ್ರತ ನಿಷ್ಠರಾದ ಭೀಷ್ಮಪಿತಾಮಹರು ಮಾಘಮಾಸದ ಶುಕ್ಲ ಪಕ್ಷದ ಅಷ್ಟಮಿ "ಭೀಷ್ಮಾಷ್ಟಮಿ" ಯಂದು ಭೂಲೋಕ ತ್ಯಜಿಸುತ್ತಾರೆ.

**ಭೀಷ್ಮಾಷ್ಟಮಿ ಆಚರಣೆ**

ಆ ದಿನ ಅವರ ನೆನಪಿಗಾಗಿ ಪ್ರತಿಯೊಬ್ಬರೂ ಕೂಡ ತರ್ಪಣವನ್ನು ಕೊಡಬೇಕು. ತರ್ಪಣಾಧಿಕಾರಿಗಳು ಮತ್ತು ಅಲ್ಲದವರು ಇಬ್ಬರೂ ದಕ್ಷಿಣಾಭಿಮುಖವಾಗಿ ಕೊಡಬೇಕು.

ತರ್ಪಣಾಧಿಕಾರಿಗಳು ಎಳ್ಳಿಂದ ಅಪಸವ್ಯದಿಂದ ಕೊಡಬೇಕು ಬೇರೆಯವರು ಸವ್ಯದಿಂದ ನೀರಿನಿಂದ ಕೊಡಬೇಕು. ಎಳ್ಳಿನಿಂದ ತರ್ಪಣ ಕೊಟ್ಟವರು ರಾತ್ರಿ ಫಲಾಹಾರ ಮಾಡಬಹುದು. ರಾತ್ರಿ ಭೋಜನವಿಲ್ಲ. ತರ್ಪಣ ಕೊಡುವಾಗ ಈ ಶ್ಲೋಕ ಹೇಳಬೇಕು.

ಗಂಗಾಪುತ್ರಾಯ ಭೀಷ್ಮಾಯ ಆಜನ್ಮಬ್ರಹ್ಮಚಾರಿಣೇ ।
ಅಪುತ್ರಾಯ ಜಲಂ ದದ್ಯಾಂ ನಮೋ ಭೀಷ್ಮಾಯ ವರ್ಮಣೇ ।
ಭೀಷ್ಮ ಶಾಂತನವೋ ವೀರ ಸತ್ಯವಾದೀ ಜಿತೇಂದ್ರಿಯ
ಅಭಿರದ್ಭಿರವಾಪ್ನೋತು ಪುತ್ರಪೌತ್ರೋಚಿತಾಂ ಕ್ರಿಯಾಮ್।
ವೈಯಾಘ್ರಪಾದಗೋತ್ರಾಯ ಸಾಂಕೃತ್ಯಪ್ರವರಾಯ ಚ ।
ಅಪುತ್ರಾಯ ದದಾಮ್ಯೇತಜ್ಜಲಂ ಭೀಷ್ಮಾಯ ವರ್ಮಿಣೇ ।

ಭೀಷ್ಮರಿಗೆ ಅರ್ಘ್ಯ ಕೊಡುವ ಮಂತ್ರ ಹೀಗಿದೆ.

ವಸೂನಾಮವತಾರಾಯ ಶಂತನೋರಾತ್ಮಜಾಯ ಚ ।
ಅರ್ಘ್ಯಂ ದದಾಮಿ ಭೀಷ್ಮಾಯ ಅಬಾಲಬ್ರಹ್ಮಚಾರಿಣೇ॥

ವರ್ಷವಿಡೀ ಮಾಡಿದ ಪಾಪದ ನಾಶಕ್ಕೆ ಇಂದು ಶ್ರೀ ಭೀಷ್ಮಾಚಾರ್ಯರಿಗೆ ತರ್ಪಣ ನೀಡಬೇಕು ಎಂದು ಈ ಕೆಳಗಿನ ಶ್ಲೋಕ ಹೇಳುತ್ತದೆ.

ಶುಕ್ಲಾಷ್ಟಮ್ಯಾಂ ತು ಮಾಘಸ್ಯ
ದದ್ಯಾತ್ ಭೀಷ್ಮಾಯ ಯೋ ಜಲಮ್ ।
ಸಂವತ್ಸರ ಕೃತಂ ಪಾಪಂ
ತತ್ಕ್ಷಣಾದೇವ ನಶ್ಯತೇ ॥

ಇಂತಹ ಭೀಷ್ಮಪಿತಾಮಹರ ಜೀವನದಿಂದ ನಾವು ಜ್ಞಾನ, ಭಕ್ತಿ ಮತ್ತು ವೈರಾಗ್ಯದ ಸಾಧನೆಯನ್ನು ಹೇಗೆ ಮಾಡಬೇಕು. ಕೊಟ್ಟ ಮಾತಿಗೆ ತಪ್ಪದಂತೆ ಪ್ರತಿಜ್ಞೆಯನ್ನು ಉಳಿಸಿಕೊಂಡದ್ದರ ಫಲ ಭಗವಂತನ ಅಪಾರ ಕಾರುಣ್ಯಕ್ಕೆ ಪಾತ್ರರಾದರು ಅವರ ಜೀವನದ ಸ್ಮರಣೆಯನ್ನು ಮಾಡಿ. ಅವರು ಕಲಿಸಿ ಕೊಟ್ಟಂತಹ ಪಾಠಗಳನ್ನು ನಮ್ಮ ಜೀವನದಲ್ಲೂ ನಾವು ಬೆಳೆಸಿಕೊಳ್ಳೋಣ ಭೀಷ್ಮಾಷ್ಟಮಿಯಂದು ಅವರಿಗೆ ಶರಣಾಗೋಣ ಎಂದು ಪ್ರಾರ್ಥಿಸುತ್ತೇನೆ.



**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು. ಜೊತೆಗೆ " ಓಂ ನಮೋ ವೇಂಕಟೇಶಾಯ" ಎಂದು ನಾಮಸ್ಮರಣೆಯನ್ನು ಧ್ಯಾನಿಸಬೇಕು. ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು. ಬೇರೆಯವರನ್ನು ಸಂಬೋಧಿಸುವಾಗ ಗೋವಿಂದಾ ಎಂದು ಸಂಬೋಧನೆಯನ್ನು ಮಾಡೋಣ. ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ ಇರಬಹುದು.**

# ಶ್ರೀನಿವಾಸಮಂಗಾಪುರಂ,
# ಶ್ರೀ ಕಲ್ಯಾಣವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**07-02-2026 ರಿಂದ 16-02-2026 ರ ವರೆಗೆ**



| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 07-02-2026 | ಶನಿವಾರ | -------------- | ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ |
| 08-02-2026 | ಭಾನುವಾರ | ತಿರುಚ್ಚಿ ಉತ್ಸವ , ಧ್ವಜಾರೋಹಣ | ದೊಡ್ಡಶೇಷವಾಹನ |
| 09-02-2026 | ಸೋಮವಾರ | ಚಿಕ್ಕಶೇಷವಾಹನ | ಹಂಸವಾಹನ |
| 10-02-2026 | ಮಂಗಳವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 11-02-2026 | ಬುಧವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 12-02-2026 | ಗುರುವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 13-02-2026 | ಶುಕ್ರವಾರ | ಹನುಮದ್ವಾಹನ, ಸಾ॥ ವಸಂತೋತ್ಸವ | ಗಜವಾಹನ |
| 14-02-2026 | ಶನಿವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 15-02-2026 | ಭಾನುವಾರ | ರಥೋತ್ಸವ | ಅಶ್ವವಾಹನ |
| 16-02-2026 | ಸೋಮವಾರ | ಪಲ್ಲಕಿ ಉತ್ಸವ, ತೀರ್ಥವಾರಿ, ಅವಭೃಥ, ಚಕ್ರಸ್ನಾನ | ತಿರುಚ್ಚಿ ಉತ್ಸವ, ಧ್ವಜಾವರೋಹಣ |

# ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ
# ಬ್ರಹ್ಮೋತ್ಸವಗಳು

**07-02-2026 ರಿಂದ 17-02-2026 ರ ವರೆಗೆ**

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 07-02-2026 | ಶನಿವಾರ | -------------- | ಮೂಷಿಕವಾಹನದ ಮೇಲೆ ವಿನಾಯಕಸ್ವಾಮಿ ಅಂಕುರಾರ್ಪಣೆ |
| 08-02-2026 | ಭಾನುವಾರ | (ಪಲ್ಲಕ್ಕಿ ಉತ್ಸವ) ಧ್ವಜಾರೋಹಣ | ಹಂಸವಾಹನ |
| 09-02-2026 | ಸೋಮವಾರ | ಸೂರ್ಯಪ್ರಭವಾಹನ | ಚಂದ್ರಪ್ರಭ ವಾಹನ |
| 10-02-2026 | ಮಂಗಳವಾರ | ಭೂತವಾಹನ | ಸಿಂಹ ವಾಹನ |
| 11-02-2026 | ಬುಧವಾರ | ಮಕರವಾಹನ | ಶೇಷವಾಹನ |
| 12-02-2026 | ಗುರುವಾರ | ತಿರುಚ್ಚಿ ಉತ್ಸವ | ಅಧಿಕಾರ ನಂದಿ ವಾಹನ |
| 13-02-2026 | ಶುಕ್ರವಾರ | ವ್ಯಾಘ್ರವಾಹನ | ಗಜವಾಹನ |
| 14-02-2026 | ಶನಿವಾರ | ಕಲ್ಪವೃಕ್ಷವಾಹನ | ಅಶ್ವವಾಹನ |
| 15-02-2026 | ಭಾನುವಾರ | ರಥೋತ್ಸವ | ನಂದಿವಾಹನ (ಮಹಾಶಿವರಾತ್ರಿ) |
| 16-02-2026 | ಸೋಮವಾರ | ಪುರುಷಾಮೃಗವಾಹನ | ಕಲ್ಯಾಣೋತ್ಸವ, ತಿರುಚ್ಚಿ ಉತ್ಸವ |
| 17-02-2026 | ಮಂಗಳವಾರ | ಸೂರ್ಯಪ್ರಭವಾಹನದಲ್ಲಿ ನಟರಾಜಸ್ವಾಮಿ , ತ್ರಿಶೂಲಸ್ನಾನ | ಧ್ವಜಾವರೋಹಣ, ರಾವಣಾಸುರವಾಹನ |





# ಧಾರಾವಾಹಿ

# ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ

**- ಡಾ|| ಬಿ.ಎನ್.ಶ್ರೀನಿವಾಸನ್**

**ಕಳೆದ ಸಂಚಿಕೆಯಿಂದ**

**ನಿತ್ಯ ಪೂಜೆ ಹಾಗೂ ಪೂಜಾ ಕಾಲ :**

ಮುಂದೆ ನೀಡಲಾಗಿರುವ ವಿವರಗಳು ಆಲಯದಲ್ಲಿ ಈಚಿನವರೆಗೆ ಅನುಸರಣೆಯಾಗುತ್ತಿದ್ದ ಕಾಲಮಾನಗಳನ್ನು ತಿಳಿಸುತ್ತವೆ. 1979 ರಲ್ಲಿ ತಿ.ತಿ.ದೇವಸ್ಥಾನಗಳು ಸೇವೆಗಳ ಕಾಲಗಳನ್ನು ಪರಿಷ್ಕರಿಸಿ ಬೆಳಗ್ಗೆ 6 ಗಂಟೆಗೆ ಮೊದಲು ಎಲ್ಲ ಸೇವೆಗಳನ್ನೂ ಪೂರ್ಣವಾಗುವಂತೆ ಮಾಡಿ ನಂತರ ಮಧ್ಯ ರಾತ್ರಿಯವರೆಗೆ ದರ್ಶನಾವಕಾಶವನ್ನು ಕಲ್ಪಿಸಿದೆ. ಆರ್ಜಿತ ಸೇವಾಶುಲ್ಕಗಳನ್ನೂ ಬದಲಾಯಿಸಲಾಗಿದೆ. (ಇದನ್ನು ಎನ್. ರಮೇಶನ್ ಬರೆದದ್ದು 1980ರಲ್ಲಿ. ಅನಂತರದಲ್ಲಿಯೂ ನಿತ್ಯ ಪೂಜೆಯ ಕಾಲ-ಆರ್ಜಿತ ಸೇವಾ ಶುಲ್ಕಗಳು ಹೆಚ್ಚಿನ ಜನರ ಅನುಕೂಲಕ್ಕೆ ತಕ್ಕಂತೆ ಪರಿಷ್ಕೃತವಾಗಿವೆ-ಅನುವಾದಕ-2015)

**ಸುಪ್ರಭಾತ :** 3 ರಿಂದ 3.30, ಈ ಸೇವೆಯಲ್ಲಿ ಸ್ವಾಮಿಯ ಸುಪ್ರಭಾತ,ಸ್ತೋತ್ರ,ಪ್ರಪತ್ತಿ, ಮಂಗಳಾಶಾಸನಗಳನ್ನು ಹಾಡಲಾಗುತ್ತದೆ. ತಾಳ್ಳಪಾಕ ಅನ್ನಮಾಚಾರ್ಯರ ವಂಶದವರು ಕೀರ್ತನೆಯನ್ನು ಹಾಡುವರು.

ಶ್ರೀವೆಂಕಟೇಶ್ವರ ಸುಪ್ರಭಾತವು ನಾಲ್ಕು ಭಾಗಗಳಲ್ಲಿದೆ.

ಅ) ಸುಪ್ರಭಾತ-ಸ್ವಾಮಿಯನ್ನು ನಿದ್ದೆಯಿಂದೆಬ್ಬಿಸುವ 29 ಶ್ಲೋಕಗಳು.

ಆ) ಸ್ತೋತ್ರ-ಸ್ವಾಮಿಯ ಮಹಿಮೆಯನ್ನು ಕೀರ್ತಿಸುವ 11 ಶ್ಲೋಕಗಳು.

ಇ) ಪ್ರಪತ್ತಿ-ಸ್ವಾಮಿಯಲ್ಲಿ ಶರಣಾಗುವುದನ್ನು ಸೂಚಿಸಿ ಹಾಡುವ 16 ಶ್ಲೋಕಗಳು.

ಈ) ಮಂಗಳಾಶಾಸನ-ಸ್ವಾಮಿಯ ಕೀರ್ತಿಯನ್ನು ಬೆಳೆಸುವ 14 ಶ್ಲೋಕಗಳು-ಒಟ್ಟು ಎಪ್ಪತ್ತು.

ಸುಪ್ರಭಾತದ ಮೊದಲ ಶ್ಲೋಕ ಕೌಸಲ್ಯೆಯ ಮಗ ರಾಮನಿಗೆ ಹೇಳಿದ್ದು,ಎರಡನೆಯದು ಕಮಲಾಪತಿ ಗೋವಿಂದನಿಗೆ, ಮೂರು,ನಾಲ್ಕು ಲಕ್ಷ್ಮಿಯದು. ನಂತರದ 24 ಶ್ಲೋಕಗಳು ವೆಂಕಟಾಚಲಪತಿ,ಶೇಷಾಚಲಪತಿ, ಶ್ರೀನಿವಾಸ,ಶೇಷಾದ್ರಿವಿಭು ಮೊದಲಾದ ಹೆಸರಿನ ವೆಂಕಟನಾಯಕನನ್ನು ಉದ್ದೇಶಿಸಿ ಹೇಳಿದ್ದು, 29ನೆಯ ಶ್ಲೋಕವು ಭಕ್ತನನ್ನು ಮೋಕ್ಷ ಕಾಮಿಯಾಗಲು ಒತ್ತಾಯಿಸುತ್ತದೆ.

ಸ್ತೋತ್ರವು ಪರಮಾತ್ಮನಿಗೆ ತನ್ನ ಸರ್ವವನ್ನೂ ಅರ್ಪಿಸುವುದನ್ನೂ ಅವನ ರಕ್ಷಣೆ ಕೋರುವುದನ್ನೂ ವಿವರಿಸುತ್ತದೆ. ಹತ್ತನೆಯ ಶ್ಲೋಕವಂತೂ ಹೃದ್ರಮ್ಯವಾಗಿ ಭಕ್ತನ ಆಕಾಂಕ್ಷೆಯನ್ನು ವಿವರವಾಗಿ ಚಿತ್ರಿಸುತ್ತದೆ. ತಾನು ಬಹುದೂರದಿಂದ ಬಂದವನೆಂದೂ,ಅಡಿಗಡಿಗೆ ಬರಲಾಗದವನೆಂದೂ, ಆದರೂ ದೇವರು ತನ್ನನ್ನು ಪದೇ ಪದೇ ಸೇವಿಸುವ ಹತ್ತಿರದ ಭಕ್ತನಂತೆಯೇ ಕಂಡು ಅನುಗ್ರಹಿಸಬೇಕೆಂದು ಬೇಡಿಕೆಯಿದೆ.

ಅಹಂದೂರತಸ್ತೇ ಪದಾಂಭೋಜಯುಗ್ಮ
ಪ್ರಣಾಮೇಚ್ಛಯಾಗತ್ಯ ಸೇವಾಂ ಕರೋಮಿ
ಸಕೃತ್ಸೇವಯಾ ನಿತ್ಯಸೇವಾಫಲಂ ತ್ವಂ
ಪ್ರಯಚ್ಛ ಪ್ರಯಚ್ಛ ಪ್ರಭೋ ವೇಂಕಟೇಶ

(ಈ ಸ್ವಲ್ಪ ಸೇವೆಯಿಂದಾಗಿ ಇದಕ್ಕೆ ಫಲವಾಗಿ ನಿತ್ಯ ಸೇವೆ ಮಾಡುವ ಭಾಗ್ಯವನ್ನು ಕರುಣಿಸಬೇಕು - ಇತರ ಫಲದ ಆಸೆಯಿಲ್ಲ ಎಂಬುದೂ ಸೂಚ್ಯವಾಗಿದೆ - ಅನುವಾದಕ)

ಪ್ರಪತ್ತಿಯಲ್ಲಿನ ಮೊದಲ ಪದ್ಯ ಶ್ರೀಲಕ್ಷ್ಮಿಯನ್ನು ಉದ್ದೇಶಿಸಿದ್ದು ಆಕೆಯನ್ನು ವಾತ್ಸಲ್ಯಮಯಿ ಮಾತೆಯೆಂದು ಕರೆದ ಚಿನ್ಹವಿದೆ.

ಮುಂದಿನ ಹದಿನೈದು ಪದ್ಯಗಳಲ್ಲಿ ಅನುಪಮವಾದ ಪದಜಾಲದಿಂದಲೂ ಅತುಲವಾದ ಭಕ್ತಿಯಿಂದಲೂ ಅಹಂಕಾರವನ್ನು ಪೂರ್ಣವಾಗಿ ತೊರೆದು ತನ್ನನ್ನು ತಾನು ತನ್ನೆಲ್ಲದರೊಡನೆ ಸ್ವಾಮಿಯಲ್ಲಿ ಶರಣಾಗುವುದನ್ನು ಕಾಣಬಹುದು. ಮೊದಲನೆಯ ಪದ್ಯದಲ್ಲಿ ಲಕ್ಷ್ಮಿಯನ್ನು ಕುರಿತ ಪ್ರಾರ್ಥನೆಯಲ್ಲಿ

- ತಂದೆಯತ್ತ ತಿರುಗಿದ ಮಗುವು ತಾಯಿಯ ಪ್ರೋದ್ಬಲವನ್ನು ನಿರೀಕ್ಷಿಸುವಂತೆ, ಭಗವಂತನಲ್ಲಿ ಶರಣಾಗುವ ಮುನ್ನ ಸಕಲ ಜೀವಜಾಲದ ಮಾತೆಯ ನೆರವನ್ನು ಪಡೆಯುವ ಅಪೇಕ್ಷೆ ಯಿದೆ. ಪ್ರಪತ್ತಿಯ ಕೊನೆಯ ಅಥವಾ ಹದಿನಾರನೆಯ ಪದ್ಯ ದಲ್ಲೂ ಇದೇ ಭಾವನೆಯಿದೆ.

ಋಗ್ವೇದವು ಹೇಳುವಂತೆ ಮನುಷ್ಯ ಪಡೆಯಬಹುದಾದ ಸರ್ವೋತ್ತಮ ಪದವಿಯಾದ ಸ್ವಾಮಿಯ ಪಾದಸಾಕ್ಷಾತ್ಕಾರ ವನ್ನು ಪ್ರಪತ್ತಿಯ ಇತರ ಪದ್ಯಗಳು ಹೇಳುತ್ತವೆ. ಇದನ್ನೇ ಪಾರ್ಥಸಾರಥಿಯು ಅರ್ಜುನನಿಗೆ ಸೂಚಿಸಿದಂತೆ ಆಲಯದ ಧ್ರುವಬೇರದ ಹಸ್ತವು ಸೂಚಿಸುವುದು.

ಮಂಗಳಾಶಾಸನದಲ್ಲಿ ಒಂದು ಪದ್ಯದಲ್ಲಿ- 9 ನೆಯ ಪದ್ಯದಲ್ಲಿ - ಸ್ವಾಮಿಯು ತನ್ನ ಪಾದಗಳನ್ನು ತನ್ನ ಕೈಯಿಂದ ತೋಲಿಸುತ್ತ ಇವೇ ಮಾನವ ಪಡೆಯಬಹುದಾದ ಅತ್ಯುನ್ನತ ಪದವೆಂದು ಸೂಚಿಸುವ ಅರ್ಥದ ಮನೋಹರವಾದ ಮಾತು ಗಳಿವೆ.

ಪ್ರಾಯಸ್ಸ್ವ ಚರಣೌ ಪುಂಸಾಂ ಶರಣ್ಯತ್ವೇನ ಪಾಣಿನಾ
ಕೃಪಯಾ ದಿಶತೇ ಶ್ರೀಮದ್ವೇಂಕಟೇಶಾಯ ಮಂಗಳಂ

ಭಕ್ತನು ಭಗವಂತನ ಸಾಮೀಪ್ಯವನ್ನು, ಸರ್ವಕಾಲ ದಲ್ಲಿಯೂ ಪಡೆದು,ತನ್ನ ಆತ್ಮವನ್ನು,ದೇವರ ಶಾಶ್ವತವಾದ ಕಾರುಣ್ಯದಲ್ಲಿ ಉದ್ಧಾರಗೊಳಿಸಿಕೊಳ್ಳುವ ಅವಕಾಶವಿದು. ನಿಜವೆಂದರೆ ದೇವರಲ್ಲಿ ನಿಜವಾದ ಶರಣಾಗತಿಯನ್ನು ಮಾಡಲು ಬಂದವರಲ್ಲಿ ಅನೇಕರ ಅನುಭವವೂ ಇದೇ ಆಗಿ ರುತ್ತದೆ. ಸ್ವಾಮಿಯ ಮೃದು ಮಧುರ ಮಂದಹಾಸದ ಭವ್ಯತೆ ಯೆಂದರೆ ಅದನ್ನು ದರ್ಶಿಸುವ ಪ್ರತಿಯೊಬ್ಬನೂ ತನ್ನ ಅಹಂ ಕಾರವನ್ನು ಕೂಡಲೇ ಕಳೆದುಕೊಳ್ಳುತ್ತಾನೆ.

ಬಂಗಾರದ ಬಾಗಿಲ ಬಳಿ ಸುಪ್ರಭಾತವನ್ನು ಹಾಡಿದ ಮೇಲೆ ಹಿಂದಿನ ರಾತ್ರಿ ಸ್ನಪನ ಮಂಟಪದಲ್ಲಿ ನಿದ್ದೆಗೊಳಿಸಿದ್ದ ಭೋಗ ಶ್ರೀನಿವಾಸ ಮೂರ್ತಿಯನ್ನು ಎಬ್ಬಿಸಿ ಮತ್ತೆ ಗರ್ಭಗೃಹ ಸೇರಿಸಲಾಗುವುದು. ದೇವರಿಗೆ ನವನೀತ ಆರತಿಯನ್ನು ನೀಡಲಾಗುತ್ತದೆ ಹಾಗೂ ಹಸುವಿನ ಹಾಲಿಗೆ ಬೆಣ್ಣೆ ಸಕ್ಕರೆ ಗಳನ್ನು ಬೆರೆಸಿ ನಿವೇದಿಸಲಾಗುತ್ತದೆ. ನಂತರ ಈ ಪ್ರಸಾದ ವನ್ನು ಸರ್ವದರ್ಶನಕ್ಕೆ ಬಂದ ಭಕ್ತರಲ್ಲಿ ವಿತರಿಸಲಾಗುವುದು.

ವೇದಾಂತ ದೇಶಿಕರ ಜೀವನದ ಅಂತ್ಯಕಾಲದಲ್ಲಿದ್ದಿರ ಬಹುದಾದ ಪ್ರತಿವಾದಿ ಭಯಂಕರ ಅಣ್ಣನ್ ಸುಪ್ರಭಾತವನ್ನು ರಚಿಸಿದರೆಂದು ನಂಬಲಾಗಿದೆ.

15ನೇ ಶತಮಾನದ ಪೂರ್ವದಲ್ಲಿ ಆಲಯದಲ್ಲಿ ಪ್ರಾತಃ ಕಾಲವನ್ನು ಯಾವರೀತಿ ಸ್ವಾಗತಿಸುತ್ತಿದ್ದರೆಂಬುದರ ಬಗ್ಗೆ ಶಾಸನಾಧಾರಗಳು ಯಾವುವೂ ಇಲ್ಲ. ಕ್ರಿ.ಶ.1430 ರ ಒಂದು ಶಾಸನವು ದೇವರಾಯ ಮಹಾರಾಯನು ಆಲಯದಲ್ಲಿ ವೇದಪಾರಾಯಣದ ಏರ್ಪಾಡುಗಳನ್ನು ಮಾಡಿದನೆಂದು ಹೇಳುತ್ತದೆ. ಇದರಂತೆಯೇ ಕ್ರಿ.ಶ.1476 ಕ್ಕೆ ಮುಂಚೆ ಆಲಯ ದಲ್ಲಿ ತಾಳ್ಳಪಾಕ ಪ್ರಬಂಧಗಳ ಕೀರ್ತನೆ ನಡೆಯುತ್ತ ಇತ್ತೆಂಬ ಆಧಾರಗಳಿಲ್ಲ. ತಮಿಳುಪ್ರಬಂಧ ತಿರುಪ್ಪಳ್ಳಿಯೆಳುಚ್ಚಿ ಸಂಸ್ಕೃತದ ಸುಪ್ರಭಾತದ ಪರ್ಯಾಯವಾಗಿದ್ದು, ಈಗ ಸುಪ್ರಭಾತದ ಹೊತ್ತಿನಲ್ಲಿ ಹಾಡದೆ ನಂತರ ತೋಮಾಲ ಸೇವಾಕಾಲದಲ್ಲಿ ಹಾಡಲಾಗುತ್ತದೆ. ಕ್ರಿ.ಶ.1434ರ ಒಂದು ಶಾಸನವು ಆ ವರ್ಷವೇ ಸ್ವಾಮಿಗೆ ಅರುಣೋದಯ,ಸಂಧಿಯ ನಿವೇದನೆ ಯಾದ ಮೊದಲ ವರ್ಷವೆಂದು ತಿಳಿಸುತ್ತದೆ.

ಸದ್ಯಕ್ಕೆ ತಿಳಿಯಬಹುದಾದ ಅಂಶವೆಂದರೆ 15ನೇ ಶತಮಾನದ ಪೂರ್ವದಲ್ಲಿ ಆಲಯದಲ್ಲಿ ಬೆಳಗಿನ ಹೊತ್ತಿಗೆ ಪೂಜೆಯೆಂದರೆ ಮೌನ ಪೂಜೆ ಮಾತ್ರವಾಗಿದ್ದಿತು.

**ವಿಶ್ವರೂಪ ಸರ್ವದರ್ಶನ :**

ಸುಪ್ರಭಾತವಾದನಂತರ ಆಲಯದ ಹೊರಗೆ ಕಾದಿ ರುವ ಭಕ್ತರಿಗೆ ವಿಶ್ವರೂಪ ಸರ್ವದರ್ಶನದ ಅವಕಾಶ ನೀಡ ಲಾಗುವುದು. ಇದನ್ನು ಆರ್ಜಿತಸೇವೆಯನ್ನಾಗಿ ಮಾಡಲಾಗಿದ್ದು, ಇಂದು ಇದೇ ಸುಪ್ರಭಾತಸೇವೆ ಎಂದಾಗಿದೆ.

ಆಲಯದಲ್ಲಿನ ಒಂದು ಪರಂಪರಾಗತ ನಂಬಿಕೆಯಂತೆ ಬ್ರಹ್ಮನೂ ಇತರ ದೇವತೆಗಳೂ ರಾತ್ರಿಯಲ್ಲಿ ಬಂದು ಸ್ವಯಂ ಭುವಾದ ಈ ತಿರುಮಲೆಯಪ್ಪನನ್ನು ಸರ್ವಜನ ಹಿತಕ್ಕಾಗಿ ಪೂಜಿಸುವರು. ಇಂದಿಗೂ ರಾತ್ರಿಯ ವೇಳೆಯಲ್ಲಿ ಗರ್ಭ ಗುಡಿಯ ಬಾಗಿಲು ಮುಚ್ಚುವ ಮೊದಲು ಆಗಮಶಾಸ್ತ್ರದ ಪ್ರಕಾ ರವಾದ ಪೂಜಾದ್ರವ್ಯಗಳನ್ನು ಒಳಗೊಂಡ ಐದು ಶುದ್ಧ ನೀರಿನ ಬಟ್ಟಲುಗಳನ್ನು ದೇವರ ಪಾದದ ಬಳಿಯಿಡುತ್ತಾರೆ. ಇಲ್ಲಿಗೆ ನಂತರ ಬ್ರಹ್ಮನೇ ಆಗಮಿಸಿ ಪೂಜೆ ನಡೆಸುವನೆಂದು ಪ್ರತೀತಿ. ಹೀಗಾಗಿ ಬ್ರಹ್ಮನು ಪೂಜಿಸಿದ ನಂತರ ಬಟ್ಟಲುಗಳಲ್ಲಿ ಉಳಿದ ನೀರನ್ನು ಭಕ್ತರಲ್ಲಿ ಪ್ರಸಾದವೆಂದು ವಿತರಣೆ ಮಾಡಲಾಗುತ್ತದೆ. ಈ ಸೇವೆಯನ್ನು ಸರ್ವದರ್ಶನವೆಂದು-ಶುಕ್ರವಾರಗಳ ಹೊರತು ಮಿಕ್ಕ ದಿನಗಳಲ್ಲಿ-ಸರ್ವರಿಗೂ ಉಚಿತವೆಂದು ಕರೆ ಯಲಾಗಿದೆ.

(ಮುಂದುವರೆಯುತ್ತದೆ)

# ಪಟ್ರೇನಹಳ್ಳಿಯ ವೇಣುಗೋಪಾಲಸ್ವಾಮಿ ದೇವಾಲಯ

- ಕೆಂಗೇರಿ ಚಕ್ರಪಾಣಿ
94483 86886

ಚಿಕ್ಕಬಳ್ಳಾಪುರ ಜಿಲ್ಲೆಯ, ಅದೇ ತಾಲ್ಲೂಕಿಗೆ ಸೇರುವ ಪಟ್ರೇನ ಹಳ್ಳಿಯು, ಚಿಕ್ಕಾಬಳ್ಳಾಪುರ-ಶಿಡ್ಲಘಟ್ಟ ರಸ್ತೆಯಲ್ಲಿ, ಚಿಕ್ಕಬಳ್ಳಾಪುರ ದಿಂದ 3 ಕಿ.ಮೀ. ದೂರದಲ್ಲಿರುವ ಗ್ರಾಮ. ಚಿಕ್ಕಬಳ್ಳಾಪುರ ಕೋಲಾರ ರೈಲು ಮಾರ್ಗವು ಪ್ರಸ್ತುತ ಗ್ರಾಮದ ಮೂಲಕ ಹಾದು ಹೋಗುವುದು ಪಟ್ರೇನಹಳ್ಳಿ ಗ್ರಾಮದಲ್ಲಿರುವ ವೇಣುಗೋಪಾಲ ದೇವಾಲಯವು ವಿಜ ಯನಗರ ಶೈಲಿಯಲ್ಲಿ ರಚಿತವಾಗಿರುವ ಅಂದದ ಆಲಯವಾಗಿದೆ. ದೇವಾಲಯವು ಸುಂದರವಾದ ಪ್ರವೇಶದ್ವಾರ, ಮುಖಮಂಟಪ, ನವರಂಗ ಅಂತರಾಳ ಹಾಗೂ ಗರ್ಭಗೃಹಗಳನ್ನೊಳಗೊಂಡ ಬೃಹತ್ ರಚನೆಯಾಗಿದೆ. ವಿಶಾಲವಾದ ಪ್ರಾಕಾರವನ್ನು ಹೊಂದಿರುವ ದೇವಾ ಲಯದಲ್ಲಿ ಭಕ್ತಾದಿಗಳು ತಂಗಲು ಶಿಲಾಕೊಠಡಿಗಳಿವೆ.

ದೇವಾಲಯದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಬಳ್ಳಿಗಳನ್ನು ಹಿಡಿ ದಿರುವ ಶಿಲಾಬಾಲಕಿಯರ ಶಿಲ್ಪಗಳಿವೆ. ಪ್ರವೇಶದ್ವಾರದ ಮಧ್ಯದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಸುಂದರ ಶಿಲ್ಪವಿದೆ. ಈ ದೇವಾಲ ಯದ ರಂಗಮಂಟಪದಲ್ಲಿ 20 ಕಂಬಗಳಿದ್ದು ನಡುವೆ ಆಳವಾದ ಭುವನೇಶ್ವರಿಯಿದೆ. ಭುವನೇಶ್ವರಿಯ ಕೆಳಗಿನ ಸಾಲಿನಲ್ಲಿ ರಾಮ ಮತ್ತು ಕೃಷ್ಣರಿಗೆ ಸಂಬಂಧಿಸಿದ ಸುಂದರ ಮೂರ್ತಿಗಳನ್ನು ಅಳವಳಪಡಿಸಿರು ವರು. ಇವು ಅಧ್ಯಯನಕ್ಕೆ ಯೋಗ್ಯವಾದ ಮೂರ್ತಿಗಳಾಗಿವೆ. ರಂಗ ಮಂಟಪದ ನಾಲ್ಕೂ ಮೂಲೆಗಳಲ್ಲಿ ನಡುವೆ ಪ್ರಧಾನ ಸ್ಥಂಭವಿದ್ದು ಸುತ್ತಲೂ ನಾಲ್ಕು ಕಂಬಗಳಿರುವ ಸಂಯುಕ್ತ ಸ್ತಂಭಗಳು ಬಹಳ ಕಲಾ ತ್ಮಕವಾಗಿವೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಕಂಬಗಳ ಮೇಲ್ಭಾ ಗದಲ್ಲಿ ಬಾಗಿದ ಕಮಲದ ಮೊಗ್ಗಿನ ಪುಷ್ಪ ಬೋದಿಗೆಗಳಿವೆ. ಕಂಬದ ಮೇಲೆ ಆಂಜನೇಯ ಗರುಡ, ಪ್ರಣಾಮ ಮುದ್ರೆಯಲ್ಲಿರುವ ಭಕ್ತ ಮುಂತಾದ ಉಬ್ಬು ಶಿಲ್ಪಗಳಿವೆ.

62

ದೇವಾಲಯದ ಗರ್ಭ ಗುಡಿಯಲ್ಲಿ ಕಣ ಶಿಲೆಯಲ್ಲಿ ಮಾಡಿದ ರುಕ್ಮಿಣಿ, ಸತ್ಯಭಾಮರ ಸಹಿತವಿರುವ ಕೊಳಲು ಗೋಪಾಲ ಕೃಷ್ಣನ ಆಕರ್ಷಕಮೂರ್ತಿಯಿದೆ. ಅಲಂಕೃತ ಪ್ರಭಾವಳಿಯ ಕೆಳಗೆ ಕತ್ತರಿ ಕಾಲನ್ನು ಹಾಕಿಕೊಂಡು ಕೊಳಲು ನುಡಿಸುತ್ತಿರುವ ಗೋಪಾ ಲನು ಚತುರ್ಭುಜನಾಗಿದ್ದು, ಚಕ್ರ,ಶಂಖಗಳನ್ನು ಧರಿಸಿರುವನು. ದೇವನ ಇಕ್ಕೆಲಗಳಲ್ಲಿ ತಲೆಯೆತ್ತಿ ಮುರಳಿಯ ಗಾನವನ್ನು ಆಲಿಸುತ್ತಿರುವ ಗೋವು ಗಳಿವೆ. ಈ ದೇವಾಲಯದ ಉತ್ಸವ ಮೂರ್ತಿಗಳು ಬಹಳ ಅಂದವಾ ಗಿವೆ. ರುಕ್ಮಿಣಿ, ಸತ್ಯಭಾಮ ಸಹಿತನಾಗಿರುವ ವೇಣುಗೋಪಾಲನು ಹಸ ನ್ಮುಖಿಯಾಗಿರುವನು. ಕೃಷ್ಣಪರಮಾತ್ಮನ ವಾಹನವಾದ ಗರುಡ ದೇವನ ಮೂರ್ತಿಯೂ ಕಲಾತ್ಮಕವಾಗಿದೆ.


ಪಟ್ರೇನಹಳ್ಳಿಯ ವೇಣುಗೋಪಾಲ ದೇವಾಲಯವನ್ನು ಸ್ಥಳೀ ಯರು ಆಸಕ್ತಿ ವಹಿಸಿ ಮೂಲ ಸ್ವರೂಪಕ್ಕೆ ಧಕ್ಕೆ ಬಾರದಂತೆ ಜೀರ್ಣೋ ದ್ಧಾರ ಮಾಡಿರುವರು. ಈ ದೇವಾಲಯದ ವಾಸ್ತು ವೈಭವವನ್ನು ಗಮನಿ ಸಿದರೆ ಗತಕಾಲದಲ್ಲಿ ಇದೊಂದು ಪ್ರಸಿದ್ಧ ದೇವಾಲಯವಾಗಿತ್ತು ಎಂದು ಖಚಿತವಾಗಿ ಹೇಳಬಹುದು. ಜಿಲ್ಲೆಯ ನಂದಿ. ರಂಗಸ್ಥಳ ಮುಂತಾದ ಸ್ಥಳಕ್ಕೆ ಬರುವ ಪ್ರವಾಸಿಗರು ಚಿಕ್ಕಬಳ್ಳಾಪುರಕ್ಕೆ ಅತೀ ಸಮೀಪದಲ್ಲಿರುವ ಪಟ್ರೇನಹಳ್ಳಿಯ ವೇಣುಗೋಪಾಲ ದೇವಾಲಯವನ್ನೂ ದರ್ಶಿಸ ಬಹುದು.

**ಹೀಗೆಬನ್ನಿ:** ಚಿಕ್ಕಬಳ್ಳಾಪುರ -ಶಿಡ್ಲಘಟ್ಟ ರಸ್ತೆಯಲ್ಲಿ ಜಿಲ್ಲಾಕೇಂದ್ರ ದಿಂದ ಮೂರು ಕಿ.ಮೀ. ದೂರದಲ್ಲಿ ವೇಣುಗೋಪಾಲಸ್ವಾಮಿ ದೇವಾ ಲಯವಿರುವ ಪಟ್ರೇನಹಳ್ಳಿಯು ಸಿಗುವುದು.

**ಕರ್ನಾಟಕ ವೈಷ್ಣವ ದೇವಾಲಯಗಳು**







# ಪುಣ್ಯಸಂಪಾದನೆಗೆ ಪ್ರೇರಕ ಪುಷ್ಯಮಾಸ

- ಶ್ರೀಮತಿ ವಾರುಣಿ ಹೊನ್ನಾಳಿ
99160 22982

ಉತ್ತರಾಯಣ-ಇದು ದೇವತೆಗಳಿಗೆ ಹಗಲು. ಧರ್ಮಾಚರಣೆ ಮಾಡುವ ಸಾಧಕರಿಗೆ ವ್ರತಾದಿಗಳು ನೀಡುವ ಹಗಲು. ದೇವತೆಗಳ ಬೆಳಗು ಎಂಬ ಸಂಭ್ರಮಕ್ಕೆ ದಿನಕರನು ಪಥವನ್ನೇ ಬದಲಿಸುವ ಸುಸಮಯ. ಸಂಕ್ರಮಣ ಕಾಲದ ಸ್ನಾನ, ಜಪ, ತರ್ಪಣಾದಿ ಕ್ರಿಯೆಗಳಿಂದ ದೇವತೆಗಳು-ಪಿತೃಗಳನ್ನೂ ಸಂಪ್ರೀತಗೊಳಿಸುವ ಧನ್ಯತೆ ಘಟ್ಟ. ಅಕ್ಷಯ ಪುಣ್ಯಗಳಿಸಲು ಸಂಕ್ರಮಣವೇ ಸಕಾಲ. ಭವ ಜೀವಿಗಳ ಬದುಕಿನ ಸಾಧನೆಗೆ ಒಂದು ಮಾನ್ಯತೆ ತಂದು ಕೊಡಲು ಸೂರ್ಯನೇ ಉತ್ತರ ಮುಖಿ ಆಗುತ್ತಾನೆ. ಸಾತ್ವಿಕರ ದೇಹವೆಂಬ ರಥಗಳು ಪುಣ್ಯವೆಂಬ ಶಕ್ತಿಯನ್ನು ಪ್ರತಿಷ್ಠಾಪಿಸಿಕೊಂಡು ದೈವತ್ವದೆಡೆ ಸಾಗಲು ಲೋಕ ಬೆಳಗುವ ಭಾನುವೇ ಪ್ರೇರಕನಾಗುತ್ತಾನೆ. ಹೊಸ ಧಾನ್ಯದ ಹುಗ್ಗಿಯ ಘಮಲಿಗೆ ನಿಸರ್ಗವೇ ಹಿಗ್ಗುತ್ತದೆ. ಇದುವೇ ಪುಷ್ಯಮಾಸದ ಸೊಬಗು. ಶೂನ್ಯದಲ್ಲೂ ಸಾತ್ವಿಕತೆಗೆ ಮೆರುಗು. ಭಾರತೀಯ ಹಿಂದೂ ಚಾಂದ್ರಮಾನ ತಿಂಗಳ ಸರಣಿಯಲ್ಲಿ ಬರುವ 10 ನೇ ಮಾಸವಾದ ಪುಷ್ಯ ಬಹಳಷ್ಟು ವೈವಿಧ್ಯ ಗಳನ್ನು ತನ್ನಲ್ಲಿ ಅಡಗಿಸಿ ಇಟ್ಟು ಕೊಂಡಿರುವ ಪರ್ವಕಾಲ ಘಟ್ಟ. ಇದನ್ನು ಪೌಷಮಾಸ, ತೈಷಮಾಸ ಎಂದೂ ಕರೆಯುತ್ತಾರೆ. ಹೇಮಂತ ಋತುವಿನ ಎರಡನೇ ಮಾಸವು ಒಂದೆಡೆ ಅಪ್ಪಟ ಚಳಿಗಾಲದ ದಿನಗಳು. ಧನುರ್ಮಾಸ ಆಚರಣೆ ಸಂದರ್ಭವಂತೂ ಸೂರ್ಯೋದಯಕ್ಕೆ ಮೊದಲೇ ಸ್ನಾನ, ಜಪ, ತಪ, ಪೂಜಾದಿಗಳನ್ನು ಮುಗಿಸಿ, ಬಿಸಿ ಹುಗ್ಗಿ ಮೇಲೆ ಬೆಣ್ಣೆ ಹಾಕಿದ ಪ್ರಸಾದ ಸವಿದು ನಡುಗುವ ದೇಹಕ್ಕೆ ಪುಷ್ಟಿ ನೀಡಿ ಸಂಭ್ರಮಿಸುವ ದಿನಗಳು. ನಂತರವೇ ಉತ್ತರಾಯಣ ಪುಣ್ಯಕಾಲಕ್ಕೆ ತೆರೆಯಲಿದೆ ಹೆಬ್ಬಾಗಿಲು. ಈ ಎಲ್ಲಾ ಸಮಗ್ರ ನೋಟದಿಂದ ಈ ತಿಂಗಳಿಗೆ ತಪೋ ಮಾಸ ಎಂಬ ಇನ್ನೊಂದು ಹೆಸರನ್ನೂ ನಾಮಕರಣ ಮಾಡಿದ್ದಾರೆ ಋಷಿ ಮುನಿಗಳು.

## ನದಿ ಸ್ನಾನಕ್ಕೆ ವಿಶೇಷ ಮಹತ್ವ


ಪುಷ್ಯ ಮಾಸದಲ್ಲಿ ಸಾಮಾನ್ಯವಾಗಿ ಪವಿತ್ರ ನದಿಗಳಲ್ಲಿ ಪ್ರಾತಃ ಸ್ನಾನ ಮಾಡುವ ಪದ್ಧತಿ ಜಾರಿಯಲ್ಲಿದೆ. ಸಮುದ್ರ, ಸರೋವರ, ನದಿ, ಕೆರೆ, ಕಲ್ಯಾಣಿ, ಕೊಳ್ಳ ಸೇರಿದಂತೆ ಎಲ್ಲ ಜಲದಲ್ಲೂ ಭಗವಂತ ಈ ಮಾಸದಲ್ಲಿ ಸನ್ನಿಹಿತನಾಗಿರುತ್ತಾನೆ ಎನ್ನುತ್ತಾರೆ ಹಿರಿಯರು. ಸ್ನಾನ ಮಾತ್ರೇಣ ಸರ್ವೇಷಾಂ ಧರ್ಮಾಣಾಂ ಫಲಭಾಗ್ಭವೇತ್-ಸಕಾಲದಲ್ಲಿ ಸ್ನಾನ ಮಾಡುವುದರಿಂದ ಅನೇಕ ಪುಣ್ಯ ಫಲಗಳನ್ನು ನಾವು ಪಡೆಯಬಹುದು ಎಂಬ ಕಾರಣಕ್ಕಾಗಿಯೇ ಪ್ರಾಚೀನರು ಪೌಷೇಸ್ನಾನಂ ವಿಶೇಷತಃ ಎಂದರು. ಶ್ರೀಮದ್ ಭಾಗವತವೂ ಇದನ್ನು ಪ್ರತಿಪಾದಿಸಿದೆ.

**ಗೋವಿಂದ ಸತ್ಯಾ ಪ್ರೀತ್ಯರ್ಥಂ**
**ಸ್ನಾನಾರ್ಥಂ ಗಚ್ಛತೋ ಮುನೇಃ**

ಸಂಕಲ್ಪ-ಅನುಸಂಧಾನ ಪೂರ್ವಕವಾಗಿ ಬ್ರಾಹ್ಮೀ ಮುಹೂರ್ತದಲ್ಲಿ ಸ್ನಾನ ಮಾಡಿದರೆ ಅನಂತ ಪುಣ್ಯ ಎಂದು ಶೌನಕರಿಗೆ ಸೂತರು ಉತ್ತರಿಸಿ, ಪುಷ್ಯಮಾಸದ ಮಹತ್ವ ಮತ್ತು ಉತ್ತರಾಯಣದ ಪಾರಮ್ಯವನ್ನು ಸಾರಿ ಹೇಳಿದ್ದಾರೆ. ಹಾಗಾಗಿ ಪುಷ್ಯಮಾಸದ ಬನದ ಹುಣ್ಣಿಮೆಯಿಂದ ಮಾಘಮಾಸದ ಭಾರತ ಹುಣ್ಣಿಮೆ ತನಕ ಪವಿತ್ರ ನದಿಗಳಲ್ಲಿ ಹಲವರು ಸ್ನಾನ, ಜಪಾದಿಗಳನ್ನು ಮಾಡುತ್ತಾರೆ. ಇದಕ್ಕೆ ಮಾಘಸ್ನಾನ ಎಂಬ ಹೆಸರಿದೆ. (ಬಲವಂತಕ್ಕಾದರೂ ಮಾಘಸ್ನಾನ ಮಾಡಿ, ಪುಣ್ಯ ಗಳಿಸಿಕೊಳ್ಳಿ ಎಂದು ಅನೇಕ ಹಿರಿಯರು ಹೇಳುವ ಮಾತು ಕೇಳುತ್ತಿರುತ್ತೇವೆ)

**ದುಃಖ ದಾರಿದ್ರ್ಯ ನಾಶಾಯ ಶ್ರೀ ವಿಷ್ಣೋಸ್ತೋಷಣಾಯ ಚ**
**ಪ್ರಾತಸ್ನಾನಂ ಕರೋಮ್ಯದ್ಯಮಾಘ ಪಾಪವಿನಾಶನಂ**
**ಮಾಘಸ್ನಾನಂ ಕರಿಷ್ಯಾಮಿ ಮಕರಸ್ಥೇ ದಿವಾಕರೇ**
**ಅಸಮಾಪ್ತಿ ಮಹಾದೇವ ನಿರ್ವಿಘ್ನಂ ಕುರು ಮಾಧವ**

ಎಂಬಿತ್ಯಾದಿ ಸಂಕಲ್ಪ ಮಾಡಿ ಸ್ನಾನ ಮಾಡುವುದರಿಂದ ಪ್ರಯಾಗ, ಕುರುಕ್ಷೇತ್ರ, ಗೋದಾವರಿ ತೀರದಲ್ಲಿ ಯಜ್ಞ ಮಾಡಿದ ಪುಣ್ಯ ಪ್ರಾಪ್ತಿ ಎಂದಿದೆ ಶಾಸ್ತ್ರಗಳು. ವಯೋವೃದ್ಧರು, ಅಶಕ್ತರು, ಶಿಶುಪಾಲನೆಯಲ್ಲಿರುವ ತಾಯಂದಿರು ಕೇವಲ ಸಂಕಲ್ಪ, ಅನುಸಂಧಾನ ಮಾಡಿದರೂ ಅವರಿಗೆ ಪುಣ್ಯ ಲಭ್ಯವಿದೆ.



## ಮೇಳಗಳ ಮಾಸವಿದು

ಪವಿತ್ರ ಸ್ಥಳಗಳಾದ ಪ್ರಯಾಗ, ಹರಿದ್ವಾರ, ಉಜ್ಜಯಿನಿ, ನಾಸಿಕ್ ಮೊದಲಾದ ಪುಣ್ಯ ಕ್ಷೇತ್ರಗಳಲ್ಲಿ ಸಂಕ್ರಾಂತಿ ಸಂದರ್ಭ ವಿಶೇಷ ಮೇಳಗಳು ನಡೆಯುತ್ತವೆ. 12 ವರುಷಕ್ಕೊಮ್ಮೆ ಬರುವ ಕುಂಭಮೇಳವನ್ನು ಈ ಮೇಲೆ ತಿಳಿಸಿದ ಯಾವುದಾದರೂ ಒಂದು ಸ್ಥಳದಲ್ಲಿ ವೈಭವದಿಂದಲೇ ಆಚರಿಸುವುದು ಉತ್ತರ ಭಾರತೀಯರ ಒಂದು ವಿಶೇಷ ಸಂಪ್ರದಾಯ. ಈ ಮೇಳಗಳಲ್ಲಿ ಲಕ್ಷ ಲಕ್ಷ ಜನರು ಪವಿತ್ರ ನದಿ ತೀರದಲ್ಲಿ ಸಂಗಮಿಸುತ್ತಾರೆ. ಊರು-ಕೇರಿ ಬಿಟ್ಟು ಬಂದು ಪುಣ್ಯ ಕ್ಷೇತ್ರಗಳ ಮೇಳಗಳಲ್ಲಿ ಸಮ್ಮಿಲನವಾಗುತ್ತಾರೆ. ಪರ್ವಕಾಲದಲ್ಲಿ ನದಿ, ಸಮುದ್ರದಲ್ಲಿ ಪುಣ್ಯಸ್ನಾನ ಮಾಡಿ ತರ್ಪಣ ಅರ್ಪಿಸಿ ದಿನಕರನಿಗೆ ನಮಿಸಿ, ಮುಕ್ತ ನಿಸರ್ಗದಲ್ಲಿ ಲೋಕ ನಿರ್ಮಾತೃವಿನ ದರ್ಶನ ಮಾಡುತ್ತಾರೆ. ಈ ಸುಖಕ್ಕೆ ಪಾರವೇ ಇಲ್ಲ.

## ನಿಸರ್ಗಕ್ಕೆ ಕೃತಜ್ಞತೆ :

ಪುಷ್ಯ ಮಾಸದಲ್ಲಿ "ದೇವರುಗಳ ದಿಕ್ಕು ಎಂದು" ಗುರುತಿಸಿಕೊಂಡಿರುವ ಉತ್ತರ ದಿಕ್ಕಿನಲ್ಲಿ ಸೂರ್ಯದೇವ ತನ್ನ ಸಂಚಾರವನ್ನೂ ಆರಂಭ ಮಾಡುತ್ತಾನೆ. ಅಂದಿನಿಂದ ಉತ್ತರಾಯಣ ಪ್ರಾರಂಭ. ಅಂದೇ ಮಕರ ಸಂಕ್ರಾಂತಿ. ಸಮಸ್ತವನ್ನೂ ನಮಗೆ ನೀಡಿದ ನಿಸರ್ಗಕ್ಕೆ ಕೃತಜ್ಞತೆ ಸೂಚಿಸುವ ಹಬ್ಬವಿದು. ಹುಣ್ಣಿಮೆಯ ದಿನದಂದು ಚಂದ್ರನೊಂದಿಗೆ ಸಂಬಂಧ ಹೊಂದಿರುವ ನಕ್ಷತ್ರವು ಪುಷ್ಯ ಆದ ಕಾರಣ ಈ ಮಾಸವನ್ನು ಪುಷ್ಯ ಎಂದೇ ಕರೆದರು ಕೇವಲ ಮದುವೆ, ಮುಂಜಿ ಮತ್ತಿತರ ಶುಭ ಸಮಾರಂಭಕ್ಕೆ ಮುಹೂರ್ತ ಇಲ್ಲ ಎಂಬ ಕಾರಣಕ್ಕೆ ಇದನ್ನು ಶೂನ್ಯ ಮಾಸ ಎಂದು ಹೇಳಿದರೂ ಅದು ಹೊರ ಆಚರಣೆಗಳಿಗೆ ಮಾತ್ರ. ಆದರೆ ಬಹಳಷ್ಟು ಆಧ್ಯಾತ್ಮಿಕ ಮಹತ್ವವು ಪುಷ್ಯ ಮಾಸದ ಒಳಗೆ ಬೆಸೆದುಕೊಂಡಿರುವುದನ್ನು ಅವಲೋಕನ ಮಾಡಿದರೆ ಇದು 'ಮಾನ್ಯ' ಮಾಸವೆಂದು ಗೋಚರವಾಗುತ್ತದೆ. ಅದಕ್ಕೆ ಹೇಳುವುದು ಒಳಗಣ್ಣನ್ನು ತೆರೆದು ನೋಡಬೇಕು ಎಂದು.

## ಶೂನ್ಯ ಎನ್ನಲು ಕಾರಣವೇನು?

ಪುಷ್ಯಮಾಸವನ್ನು ಶೂನ್ಯ ಮಾಸ ಎಂದು ಹೇಳುತ್ತಾರೆ. ಈ ಮಾಸದಲ್ಲಿ ಸಾಮಾನ್ಯವಾಗಿ ಮಂಗಳ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಲು ಹಲವಾರು ಹಿಂದೇಟು ಹಾಕುತ್ತಾರೆ. ಏಕೆಂದರೆ ಈ ತಿಂಗಳಲ್ಲಿ ಯಾವುದೇ ರೀತಿಯ ಶುಭ ಮುಹೂರ್ತ ಇಲ್ಲ ಎಂಬುದು ಜ್ಯೋತಿಷಿಗಳ ಅಭಿಮತ. ಪುಷ್ಯಮಾಸವನ್ನು ಶೂನ್ಯ ಎನ್ನಲು ಕಾರಣ ಹುಡುಕಲು ಹೊರಟರೆ ಅಲ್ಲಿ ಖಗೋಳ ವಿಜ್ಞಾನ ವಿವರ ನೀಡುತ್ತದೆ. ಸೂರ್ಯನ ಅಕ್ಷಾಂಶ ಕಿರಣ ಈ ಕಾಲದಲ್ಲಿ ನೇರವಾಗಿ ಸಂಪೂರ್ಣವಾಗಿ ಭೂಮಿಯ ಮೇಲೆ ಬೀಳುತ್ತವೆ. ಹಾಗಾಗಿ ಸೂರ್ಯನ ಬಲ ಹೆಚ್ಚಾಗಿರುತ್ತದೆ. ಇದು ಸಾಮಾನ್ಯವಾಗಿ ಶುಭಕಾರ್ಯ ಮಾಡಲು ಪ್ರಶಸ್ತವಲ್ಲ. ಚಂದ್ರಬಲ ಹೆಚ್ಚು ಇದ್ದಾಗ ಸತ್ಕಾರ್ಯ ಮಾಡಿದರೆ ಅನಂತ ಫಲ ಎನ್ನುತ್ತದೆ ಜ್ಯೋತಿರ್ವಿಜ್ಞಾನ. ಆದ ಕಾರಣ ದಕ್ಷಿಣ ಭಾರತದ ಹಲವೆಡೆ ಪುಷ್ಯಮಾಸ ಮುಗಿದ ನಂತರವೇ ಮದುವೆ, ಉಪನಯನ ಗೃಹ ಪ್ರವೇಶ, ಜಮೀನು ಖರೀದಿ ಇತ್ಯಾದಿಗಳನ್ನು ಮಾಡುವಲ್ಲಿ ನಂಬಿಕೆ ಹೆಚ್ಚು.

## ಪುಷ್ಯಮಾಸದಲ್ಲಿ ಏನು ಮಾಡಬೇಕು?

ಪುಷ್ಯ ಮಾಸ ಪರ್ಯಂತ ನದಿ ಸರೋವರದಲ್ಲಿ ಮುಂಜಾನೆ ಸ್ನಾನ ಮಾಡಿ ಧ್ಯಾನಾದಿಗಳು, ಪಾರಾಯಣಗಳನ್ನು ಮಾಡಿ ಮಂಗಳಕರ ದ್ರವ್ಯ, ಧಾನ್ಯಾದಿಗಳನ್ನು ಸತ್ಪಾತ್ರರಿಗೆ ದಾನ ಮಾಡಬೇಕು. ಇದರಿಂದ ಪಿತೃಗಳಿಗೂ ತೃಪ್ತಿ ದೊರಕುವುದಂತೆ. ಪಿತೃದೋಷದಿಂದ ಮುಕ್ತಿ ಹೊಂದಲು ಇದು ಸಕಾಲ. ಅದಕ್ಕೆ ಮಾಸಧರ್ಮ ಪಾಲನೆ ಬಹು ಮುಖ್ಯ. ಪುಷ್ಯ ಪೌರ್ಣಮಿ ದಿನ ವೇದಾಧ್ಯಯನ ಪ್ರಾರಂಭಕ್ಕೂ ಸುದಿನ. ಅಂದಿನಿಂದಲಾದರೂ ನಮ್ಮ ಸನಾತನ ಪರಂಪರೆಯ ವೇದ, ಶಾಸ್ತ್ರ, ಪುರಾಣಗಳತ್ತ ಕಣ್ಣು ಹಾಯಿಸಬೇಕು ಎಂದಿದ್ದಾರೆ ಪ್ರಾಚೀನರು. ಈ ಮಾಸದ ನಿಯಾಮಕ ಲಕ್ಷ್ಮೀನಾರಾಯಣ ಎಂದರೆ ಎಲ್ಲೆಡೆ ಆತ ಲಕ್ಷ್ಮೀ ಸಮೇತನಾಗಿಯೇ ಇದ್ದಾನೆ. ಮಾಸಧರ್ಮ ಮಾಡುವವರಿಗೆ ಸಂಪತ್ತು, ಜ್ಞಾನ, ಭಕ್ತಿ ಮತ್ತು ಮುಕ್ತಿಗಳು ಜತೆ ಜತೆಯಾಗಿಯೇ ಬರುತ್ತವೆ ಎಂಬುದರ ಸೂಚಕವಿದು. ಶನಿಗ್ರಹ ಪುಷ್ಯ ಮಾಸದ ಪ್ರಧಾನ ಗ್ರಹ. ಹಾಗಾಗಿಯೇ ಸಂಕ್ರಾಂತಿ ದಿನ ಎಳ್ಳು-ಬೆಲ್ಲ ನೈವೇದ್ಯ ಮಾಡಿ ಹಂಚುವುದು ಪದ್ಧತಿ. ಕಬ್ಬು, ಎಳ್ಳು, ವಸ್ತ್ರ ದಾನಗಳಿಂದ ಸಾಡೇಸಾತಿ ಶನಿದೋಷ ಸೇರಿದಂತೆ ಶನಿಗೆ ಸಂಬಂಧಿಸಿದ ಎಲ್ಲ ದೋಷಗಳೂ ದೂರಾಗುತ್ತದೆ ಎಂದಿದ್ದಾರೆ ಶಾಸ್ತ್ರಕಾರರು.

## ವಿಶೇಷದಿನಗಳು :

ಚೈತ್ರಾದಿ ಮಾಸಗಳು ಅಧಿಕವಾಗುವಂತೆ ಈ ತಿಂಗಳು ಯಾವಾಗಲೂ ಅಧಿಕ ಮಾಸ ಆಗುವುದಿಲ್ಲ. ಅದೇ ವಿಶೇಷ. ಮಕರಮಾಸದೊಡನೆ ಇರುವ ಪುಷ್ಯಮಾಸ ಶೂನ್ಯ ಮಾಸವಲ್ಲ ಎಂದು ಕೆಲವರು ವಾದಿಸಿದರೂ ಇಲ್ಲಿ ಯಾರೂ ವಿವಾಹಾದಿ ಮುಹೂರ್ತ ಇಡುವುದಿಲ್ಲ. ತುಳುಷಷ್ಠಿ, ಶಾಕಾಂಬರಿ ವ್ರತ, ಬನಶಂಕರಿ ವ್ರತ,ಗರುಡ ಜಯಂತಿ, ವೈಕುಂಠ ಏಕಾದಶಿ, ಮುಕ್ಕೋಟಿದ್ವಾದಶಿ, ತ್ಯಾಗರಾಜಸ್ವಾಮಿಗಳು, ಗೋಪಾಲದಾಸರು, ಪುರಂದರದಾಸರ ಪುಣ್ಯದಿನ ಹೀಗೆ ಸಾಗುತ್ತಾ ಪುಷ್ಯಾಂತ್ಯವಾಗಿ ಮಾಘ ಮಾಸವನ್ನು (ಶಿಶಿರ ಋತು) ಸ್ವಾಗತಿಸುವುದಕ್ಕೆ ಪ್ರಕೃತಿ ಅಣಿಯಾಗುತ್ತದೆ.

## ಸಂಕ್ರಮಣದ ಪರ್ವಕಾಲ

ದಿನಕರನು ಪ್ರತಿ ರಾಶಿಗೆ ಪ್ರವೇಶಿಸಿದಾಗಲೂ ಸಂಕ್ರಮಣ ಸಂಭವಿಸುತ್ತದೆ. ಈ ಕಾಲದಲ್ಲಿ ಸೂರ್ಯ ಧನಸ್ಸುರಾಶಿಯಿಂದ ಮಕರಕ್ಕೆ ಪ್ರವೇಶಿಸುತ್ತಾನೆ. ಇದನ್ನೇ ಮಕರಸಂಕ್ರಮಣ ಎಂದು ಕರೆಯುತ್ತಾರೆ.

ಮೇಷಾದಿಷು ದ್ವಾದಶ ರಾಶಿಷು
ಕ್ರಮೇಣ ಸಂಸರತ ಸೂರ್ಯಸ್ಯ



ಪೂರ್ವಾಸ್ಮಾದ್ರಾಶೇಃ ಉತ್ತರರಾಶೌ ಸಂಕ್ರಮಣಂ ಪ್ರವೇಶಃ

ಭರತಖಂಡದ ವಾಸಿಗಳ ಮಹಾ ಪರ್ವಗಳಲ್ಲಿ ಉತ್ತರಾಯಣ ಕಾಲವೂ ಒಂದು ವಿಶೇಷ. ಇದನ್ನೇ ಮಕರ ಸಂಕ್ರಮಣ ಕಾಲ ಎಂದು ಹಿರಿಯರು ಹೆಸರಿಸಿದರು. ಉತ್ತರಾಯಣಕ್ಕೆ ನಮ್ಮ ವೈದಿಕ ಆಚರಣೆಯಲ್ಲಿ ಹೆಚ್ಚಿನ ಮಹತ್ತು ಇದೆ. ಸಂಕ್ರಾಂತಿ ಎಂದರೆ ಸಂಯುಕ್ತ-ಕ್ರಮಣ ಎಂದು ಅರ್ಥ. ವಿಸ್ತರಿಸಿ ವ್ಯಾಖ್ಯಾನಿಸುವಾಗ ಇದು ಉತ್ತಮ ನಡಿಗೆ ಎಂಬ ಅರ್ಥವನ್ನು ಧ್ವನಿಸುತ್ತದೆ. ಸೂರ್ಯ ತನ್ನನಡಿಗೆಯನ್ನು ಉತ್ತರದ ಕಡೆಗೆ ಬದಲಿಸುತ್ತಾನೆ. ಉತ್ತರ ಎಂಬ ಪದವು ಶ್ರೇಷ್ಠತೆಗೆ ಅನ್ವರ್ಥ. ಹಾಗಾಗಿಯೇ ಹಿರಿಯರು ಹರಸುವುದು. "ಉತ್ತರೋತ್ತರ ಅಭಿವೃದ್ಧಿ ಆಗಲಿ'' ಎಂದು.

ಈವರೆಗೆ ಹಗಲು ಕಡಿಮೆ. ರಾತ್ರಿ ಕಾಲ ಹೆಚ್ಚು ಇತ್ತು. ಸಂಕ್ರಾಂತಿ ನಂತರ ಹಗಲೇ ಅಧಿಕ. ಅಂದರೆ ಬೆಳಕು ಹೆಚ್ಚು ಅವಧಿ ಇರುತ್ತದೆ. ಹಾಗಾಗಿಯೇ ಉತ್ತರಾಯಣವನ್ನು "ದೇವತೆಗಳ ಹಗಲು'' ಎಂದು ಕರೆದರು. ಭೂಮಂಡಲದ ದಕ್ಷಿಣ ಭಾಗದ ತುದಿಯಿಂದ ದಿನಕರ ಮೆಲ್ಲ ಮೆಲ್ಲಗೆ ಉತ್ತರದ ಕಡೆಗೆ ಬರುತ್ತಾನೆ. ಆಯನೇ ವಿಂಶತಿ ಪೂರ್ವಂ, ಅಯನೇ ವಿಂಶತಿ ಪರಂ... ಉತ್ತರಾಯಣ ಕಾಲ ಆರಂಭವಾದ ನಂತರದ 20 ಘಳಿಗೆ ಪುಣ್ಯಕಾಲ ಮತ್ತು ಕರ್ಕಾಟಕ ಮಾಸದಲ್ಲಿ ಸೂರ್ಯ ದಕ್ಷಿಣಾಯಣಕ್ಕೆ ಸಾಗುವ ಮೊದಲ 20 ಘಳಿಗೆ ಮಹತ್ವದ್ದು. ಇದನ್ನು ಪುಣ್ಯ ಕಾಲ ಎಂದರು ಪ್ರಾಜ್ಞರು. ಈ ಸಂದರ್ಭ ಪುಣ್ಯಸ್ನಾನ, ಯೋಗ, ಧ್ಯಾನ, ಪೂಜೆ, ಅರ್ಚನೆ ಮತ್ತಿತರ ಸತ್ಕಾರ್ಯ ಮಾಡಲು ಅತಿ ಪ್ರಶಸ್ತವಾಗಿದೆ. ಉತ್ತರಾಯಣದಲ್ಲಿ ದೇಹ ತ್ಯಾಗ ಮಾಡಿದವರು ಮುಕ್ತಿ ಪಡೆಯುತ್ತಾರಂತೆ (ದಕ್ಷಿಣಾಯಣದಲ್ಲಿ ಪ್ರಾಣ ಬಿಟ್ಟವರು ಪುನರಾವೃತ್ತಿ ಹೊಂದುತ್ತಾರೆ.) ಅದಕ್ಕೇ ಭೀಷ್ಮರು ಉತ್ತರಾಯಣದವರೆಗೆ ಕಾದು ದೇಹ ತ್ಯಜಿಸಿದರು.

### ದಾನಕ್ಕೆ ಮಹತ್ವ ಇದೆ

ಪುಷ್ಯಮಾಸದಲ್ಲಿ ದಾನಕ್ಕೆ ವಿಶೇಷ ಮಹತ್ವ ನೀಡಲಾಗಿದೆ. ಸಾತ್ವಿಕರಿಗೆ, ದೇಗುಲ ಯಜ್ಞಶಾಲೆ, ಗೋಶಾಲೆಗಳಿಗೆ ದೀಪದಾನ ನೀಡುತ್ತಾರೆ. ಸಾಧಕರು ಇದ್ದಲ್ಲಿಗೇ ನಾವು ಹೋಗಿ ಸುವಸ್ತುಗಳನ್ನು (ತುಪ್ಪ, ಧಾನ್ಯಗಳು, ವಸ್ತ್ರ, ಹಿರಣ್ಯ) ದಾನ ಕೊಡುವುದು ಅತಿ ಶ್ರೇಷ್ಠ.

ವೈದೇಹ ದೇಶದ ರಾಜನಾಗಿದ್ದ ಸುಮತಿ -ಸುನಂದಾ ಅವರು ಅಗಸ್ತ್ಯ ಋಷಿಗಳ ಆದೇಶದಂತೆ ಇದನ್ನು ಪಾಲನೆ ಮಾಡಿದ್ದಕ್ಕಾಗಿ ಪುತ್ರ ಸಂತಾನವನ್ನು ಪಡೆದರು ಎನ್ನುತ್ತದೆ ಮಾಸ ಮಹಾತ್ಮೆ. ಈ ಮಾಸದಲ್ಲಿ ಏಕಭುಕ್ತ (ಒಂದೇ ಹೊತ್ತು ಊಟ) ಉಳಿದ ಬಹುಪಾಲು ಸಮಯವನ್ನು ಭಗವಂತ ಚಿಂತನೆಗೆ ಮೀಸಲಿಡಿ ಎಂದಿದ್ದಾರೆ ಜ್ಞಾನಿಗಳು. ಇತರರನ್ನು ಆಡಿಕೊಳ್ಳುವುದು, ಚಾಡಿ ಹೇಳುವುದು. ಪರಾನ್ನ ಊಟ ಮಾಡುವುದು ಇತ್ಯಾದಿ ಸರ್ವಥಾ ಮಾಡಬಾರದು. ಮಾಸ ಪರ್ಯಂತ ಬ್ರಹ್ಮಚರ್ಯ ಪಾಲನೆ ಮಾಡಿ ನದಿ ತೀರದಲ್ಲಿ ಪಿತೃ ತರ್ಪಣ ನೀಡುವುದರಿಂದ ಅವರೆಲ್ಲರೂ ನಮ್ಮವಂಶೋದ್ಧಾರಕ್ಕೆ ಹರಸಿ ಸದ್ಗತಿಗೆ ಹೋಗುತ್ತಾರೆ ಎಂದು ಪುರಾಣಗಳು ಉಲ್ಲೇಖಿಸಿವೆ.

### ಎಳ್ಳು-ಬೆಲ್ಲಗಳು ಸಮನ್ವಯದ ಸಂಕೇತ?

ಸಂಕ್ರಾಂತಿ ಎಂಬುದು ಒಂದು ಪರ್ವ ಕಾಲ. ಹೇಗೆ ಗೊತ್ತಾ? ಹೊಸ ವರುಷ ಚೈತ್ರ ಮಾಸವನ್ನು ಸ್ವಾಗತಿಸುವ ಅರ್ಥದಲ್ಲಿ ಬೆಲ್ಲ.



(ಸಿಹಿ-ಖುಷಿ ಆನಂದ) ಕಳೆದ ವರ್ಷದ ಕಹಿಗಳನ್ನು ಬೀಳ್ಕೊಡುವ ಸೂಚಕವಾಗಿ ಎಳ್ಳು ಹಂಚುತ್ತೇವೆ. ಯುಗಾದಿಯಂದು ಬೇವು-ಬೆಲ್ಲ ಇಂದು ಎಳ್ಳು-ಬೆಲ್ಲ. ಒಂದು ಅಂತರಂಗದ ಆಚರಣೆ. ಇನ್ನೊಂದು ಬಹಿರಂಗದ ಸಂಭ್ರಮ. ಹೀಗೆ ಜೀವನವನ್ನು ಅರ್ಥಪೂರ್ಣ ಮಾಡುವುದೇ ಭಾರತೀಯ ಸಂಸ್ಕೃತಿ. ಅದಕ್ಕಾಗಿಯೇ ಮನೆ ಮನೆಗೆ ತೆರಳಿ ಎಳ್ಳು-ಬೆಲ್ಲವನ್ನು ಹಂಚುತ್ತಾರೆ ನಮ್ಮ ಮಕ್ಕಳು ವನಿತೆಯರು. ಎಳ್ಳಿನಲ್ಲಿ ಲಕ್ಷ್ಮೀ ಸನ್ನಿಧಿ ಇರುತ್ತದೆ. ಆಕೆ ಸದಾ ಸಂಚಾರಿ. ಇದ್ದಷ್ಟು ಸಮಯವೂ ಆಕೆ ಆನಂದ-ಸಮೃದ್ಧಿ ನೀಡಲಿ ಎಂಬುದೇ ಈ ಸಂಕ್ರಾಂತಿ ಸಮಯದ ಪ್ರಾರ್ಥನೆ. ಕಬ್ಬು-ಇದನ್ನು ಹಿಡಿದವಳೇ ಲಕ್ಷ್ಮೀ. ಆಕೆಯನ್ನು ಇಕ್ಷುದಂಡಿ ಎಂದಿವೆ ಶಾಸ್ತ್ರಗಳು. ಈ ಕಬ್ಬಿನಿಂದಲೇ ನಾವು ಹಂಚುವ ಬೆಲ್ಲ ಜನಿಸಿದೆ. ಕಳೆದ ವರ್ಷದ ನೋವು ಮರೆತು ಸಿಹಿ ಜೀವನಕ್ಕೆ ಕಾಲಿಡು. ಹೊಸ ಪಥದಲ್ಲಿ ಬದುಕಿನ ರಥಸಾಗಲಿ ಎಂಬ ಸಂದೇಶ ಸಾರುತ್ತದೆ ಈ ಹಬ್ಬ. ಒಟ್ಟಾರೆ ಸಂಕ್ರಾಂತಿಯು ನಮ್ಮನ್ನು ಉತ್ತರೋತ್ತರ ಅಭಿವೃದ್ಧಿ ಪಥಕ್ಕೆ ಕೊಂಡೊಯ್ಯುವ ಆಚರಣೆಯೇ ಆಗಿದೆ.

### ಶನಿಯ ಉಪದ್ರವ ಶಮನವಾಗುತ್ತದೆ :

ನಾಭಿಸ್ಥಾನವು ಶನಿಯ ಆವಾಸ ಎಂದು ಗರುಡ ಪುರಾಣ ಹೇಳಿದೆ. ನಾಭಿ ಕಮಲದಿಂದ ಸೃಷ್ಟಿಕರ್ತನಾದ ಬ್ರಹ್ಮಹುಟ್ಟಿದನೆಂದು ಪುರಾಣ ಸಾರಿದೆ. ಈ ತಿಂಗಳಿನಲ್ಲಿ ಎಳ್ಳು ತಿಂದರೆ ಶನಿಯ ಉಪದ್ರವ ಶಮನವಾಗುತ್ತದೆ ಎಂಬುದು ತಾತ್ಪರ್ಯ. ಕೊರೆಯುವ ಚಳಿಗೆ ಮರಗಿಡದ ಎಲೆಗಳು ಉದುರಿ ವಸಂತಕ್ಕೆ ಹೊಸ ಚಿಗುರು ಪಡೆಯು

ವಂತೆ- ಈ ದೇಹದಿಂದ ಆತ್ಮ ಬೇರೆಯಾಗಿ ಮತ್ತೊಂದು ಜನುಮ ಪಡೆಯುತ್ತದೆ. ನಿಸರ್ಗದ ಪ್ರಕ್ರಿಯೆಗಳಿಗೂ ನಿತ್ಯ ಜೀವನಕ್ಕೂ ಅನಿವಾಭಾವ ಸಂಬಂಧವಿದೆ. ಇದನ್ನು ಸಾಂಕೇತಿಕವಾಗಿ ಸೂಚಿಸುವ ಮಾಸವೇ ಪುಷ್ಯ.

**ಆರೋಗ್ಯ ರಕ್ಷಿಸುವ ತತ್ವವೂ ಇದೆ :**

ಆಯುರ್ವೇದದ ಪ್ರಕಾರ ಎಳ್ಳು ಉಷ್ಣಗುಣದ ಧಾನ್ಯ. ವಾತ, ವ್ರಣ ಮತ್ತು ಚರ್ಮರೋಗ ನಿವಾರಣೆ ಮಾಡುವ ಗುಣವೂ ಎಳ್ಳಿಗೆ ಇದೆ. ಧನುರ್ಮಾಸದ ಚಳಿ ಮುಗಿಯುವ ವೇಳೆಗೆ ಶರೀರದ ಕೊಬ್ಬಿನ ಅಂಶವು ಕಡಿಮೆಯಾಗಿರುತ್ತದೆ. ಹಾಗಾಗಿ ಮಕರ ಮಾಸ ಶುರುವಾಗುವಾಗಲೇ ಈ ಕೊಬ್ಬಿನ ಕೊರತೆ ಸರಿದೂಗಿಸಬೇಕು. ಇದರಿಂದ ಸೂರ್ಯನ ಪ್ರಭಾವವನ್ನು ಮುಂದೆ ಎದುರಿಸಲು ಶರೀರ ಸದೃಢವಾಗಬೇಕು. ಹಾಗಾಗಿ ಎಳ್ಳು ಬೆಲ್ಲವನ್ನು ನೈವೇದ್ಯ ಮಾಡಿ, ಇತರರಿಗೂ ಹಂಚಿ ನಾವೂ ಸೇವನೆ ಮಾಡಬೇಕು ಎಂಬ ಸಂಪ್ರದಾಯ ಜಾರಿಗೆ ಬಂದಿತು. ಒಟ್ಟಾರೆ ಆರೋಗ್ಯ ರಕ್ಷಿಸುವ ತತ್ವವೂ ಪುಷ್ಯ ಮಾಸದಲ್ಲಿ ಅಡಕವಾಗಿದೆ. ಆಧುನಿಕರು ಇದನ್ನು ಅರ್ಥ ಮಾಡಿಕೊಂಡು ಮನೆಯಲ್ಲೇ ಎಳ್ಳು-ಬೆಲ್ಲ ಸಿದ್ಧಪಡಿಸಲು ಮುಂದಾಗಬೇಕಿದೆ. ಮಕ್ಕಳಿಗೆ ಎಳ್ಳು ಬೀರುವ ಸಂಪ್ರದಾಯದ ಪರಿಚಯ ಮಾಡಿಕೊಡಬೇಕಿದೆ.

**ಲಾಭದ ಆಲೋಚನೆ ಬೇಡ :**

ಪುಷ್ಯ ಮಾಸವನ್ನು ಶೂನ್ಯಮಾಸ ಎಂದು ತಿಳಿದು ಸುಮ್ಮನೇ ಕೂರುವುದಲ್ಲ. ಕೊರೆಯುವ ಚಳಿ ಆರಂಭವಾಗುವ ಮುನ್ನವೇ ಲವಲವಿಕೆ ಪಡೆಯುವುದು ನಮ್ಮ ಕರ್ತವ್ಯ ವಾಗಬೇಕು. ಶೂನ್ಯಭಾವದಲ್ಲಿ ಲಾಭ-ನಷ್ಟ ಯೋಚನೆ ಇರುವುದಿಲ್ಲ. ಅದೊಂದು ರೀತಿಯ ನಿರ್ಯೋಜನಾ ಅಥವಾ ಏಕಾಂತ ಸ್ಥಿತಿ ಎಂತಲೂ ಕರೆಯಬಹುದು. ವ್ಯಾಕ್ಯೂಮ್ (ನಿರ್ವಾತ) ಎನ್ನಲೂಬಹುದು. ಶೂನ್ಯ ಮಾಸದ ಏಕಾಂತ ಸ್ಥಿತಿಗೆ ಭಕ್ತಿಯೆಂಬ ಅಂಕಿಯನ್ನು ಬಲಭಾಗಕ್ಕೆ ಹಾಕುತ್ತಾ ಸಾಗಬೇಕು. ಆಗ ಮಾಸಕ್ಕೊಂದು ಅರ್ಥ, ಬೆಲೆ, ಮೌಲ್ಯ ದೊರಕುತ್ತದೆ. ಶೂನ್ಯ ಅಪೇಕ್ಷೆಯೊಂದಿಗೆ ಮಾಡಿದ ಸಾಧನೆಗಳು ಮಾನ್ಯವಾಗುತ್ತವೆ. ತಾರ್ಕಿಕವಾಗಿ ಹೇಳುವುದಾದರೆ ಉಳಿದೆಲ್ಲ ಮಾಸಗಳಲ್ಲಿ ನಮ್ಮ ಮನಸ್ಸನ್ನು ವಿಷಯಾಸಕ್ತಿಗಳೆಂಬ ಅಂಕಿಗಳಿಗೆ ಮೀಸಲಾಗಿ ಇಟ್ಟಿರುತ್ತೇವೆ ಎನ್ನಬಹುದು. ಅಲ್ಲಿ ಶೂನ್ಯ ಸಾಧನೆ ಭಾವಕ್ಕೆ ಬೆಲೆ ಕೊಡುವುದಿಲ್ಲ ಏಕೆಂದರೆ ಹಲವು-ಹತ್ತು ಆಚರಣೆಗಳೇ ವಿಜೃಂಭಿಸಿ ನಮ್ಮನ್ನು ಅನನ್ಯ ಸಂಭ್ರಮದಲ್ಲಿ ತೇಲಿಸುತ್ತಿರುತ್ತವೆ. ಆದರೆ ಈ ಮಾಸದಲ್ಲಿ ಲೌಕಿಕ ವ್ಯವಹಾರಗಳನ್ನು ಹೊರತುಪಡಿಸಿ ಭಗವದ್ಭಕ್ತಿಗೆ ಹೆಚ್ಚು ಒತ್ತು ಕೊಡಿ ಎಂದು ಹಿರಿಯರು ಸೂಚಿಸಿದ್ದಾರೆ. ಹಾಗಾಗಿ ಶೂನ್ಯಮಾಸವೆನ್ನುವುದು ನಮ್ಮ ಬದುಕಿನ ಭಕ್ತಿ ಪರ್ವವಾಗಬೇಕು. ಪರ್ವತದಷ್ಟು ಪುಣ್ಯ ಪ್ರಾಪ್ತಿ ಆಗಬೇಕು ಎಂದು ಸಂಕಲ್ಪ ಮಾಡೋಣ. ನಾವೆಲ್ಲರೂ ಕತ್ತಲಿನಿಂದ (ದಕ್ಷಿಣಾಯಣ) ಬೆಳಕಿನತ್ತ (ಉತ್ತರಾಯಣ) ಸಾಗೋಣ. ನವ ನವೀನ ಚಿಂತನ-ಮಂಥನಗಳಿಗೆ ಪುಷ್ಯ ಪ್ರೇರಕವಾಗಲಿ.

## ತಿರುಮಲೆ ತಿರುಪತಿ ದೇವಸ್ಥಾನಗಳು

# ಭಕ್ತರಿಗೆ ವಿಜ್ಞಪ್ತಿ

**ಇತ್ತೀಚೆಗೆ ತಿರುಮಲೆಗೆ ಕಾಲ್ನಡಿಗೆಯಲ್ಲಿ ಬರುವ ಭಕ್ತರಲ್ಲಿ ಹೃದಯಕ್ಕೆ ಸಂಬಂಧಿಸಿದ ಅನಾರೋಗ್ಯ ವ್ಯಕ್ತಿಗಳಿಗೆ ಸೂಚನೆ ಗಳು. ಈ ಕಾರಣಕ್ಕಾಗಿ ತಿ.ತಿ.ದೇ., ಭಕ್ತರಿಗೆ ಹಲವಾರು ಸೂಚನೆಗಳನ್ನು ನೀಡುತ್ತಿದೆ. ಭಕ್ತರ ಆರೋಗ್ಯ ಮತ್ತು ಯೋಗ ಕ್ಷೇಮಕ್ಕಾಗಿ ಈ ಸೂಚನೆಗಳನ್ನು ಪಾಲಿಸಬೇಕೆಂದು ವಿನಂತಿಸ ಲಾಗಿದೆ.**

**1. 60 ವರ್ಷ ವಯಸ್ಸಿನವರು ಮತ್ತು ಮಧುಮೇಹ, ಅಧಿಕ ರಕ್ತದೊತ್ತಡ, ಅಸ್ತಮಾ, ಫಿಟ್ಸ್ ಮತ್ತು ಸಂಧಿವಾತದಂತಹ ಕಾಯಿಲೆ ಇರುವವರು ತಿರುಮಲೆ ಬೆಟ್ಟವನ್ನು ಹತ್ತಬಾರದು.**

**2. ಸ್ಥೂಲಕಾಯ ಮತ್ತ ಕಾರ್ಡಿಯಾಕ್ ಸ್ಟಂಟ್ ಪ್ರಕ್ರಿಯೆಗೆ ಒಳಗಾದವರು ತಿರುಮಲೆ ಬೆಟ್ಟವನ್ನು ಹತ್ತಬಾರದು.**

**3. ತಿರುಮಲೆ ಬೆಟ್ಟವನ್ನು ಹತ್ತುವ ಸಮಯದಲ್ಲಿ ಅಧಿಕ ಒತ್ತಡ ಮತ್ತು ಎತ್ತರದಲ್ಲಿ ಕಡಿಮೆ ಆಮ್ಲಜನಕದ ಸಾಂದ್ರತೆಯಿಂದ ಹೃದಯದ ತೊಂದರೆಗಳು ಮತ್ತು ಅಸ್ತಮಾ ಹೆಚ್ಚಾಗಬಹುದು.**

**4. ದೀರ್ಘಕಾಲದ ಕಾಯಿಲೆ ಇರುವವರು ತಮ್ಮ ಔಷಧಿಗಳನ್ನು ತರಬೇಕು ಇದರಿಂದ ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.**

**5. ತಿರುಮಲೆ ಬೆಟ್ಟವನ್ನು ಹತ್ತುವಾಗ ಯಾವುದೇ ರೀತಿಯ ತೊಂದರೆಯಾದರೆ ದಯಬಿಟ್ಟು ವೈದ್ಯಕೀಯ ಕೇಂದ್ರಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಪಡೆದುಕೊಳ್ಳಿ. ಅಲಿಪಿರಿ ನಡೆದುಹೋಗುವ ಮಾರ್ಗದ 1500 ಮೆಟ್ಟಿಲುಗಳ ಬಳಿ ಗಾಳಿಗೋಪುರ ಮತ್ತು ಭಾಷ್ಯಕಾರರ ಸನ್ನಿಧಿ ಬಳಿ ವೈದ್ಯಕೀಯ ಕೇಂದ್ರಗಳಿವೆ.**

**6. ಯಾವುದೇ ವೈದ್ಯಕೀಯ ಸಹಾಯಕ್ಕಾಗಿ ತಿರುಮಲೆಯಲ್ಲಿರುವ ಅಶ್ವಿನಿ ಆಸ್ಪತ್ರೆ ಮತ್ತು ಇತರ ವೈದ್ಯಕೀಯ ಕೇಂದ್ರಗಳಲ್ಲಿ 24/7 ವೈದ್ಯಕೀಯ ಸೌಲಭ್ಯವನ್ನು ಪಡೆಯಬಹುದು.**

**7. ದೀರ್ಘ ಕಾಲದ ಮೂತ್ರಪಿಂಡದ ಕಾಯಿಲೆಯ ರೋಗಿಗಳಿಗೆ ಯಾವುದೇ ತುರ್ತು ಸಂದರ್ಭದಲ್ಲಿ ತಿರುಪತಿಯಲ್ಲಿರುವ (SVIMS) ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೌಲಭ್ಯಲಭ್ಯವಿದೆ.**

# ಸಂಸ್ಕಾರಗಳ ಮಹಿಮೆ

- ಕಲ್ಯಾಣಿ ಮೂರ್ತಿರಾಮನಾಥಪುರ

ಬಾಹ್ಯಸಂಸ್ಕಾರ ಸಂಸ್ಕೃತ ಋಷೀಣಾಂ ಸಮಾನಾತರಸಾಮಾನ್ಯಂ
ಸಮಾನಲೋಕತಾಂ ಸಾಯೋಜ್ಯತಾಂ ಗಚ್ಛತಿ ! ದೈವೇನೋತ್ತರೇಣ
ಸಂಸ್ಕಾರೇಣಾನು ಸಂಸ್ಕೃತೌ ದೇವಾನಾಂ ಸಮಾನತಾಂ ಸಾಮಾನ್ಯತಾಂ
ಸಮಾನಲೋಕತಾಂ ಸಾಯೋಜ್ಯತಾಂ ಚ ಗಚ್ಛತಿ ॥

ಗರ್ಭಾಧಾನಾದಿ ಬಾಹ್ಯ ಸಂಸ್ಕಾರಗಳಿಂದ ಸಂಸ್ಕೃತನಾದ ವ್ಯಕ್ತಿ ಋಷಿಗಳಂತೆ ಪೂಜ್ಯನೂ ಹಾಗೂ ಋಷಿ ಸಮಾನನೂ ಆಗುತ್ತಾನೆ. ಆತ ಋಷಿಗಳ ಲೋಕದಲ್ಲಿ ವಾಸಿಸುತ್ತಾನೆ. ಋಷಿಗಳಂತೆಯೇ ಶರೀರವನ್ನು ಹೊಂದುತ್ತಾನೆ. ಮತ್ತೆ ಅಗ್ನಿಷ್ಟೋಮಾದಿ ದೈವಸಂಸ್ಕಾರಗಳಿಂದ ಅನು ಸಂಸ್ಕೃತನಾಗಿ ದೇವತೆಗಳಂತೆಯೇ ಪೂಜ್ಯನೂ ದೇವ ಸಮಾನನೂ ಆಗುತ್ತಾನೆ. ಆತ ದೇವಲೋಕದಲ್ಲಿ ವಾಸಮಾಡುತ್ತಾನೆ. ಅಂತೆಯೇ ದೇವತೆಗಳಂತೆಯೇ ಶರೀರವನ್ನು ಹೊಂದುತ್ತಾನೆ.

**- ಮಹರ್ಷಿ ಹಾರೀತ**

ಗಾರ್ಭೈರ್ಹೋರ್ಮೈರ್ಜಾತ ಕರ್ಮಚೌಡ ಮೌಂಜೀನಿಬಂಧನೈಃ।
ಬೈಜಿಕಂ ಗಾರ್ಭಿಕಂ ಚೈನೋ ದ್ವಿಜಾನಾಮಪಮೃಜ್ಯತೇ॥

ಗರ್ಭಶುದ್ಧಿ ಕಾರಕಗಳಾದ ಹವನ, ಜಾತಕರ್ಮ, ಚೂಡಾಕರಣ ಹಾಗೂ ಮೌಂಜೀಬಂಧನ (ಉಪನಯನ) ಮುಂತಾದ ಸಂಸ್ಕಾರಗಳ ಮೂಲಕ ದ್ವಿಜರ ಬೀಜ ಹಾಗೂ ಗರ್ಭಸಂಬಂಧೀ ದೋಷ - ಪಾಪಗಳು ನಾಶವಾಗುತ್ತವೆ.

**-ಮನುಸ್ಮೃತಿ**

ಸ್ವಾಧ್ಯಾಯೇನ ವ್ರತೈರ್ಹೋರ್ಮೈಸ್ತ್ರೈವಿದ್ಯೇನೇಜ್ಯಮಾ ಸುತೈಃ।
ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ॥

ವೇದಾಧ್ಯಯನದಿಂದ, ಮಧು-ಮಾಂಸಾದಿಗಳ ತ್ಯಾಗ ರೂಪ ವ್ರತ ಅಂದರೆ ನಿಯಮದಿಂದ, ಪ್ರಾತಃ ಸಾಯಂಕಾಲದ ಹವನದಿಂದ ತ್ರೈವಿದ್ಯಾ ಎಂಬ ವ್ರತದಿಂದ ಬ್ರಹ್ಮಚರ್ಯಾವಸ್ಥೆಯಲ್ಲಿ ದೇವ-ಋಷಿ-ಪಿತೃ ತರ್ಪಣ ಮುಂತಾದ ಕ್ರಿಯೆಗಳಿಂದ ಗೃಹಸ್ಥಾವಸ್ಥೆಯಲ್ಲಿ ಪುತ್ರೋತ್ಪಾದನೆಯಿಂದ, ಬ್ರಹ್ಮ ಯಜ್ಞ, ದೇವಯಜ್ಞ ಮುಂತಾದ ಪಂಚಮಹಾಯಜ್ಞಗಳಿಂದ ಮತ್ತು ಜ್ಯೋತಿಷ್ಟೋಮಾದಿ ಯಜ್ಞಗಳಿಂದ ಈ ಶರೀರ ಬ್ರಹ್ಮನನ್ನು ಹೊಂದಲು ಅರ್ಹತೆಯನ್ನು ಹೊಂದುತ್ತದೆ.

**- ಮನುಸ್ಮೃತಿ**

ಗರ್ಭಹೋರ್ಮೈರ್ಜಾತ ಕರ್ಮನಾಮ ಚೌಲೋಪನಾಯನೈಃ
ಸ್ವಾಧ್ಯಾಯೈಸ್ತದ್ ವ್ರತೈಶ್ಚೈವ ವಿವಾಹಸ್ನಾತಕ ವ್ರತೈಃ
ಮಹಾಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ॥

ಗರ್ಭಾದಾನ ಸಂಸ್ಕಾರದಲ್ಲಿ ಮಾಡಲ್ಪಡುವ ಹವನದ ಮೂಲಕ ಮತ್ತು ಜಾತಕರ್ಮ, ನಾಮಕರಣ, ಚೂಡಾಕರಣ, ಯಜ್ಞೋಪವೀತ, ವೇದಾಧ್ಯಯನ, ವೇದೋಕ್ತವಾದ ವ್ರತಗಳ ಪಾಲನೆ, ಸ್ನಾತಕರು ಪಾಲಿಸಲು ಅರ್ಹವಾದ ವ್ರತ, ವಿವಾಹ, ಪಂಚಮಹಾಯಜ್ಞಗಳ ಅನುಷ್ಠಾನ ಹಾಗೂ ಉಳಿದ ಯಜ್ಞಗಳ ಮೂಲಕ ಈ ಶರೀರವನ್ನು ಪರಬ್ರಹ್ಮ ಪ್ರಾಪ್ತಿಗೆ ಅರ್ಹವಾಗಿಸುತ್ತಾರೆ.

**- ಮಹಾಭಾರತ**

ವೈದಿಕೈ ಕರ್ಮಭಿಃ ಪುಣ್ಯೈರ್ನಿಷೇಕಾದಿರ್ದ್ವಿಜನ್ಮನಾಮ್।
ಕಾರ್ಯಃ ಶರೀರಸಂಸ್ಕಾರಃ ಪಾವನಃ ಪ್ರೇತ್ಯಚೇಹ ಚ ॥

ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರ ಗರ್ಭಾದಾನದಿಂದ ಹಿಡಿದು ಅಂತ್ಯೇಷ್ಟಿಯವರೆಗೆ ಎಲ್ಲ ಸಂಸ್ಕಾರಗಳು ವೇದೋಕ್ತವಾದ ಪವಿತ್ರ ವಿಧಿ -ವಿಧಾನಗಳನ್ನು (ಮತ್ತು) ಮಂತ್ರಗಳ ರೀತ್ಯ ಮಾಡಬೇಕು. ಏಕೆಂದರೆ, ಸಂಸ್ಕಾರಗಳು ಇಹಲೋಕ ಮತ್ತು ಪರಲೋಕಗಳಲ್ಲಿ ಸಹ ಪವಿತ್ರ ಮಾಡುವಂತವು.

**- ಮಹಾಭಾರತ**

ಸಂಸ್ಕೃತಸ್ಯ ಹಿ ದಾಂತಸ್ಯ ನಿಯತಸ್ಯ ಯತಾತ್ಮನಃ।
ಪ್ರಾಜ್ಞಸ್ಯಾನಂತರಾ ಸಿದ್ಧಿಹಲೋಕೇ ಪರತ್ರ ಚ ॥

ವೈದಿಕ ಸಂಸ್ಕಾರ ವಿಧಿವತ್ತಾಗಿ ನಡೆಯಲ್ಪಟ್ಟಿರುವರು, ನಿಯಮ ಪೂರ್ವಕವಾಗಿದ್ದು ಮನಸ್ಸು ಮತ್ತು ಇಂದ್ರಿಯಗಳ ಗೆಲುವು ಸಾಧಿಸಿರುವ ವಿಜ್ಞರಿಗೆ ಇಹಲೋಕ ಮತ್ತು ಪರಲೋಕಗಳೆಲ್ಲಿಯೂ ಸಿದ್ಧಿ ಸಾಧಿಸಲು (ಹೊಂದಲು)ತಡವಾಗುವುದಿಲ್ಲ.

**-ಮಹಾಭಾರತ**

ಚಿತ್ರಕರ್ಮ ಯಥ್ಯಾ ಕೈರಂಗೈರುನ್ಮೀಲ್ಯತೇ ಶನೈಃ
ಬ್ರಾಹ್ಮಣ್ಯಮಪಿ ತದ್ವತ್ಸ್ಯಾತ್ಸಂ ಸ್ಕಾರೈರ್ವಿಧಿಪೂರ್ವಕೈಃ।

ಯಾವುದೇ ಚಿತ್ರದಲ್ಲಿ ವಿವಿಧ ಬಣ್ಣಗಳ ಸಂಯೋಗದಿಂದ ನಿಧಾನವಾಗಿ ಸ್ಪಷ್ಟತೆ - ಸ್ವಚ್ಛತೆಯನ್ನು ತರಬಹುದೋ ಅಂತೆಯೇ ವಿಧಿಪೂರ್ವಕ ಸಂಸ್ಕಾರಗಳಿಂದ ಸಂಪಾದನೆಯಿಂದ ಬ್ರಹ್ಮಣ್ಯತೆ ಪ್ರಾಪ್ತವಾಗುತ್ತದೆ.

**-ಮಹರ್ಷಿ ಅಂಗೀರಾ**

ಸಂಸ್ಕಾರೈಃ ಸಂಸ್ಕೃತಃ ಪೂರ್ವೈರುತ್ತರೈರನು ಸಂಸ್ಕೃತಃ
ನಿತ್ಯಮಷ್ಟಗುಣೈರ್ಯುಕ್ತೋ ಬ್ರಾಹ್ಮಣೋ ಬ್ರಾಹ್ಮಲೌಕಿಕಃ
ಬ್ರಾಹ್ಮಂ ಪದಮವಾಪ್ನೋತಿ ಯಸ್ಮಾನ್ನ ಚ್ಯವತೇ ಪುನಃ
ನಾಕಪೃಷ್ಠಂ ಯಶೋಧರ್ಮಂ ತ್ರಿರೀಜಾನ ಶ್ರೀ ವಿಷ್ಣಪಮ್॥

ಗರ್ಭಾದಾನವೇ ಮುಂತಾದ ಪ್ರಾರಂಭಿಕ ಹಾಗೂ ಅಗ್ನ್ಯಾಧ್ಯೆಯ ಇತ್ಯಾದಿ ಉತ್ತರವರ್ತೀ ಸಂಸ್ಕಾರಗಳು ಮತ್ತು ದಯೆ, ಕ್ಷಾಂತಿ, ಅನಸೂಯ, ಶೌಚ, ಅನಾಯಾಸ, ಮಂಗಳ, ಅಕಾರ್ಪಣ್ಯ ಹಾಗೂ ಅಸ್ಪೃಹಾ ಈ ಎಂಟು ಆತ್ಮ ಸಂಸ್ಕಾರಗಳಿಂದ ನಿತ್ಯ ತೊಡಗಿಕೊಂಡಿರುವ ದ್ವಿಜನು ಬ್ರಹ್ಮಲೋಕವನ್ನು ಹೊಂದಲು ಅರ್ಹನಾಗಿರುತ್ತಾನೆ. ಜತೆಗೆ ಪಾಕಯಜ್ಞ ಹವಿರ್ಯಜ್ಞ ಮತ್ತು ಸೋಮಯಜ್ಞ ಸಂಸ್ಕಾರಗಳಿಂದ ಸಂಸ್ಕಾರ ಸಂಪನ್ನನಾಗಿ ಆತ ಯಶಸ್ಸು ಹಾಗೂ ಧರ್ಮವನ್ನು ಸಂಪಾದಿಸಿ ಮೇಲ್ಪಟ್ಟವನ್ನು ಹೊಂದುತ್ತಾನೆ. ಅಲ್ಲದೆ ಅವನಿಗೆ ದೇವಲೋಕ ಪ್ರಾಪ್ತಿಯಾಗುತ್ತದೆ ಮತ್ತೆ ಎಂದೆಂದಿಗೂ ಆ ಬ್ರಹ್ಮ ಪದವನ್ನು ಹೊಂದುತ್ತಾನೆ. ಅಲ್ಲಿಂದ ಪುನಃ ಅವನು ಹಿಂತಿರುಗುವುದಿಲ್ಲ.

**- ಮಹರ್ಷಿ ಶಂಖ - ಲಿಖಿತ (ಸಂಗ್ರಹ)**

# ಮಾಘಶುದ್ಧ ನವಮೀ ಮಧ್ವ ನವಮೀ

- ವಿಶ್ವೇಶಪ್ರಿಯದಾಸ
99640 25922



ಆಚಾರ್ಯ ಮಧ್ವರ ಜೀವನ ಚರಿತ್ರೆ, ಜೀವನ ಕ್ರಮ ಮತ್ತು ತತ್ವ ಸಿದ್ಧಾಂತಗಳನ್ನು ನಾರಾಯಣ ಪಂಡಿತರು 'ಮಧ್ವವಿಜಯ' ಗ್ರಂಥದಲ್ಲಿ ದಾಖಲಿಸಿದ್ದಾರೆ. ಹದಿನಾರು ಸರ್ಗಗಳನ್ನೊಳಗೊಂಡ ಈ ಐತಿಹಾಸಿಕ ಕಾವ್ಯ ಶಾಸ್ತ್ರ ಗ್ರಂಥದ ಹದಿನಾಕನೇ ಸರ್ಗವು ಆಚಾರ್ಯಮಧ್ವರ ದೈನಂದಿನ ಚಟುವಟಿಕೆಗಳನ್ನು ತಿಳಿಸುತ್ತದೆ. ಅಂದರೆ ಅವರ ಸ್ನಾನ, ಆಹ್ನಿಕ, ಗೋಪೀಚಂದನ ಮುದ್ರಾಧಾರಣ ಕ್ರಮ, ಭಗವಂತನ ಧ್ಯಾನ, ಅಭಿಷೇಕ, ಅರ್ಚನೆ, ಪೂಜೆ ತದನಂತರ ಪಾಠ ಪ್ರವಚನಗಳನ್ನು ತಿಳಿಸುತ್ತದೆ. ಹದಿನಾಕನೇ ಸರ್ಗದ ಮೂವತ್ತೇಳನೇ ಶ್ಲೋಕದಲ್ಲಿ ಒಂದು ಅಪೂರ್ವಾಂಶವಿದೆ.

ತಮರುಣ ಮಣಿವರ್ಣಂ ದಿವ್ಯ ದೇಹಾಖ್ಯಗೇಹೇ
ಸ್ನಪಿತ ಮತಿ ಪೃಥುಶ್ರದ್ಧಾನದೀ ಚಿತ್ತವಾರ್ಭಿಃ।
ನನು ಸವಂಜತಿ ನಿತ್ಯಂ ಹೃತ್ಸರೋ ಜಾಸನಸ್ಥಂ
ನತು ಸಕೃದಿತಿ ಪುಷ್ಪೈರಷ್ಟಭಿರ್ಭಾವಪುಷ್ಪೈಃ॥

ತಮ್ಮ ದಿವ್ಯ ದೇಹವೆಂಬ ಮನೆಯನ್ನು ಹೃತ್ಪದ್ಮದಲ್ಲಿ ನಸುಗೆಂಪು ಬಣ್ಣದಲ್ಲಿರುವ ಭಗವಂತನನ್ನು ಮಧ್ವರು ಯಾವ ರೀತಿ ಪೂಜಿಸುತ್ತಾರೆಂಬುದನ್ನು ಹೇಳುತ್ತಾ ಅತ್ಯಂತ ಅಗಾಧ ಶ್ರದ್ಧಾ ಭಕ್ತಿಗಳೆಂಬ ನೀರಿನಿಂದ ಅಷ್ಟೇ ಅಲ್ಲದೆ ಅಷ್ಟಭಾವ ಪುಷ್ಪಗಳಿಂದ ಯಾವಾಗಲೂ ಪೂಜಿಸುತ್ತಾರೆ.

ನಾರಾಯಣ ಪಂಡಿತರು ಮಧ್ವ ವಿಜಯದಲ್ಲಿ ಅಷ್ಟಭಾವಪುಷ್ಪಗಳ ಬಗ್ಗೆ ಏನೂ ಹೇಳುವುದಿಲ್ಲ. ಆದರೆ ಅವರೇ, ಮಧ್ವವಿಜಯಕ್ಕೆ "ಭಾವ ಪ್ರಕಾಶಿಕಾ"ಎಂಬ ವ್ಯಾಖ್ಯಾನ ಗ್ರಂಥ ಬರೆದು ಅದರಲ್ಲಿ ಹಲವಾರು ವಿಷಯಗಳನ್ನು ತೆರೆದಿಟ್ಟಿದ್ದಾರೆ. ಅದರಲ್ಲಿ ಅಷ್ಟಭಾವ ಪುಷ್ಪಗಳ ವಿವರ ಇದೆ.

ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿಂದ್ರಿಯ ನಿಗ್ರಹಃ।
ಸರ್ವಭೂತದಯಾಪುಷ್ಪಂ ಕ್ಷಮಾಪುಷ್ಪಂ ವಿಶಿಷ್ಯತೇ।
ಜ್ಞಾನಪುಷ್ಪಂ ತಪಃ ಪುಷ್ಪಂ ಧ್ಯಾನ ಪುಷ್ಪಂ ತು ಸಪ್ತಮಮ್।
ಸತ್ಯಂ ಚೈವಾಷ್ಟಮಂ ಪುಷ್ಪಮೇಭಿಸ್ತುಷ್ಯತಿ ಕೇಶವಃ ॥

ಸ್ವತಃ ಮಧ್ವರೇ ಭೀಮಾವತಾರ ಕಾಲದಲ್ಲಿ ಭಗವಂತನನ್ನು ಇದೇ ರೀತಿಯಾಗಿ ಅಷ್ಟ ಭಾವಪುಷ್ಪಗಳಿಂದ ಅರ್ಚಿಸುತ್ತಿದ್ದ ಕ್ರಮವನ್ನು ನಾರಾಯಣ ಪಂಡಿತರು ಭಾವಪ್ರಕಾಶಿಕಾದಲ್ಲಿ ಉಲ್ಲೇಖಿಸಿದ್ದಾರೆ. ಭೀಮಸೇನರ ಆ ವಚನವು ಇಂತಿದೆ.

ಆರಾಧಯಾಮಿ ಮಣಿ ಸನ್ನಿಭಮಾತ್ಮಬಿಂಬಂ
ಮಾಯಾಪುರೇ ಹೃದಯ ಪಂಕಜ ಸನ್ನಿವಿಷ್ಟಂ
ಶ್ರದ್ಧಾನದೀ ವಿಮಲಚಿತ್ತ ಜಲಾಭಿಷೇಕಂ
ಭಾವಷ್ಟಪುಷ್ಪ ವಿಧಿನಾ ಹರಿಮರ್ಚಯಾಮಿ॥

ಅಂದರೆ ಶ್ರೀಹರಿಯ ಇಚ್ಛೆಯಿಂದ ನಿರ್ಮಿತವಾದ ಈ ದೇಹವೆಂಬ ಪುರದ ಹೃದಯಕಮಲದಲ್ಲಿ, ಪ್ರತಿಬಿಂಬನಾದ ನನಗೆ ಬಿಂಬ ರೂಪದಿಂದ ನೆಲೆಸಿರುವ ಹರಿಯನ್ನು ಶ್ರದ್ಧೆಯೆಂಬ ನದಿಯ ನಿರ್ಮಲ ಮನೋವೃತ್ತಿಗಳೆಂಬ ನೀರಿನಿಂದ ಅಭಿಷೇಕಿಸುತ್ತೇನೆ. ಜೊತೆಗೆ ಅಷ್ಟಭಾವ ಪುಷ್ಪಗಳನ್ನು ಅರ್ಪಿಸಿ ಪೂಜೆಸುತ್ತೇನೆ.

ಭೀಮಸೇನಾಭಿನ್ನ ಮಧ್ವರು ಅರ್ಪಿಸುತ್ತಿದ್ದ ಅಷ್ಟ ಭಾವ ಪುಷ್ಪಗಳು ಮಾನಪುಷ್ಪಗಳು ಇಂತಿವೆ.

**1. ಅಹಿಂಸೆ :** ಕಾಯಾ-ವಾಚಾ-ಮನಸಾ ಇತರರಿಗೆ ಸರ್ವ ಭೂತಗಳಿಗೆ ನೋವು ಹಿಂಸೆ ಮಾಡದಿರುವುದು. ಆಚಾರ್ಯಮಧ್ವರು ಯಾವುದೇ ಪ್ರಸಂಗದಲ್ಲೂ ಹಿಂಸೆಯನ್ನು ಮಾಡಲೇ ಇಲ್ಲ. ಭಾಗವತ

ದಲ್ಲಿ ಹಿಂಸೆಗೆ ಬೇರೆಯಾದ ಅರ್ಥವಿದೆ. ಅದರಂತೆ ನಾಲ್ಕು ಬಗೆಯ ಹಿಂಸೆಗಳಿವೆ. ಬ್ರಹ್ಮನಿಗೂ ಜೀವನಿಗೂ ಐಕ್ಯವನ್ನು ಹೇಳುವುದು, ಹರಿಯನ್ನು ನಿರ್ಗುಣ ಎನ್ನುವ ಉಪಾಸನೆ, ಭಗವಂತನಿಗೆ ಅವತಾರಗಳಲ್ಲಿ ದುಃಖಾದಿಗಳು ಉಂಟೆಂದು ತಿಳಿಯುವುದು ಮತ್ತು ಪ್ರಪಂಚ ಮಿಥ್ಯೆ ಎನ್ನುವುದು. ಮಧ್ವರು ಸರ್ವದಾ ಈ ಹಿಂಸೆಯನ್ನು ಮಾಡಲಿಲ್ಲ. ಅದನ್ನು ಖಂಡಿಸುತ್ತಲೇ ಇದ್ದರು. ಅವರ ಅವತಾರ ಉದ್ದೇಶವೇ ಈ ನಾಲ್ಕು ಬಗೆಯ ಹಿಂಸೆಯ ಖಂಡನೆ. ಹಾಗಾಗಿ ಮಧ್ವರು ಈ ಅಹಿಂಸೆ ಎಂಬ ಮಾನಸ ಭಾವಪುಷ್ಪವನ್ನು ಭಗವಂತನಿಗೆ ಅಗ್ರಸ್ಥಾನದಲ್ಲಿ ಅರ್ಪಿಸುತ್ತಾರೆ.

**2. ಇಂದ್ರಿಯನಿಗ್ರಹ :** ಮಧ್ವರಿಗೆ ಪ್ರಾಪಂಚಿಕವಾದ ಯಾವುದೇ ವಿಷಯಗಳ ಮೇಲೆ ವಸ್ತುಗಳ ಮೇಲೆ ಆಸಕ್ತಿ ಇರಲಿಲ್ಲ. ಇವರು ಸದಾ ವಿರಕ್ತರು. ಆದರೆ ಪ್ರಾಪಂಚಿಕ ವಸ್ತುಗಳನ್ನು ಹರಿಪೂಜೆಗೆಂದು ವಿನಿಯೋಗಿಸುತ್ತಿದ್ದರು.

**3. ಸರ್ವಭೂತದಯಾ :** ಜಗತ್ತಿನ ಎಲ್ಲಾ ಪ್ರಾಣಿ, ಪಕ್ಷಿ, ಗಿಡ, ಮರ, ಜಡಗಳಲ್ಲಿ ಭಗವಂತನ ಸಾನ್ನಿಧ್ಯವಿದೆ. ಸರ್ವ ಭೂತಗಳ ಸೃಷ್ಟಿ ಭಗವಂತನಿಂದ ಅಂದ ಮೇಲೆ ನಾವು ಆ ಭೂತಗಳನ್ನು ಗೌರವಿಸಬೇಕು. ಪ್ರಾಣಿ-ಪಕ್ಷಿಗಳನ್ನು ಹಿಂಸಿಸಿದರೆ ಅದು ಭಗವಂತನಿಗೆ ಮಾಡಿದ ಅಪಚಾರ ಆಗುತ್ತದೆ. ನಮಗೆ ಹೀಗೆ ಮಾಡಲು ಯಾವ ಅಧಿಕಾರವೂ ಇಲ್ಲ. ಮಧ್ವರು ಬಾಲ್ಯದಲ್ಲಿ ಸಕಲ ವಸ್ತುಗಳಿಗೆ ನಮಸ್ಕರಿಸಿ ಇದನ್ನು ಮಾಡಿ ತೋರಿಸಿದ್ದರು. ಇಂತಹ ಮಾನಸಿಕ ಭಾವ ಪುಷ್ಪವನ್ನು ಶ್ರೀಹರಿಗೆ ಅರ್ಪಿಸುತ್ತಿದ್ದರು.

**4. ಕ್ಷಮೆ :** ಕುಪಿತರಾಗದೇ ಇರುವುದು, ಅಪಕಾರಿಗಳಿಗೆ ಪ್ರತೀಕಾರ ಮಾಡದೇ ಇರುವುದು. ಮಧ್ವರ ಜೀವನದಲ್ಲಿ ಎಲ್ಲರೂ ಅವರ ವಿರುದ್ಧ ಬಂದವರೇ. ಇವರು ಮಾಯಾವಾದ ಖಂಡನೆ ಮಾಡುತ್ತಿದ್ದರೆಂದು ಇವರ ಮೇಲೆ ದೈಹಿಕ, ಮಾನಸಿಕ ಹಿಂಸೆ, ತೊಂದರೆ ಕೊಡುತ್ತಿದ್ದರು ಆದರೆ ಮಧ್ವರು ಶ್ರೀಹರಿಯ ಇಚ್ಛೆಯಂದು ನಗುನಗುತ್ತಲೇ ಕ್ಷಮಿಸುತ್ತಿದ್ದರು ಯಾವುದೇ ಸಂದರ್ಭದಲ್ಲಿ ಯಾರಿಗೂ ಪ್ರತೀಕಾರ ಮಾಡಲೇ ಇಲ್ಲ. ಸಿಟ್ಟಾದ ಸನ್ನಿವೇಶವೂ ಇರಲಿಲ್ಲ. ಇಂತಹಾ ಶ್ರೇಷ್ಠವಾದ ಮಾನಸ ಭಾವಪುಷ್ಪವನ್ನು ಸದಾ ಆತನಿಗೆ ಅರ್ಪಿಸುತ್ತಿದ್ದರು.

**5. ಜ್ಞಾನ :** ವೇದಾದಿ ಸಮಗ್ರ ಶಾಸ್ತ್ರಗಳಲ್ಲಿರುವ 'ಹರಿಸರ್ವೋತ್ತಮ' ಎಂಬ ಜ್ಞಾನವನ್ನು ಆತನಿಗೆ ಅರ್ಪಿಸಿ ಸಜ್ಜನರಿಗೆ ಅನುಗ್ರಹಿಸಿದರು. ಹರಿಸರ್ವೋತ್ತಮ ಎಂಬ ಜ್ಞಾನವನ್ನು ಶ್ರುತಿ ಪುರಾಣಗಳಿಂದ ಹಕ್ಕಿ ತೆಗೆದು ಹಲವಾರು ಗ್ರಂಥಗಳನ್ನು ಬರೆದು ನಾರಾಯಣಾ ಭಿನ್ನ ವೇದವ್ಯಾಸರಿಗೆ ಅರ್ಪಿಸುವ ಮೂಲಕ ಜ್ಞಾನವೆಂಬ ಭಾವಪುಷ್ಪವನ್ನು ಹರಿಸಮರ್ಪಿಸಿ ಪೂಜಿಸುತ್ತಿದ್ದರು.

**6. ತಪಸ್ಸು :** ಮಧ್ವರು ಬದರಿಯಲ್ಲಿನ ಶೀತಲ ಸನ್ನಿವೇಶದಲ್ಲಿ ನಿತ್ಯ ಅರುಣೋದಯ ಕಾಲದಲ್ಲಿ ಸ್ನಾನ, ಕಾಷ್ಠ ಮೌನವ್ರತ ಮಾಡುತ್ತಿದ್ದರು. ಇದು ಕಾಯಿಕ -ವಾಚಿಕ ತಪಸ್ಸು ಎಲ್ಲಾ ಕಡೆ ಇರುವ ಶಾಸ್ತ್ರಗಳಲ್ಲಿ ಹೇಳಿರುವ ಭಗವಂತನ ಗುಣಗಳನ್ನು ಹೃದಯದಲ್ಲಿ ತುಂಬಿಕೊಂಡು ಅದರ ಬಗೆಗಿನ ನಿರಂತರ ಚಿಂತನೆಯೇ ಮಾನಸಿಕ ತಪಸ್ಸು. ಜೀವನ ಪರ್ಯಂತ ಹರಿಸರ್ವೋತ್ತಮತ್ವದ ಸಮರ್ಥನೆ ಒಂದು ದೊಡ್ಡ ತಪಸ್ಸು. ಅದನ್ನು ಮಾಡಿ ಆ ಭಗವಂತನಿಗೆ ಅರ್ಪಿಸಿದರು.

**7. ಧ್ಯಾನ :** ಮಧ್ವರು ಬಾಹ್ಯದಲ್ಲಿ ಹರಿ ಪ್ರೀತಿಗಾಗಿ ಕಾರ್ಯ ಮಾಡುತ್ತಿದ್ದರೂ ಅಂತರಂಗದಲ್ಲಿ ನಿರಂತರವಾಗಿ ಹರಿಯ ಅನಂತ ಗುಣಗಳ ಚಿಂತನ ಮಂಥನ ಮಾಡುತ್ತಾ ಅಂತರಂಗವನ್ನು ಆತನಲ್ಲಿ ನಿಲ್ಲಿಸುತ್ತಿದ್ದರು. ವೇದವ್ಯಾಸ ದೇವರಿಂದ ಶ್ರವಣ ಮಾಡಿದ ಭಗವಂತನ ಗುಣಗಳನ್ನು ಅನುಸಂಧಾನ ಮಾಡುತ್ತಾ ಸಾಕ್ಷಾತ್ ನಾರಾಯಣನನ್ನು ಬದರಿಯಲ್ಲಿ ನೋಡುತ್ತಾ ಆ ಮೂಲಕ ಮನಸ್ಸಿನಿಂದ ಆ ಭಗವಂತನನ್ನು ನಿರಂತರವಾಗಿ ಚಿಂತಿಸುತ್ತಿದ್ದರು. ಇದುವೇ ಭಗವಂತನ ಧ್ಯಾನ. ಅದನ್ನು ಮಧ್ವರು ಎಡೆಬಿಡದೆ ಮಾಡುತ್ತಾ ಹರಿಗೆ ಅರ್ಪಿಸುತ್ತಿದ್ದರು.

**8. ಸತ್ಯ :** "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬ ಶ್ರುತಿ ವಚನದಂತೆ ನಿರ್ದೋಷ ಸರ್ವನಿಯಾಮಕನೂ ಆಗಿರುವ ವಿಷ್ಣು ಸತ್ಯ ನಾಮಕನಾಗಿರುವನು. ಅಂತಹ ಸತ್ಯನಾಮಕ ಭಗವಂತನ ನಿತ್ಯನಿರಂತರ ಉಪಾಸನೆ ಮಧ್ವರು ಮಾಡುತ್ತಿದ್ದರು. ತತ್ವವಾದದ ಸಮರ್ಥನೆಗೆ ಒಂದಿನಿತೂ ತಪ್ಪನ್ನಾಗಲೀ, ಸುಳ್ಳನ್ನಾಗಲೀ ಹೇಳಲಿಲ್ಲ. ಜೀವನ ಪರ್ಯಂತ ಹರಿ ಸರ್ವೋತ್ತಮ ಎಂಬ ಸತ್ಯದ ಪ್ರತಿಪಾದನೆಯನ್ನು ಮಾಡುತ್ತ ಈ ಸತ್ಯ ಎಂಬ ಭಾವಪುಷ್ಪವನ್ನು ಅರ್ಪಿಸುತ್ತಿದ್ದರು.

ಹೀಗೆ ಮಧ್ವರು ಈ ಎಂಟು ಭಾವ ಪುಷ್ಪಗಳನ್ನು ಭಗವಂತನಿಗೆ ಅರ್ಪಿಸಿ ನಮಗೆ ಮಾರ್ಗ ದರ್ಶನ ಮಾಡಿ ನಾವೂ ಹಾಗೆ ಮಾಡುವಂತೆ ಪ್ರೇರೇಪಿಸಿದ್ದಾರೆ. ದಿನ ನಿತ್ಯ ಪೂಜಾಕಾಲದಲ್ಲೂ, ಜೀವನದಲ್ಲೂ ಈ ಶ್ಲೋಕ ಪಠಣ ಸಹಿತ ಭಾವ ಪುಷ್ಪಗಳನ್ನು ಆತನಿಗೆ ಮಧ್ವರ ಮೂಲಕ ಅರ್ಪಿಸೋಣ.

ಈ ಬಾರಿ ಜನವರಿ 27 ರಂದು ಅಂದರೆ ಮಾಘಶುದ್ಧ ನವಮಿಯಂದು "ಮಧ್ವನವಮೀ" ಆಚರಣೆ. ಅಂದು ಮಧ್ವರು ಹಿಂತಿರುಗಿ ಬಾರದಂತೆ ತೆರಳಿದ ದಿನ. ಈ ದಿನವನ್ನು ಆಚಾರ್ಯಮಧ್ವರ ಸಂದೇಶಗಳನ್ನು ಹೊಂದಿರುವ "ಸರ್ವಮೂಲ" ದ ಚಿಂತನೆ ಪಾರಾಯಣ ಎಲ್ಲ ಕಡೆ ವಿಶೇಷವಾಗಿ ನಡೆಯುತ್ತದೆ. ಅಂತಹ ಒಂದು ಸಂದೇಶವನ್ನು ಮಧ್ವ ನವಮಿಯ ಪರ್ವಕಾಲದಲ್ಲಿ ಚಿಂತನೆಗೆಂದು ಇಲ್ಲಿ ಈ ಮೇಲಿನಂತೆ ಸಂಗ್ರಹಿಸಲಾಗಿದೆ. ಅರ್ಥಮಾಡಿಕೊಂಡು ಅನುಸಂಧಾನಕ್ಕೆ ತಂದುಕೊಂಡು ಶ್ರೀಮಧ್ವರ ಕೃಪೆಗೆ ಪಾತ್ರರಾಗೋಣ.

# ಶ್ರೀ ವೆಂಕಟಾಚಲ ಮಹಾತ್ಮ್ಯ


ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್

ಅನುವಾದ – ಶ್ರೀಮತಿ. ಎನ್. ಪಾರ್ವತಿ


**ಕಳೆದ ಸಂಚಿಕೆಯಿಂದ**

"ನಿನ್ನ ಹೆಸರೇನು?" ಎಂದು ಬ್ರಾಹ್ಮಣನು ತನ್ನ ಪ್ರೀತಿಯನ್ನು ವ್ಯಕ್ತಪಡಿಸುತ್ತಾ ಕೇಳಿದನು.

"ನಾನು ಕುಂತಲಾ. ನಿನ್ನಂತಹವರು ನನ್ನ ಬಳಿಗೆ ಬಂದಾಗ ಮೈಯೆಲ್ಲಾ ಕಣ್ಣು ಮಾಡಿಕೊಂಡು ಮುಂದಿನ ಹೆಜ್ಜೆ ಇಡೋದು ಸೂಕ್ತವಲ್ಲ. ಆದರೂ ನಾನು ನೀಚಜಾತಿಯವಳು" ಎನ್ನುತ್ತಾ ಅವಳು ತನ್ನನ್ನು ಪರಿಚಯಿಸಿಕೊಂಡಳು.

ಆಗ ಬ್ರಾಹ್ಮಣನು, "ಕುಂತಲಾ! ನೀನು ಸುಂದರಾಂಗಿ. ನಿನ್ನಂತಹ ಸ್ತ್ರೀಯನ್ನು ಬ್ರಹ್ಮನು ನೀಚಜಾತಿಯಲ್ಲಿ ಏಕೆ ಹುಟ್ಟಿಸಿದ್ದಾನೆ? ನಿನ್ನ ಯೌವನವು ಕಾಡಿನಲ್ಲಿ ಚಂದ್ರನ ಬೆಳಕಿನಂತಿದೆ. ಕುಂತಲಾ!ದೇವಾದಿ ದೇವತೆಗಳು ಸಾಗರ ಗರ್ಭದಲ್ಲಿನ ರತ್ನಾಭರಣಗಳನ್ನು ತಮ್ಮ ಶಿರೋಮಣಿಗಳಾಗಿ ಧರಿಸುವಂತೆ ನಾನು ನಿನ್ನನ್ನು ಮದುವೆಯಾಗಲು ಬಯಸುತ್ತೇನೆ. ನನಗೆ ನೀನು ಬೇಕು" ಎಂದು ತನ್ನ ಬಯಕೆಯನ್ನು ವ್ಯಕ್ತಪಡಿಸಿದನು.



ಇದನ್ನು ನಿರೀಕ್ಷಿಸಿರದ ಚಾಂಡಾಲ ಸ್ತ್ರೀಯು ಕೋಪಗೊಂಡಳು. ಆದರೂ ಸಮಾಧಾನದಿಂದ, "ಬ್ರಾಹ್ಮಣೋತ್ತಮ! ನಾನು ಜಾರಕಾಂತಳು. ನಾನು ಮಹಾ ವಿಷಪೂರಿತ ಸರ್ಪ ಎಂದು ತಿಳಿದಿದ್ದರೂ, ನೀನು ಕಾಮದಿಂದ ನನ್ನ ಬಳಿಗೆ ಬರುವುದು ಸರಿಯಲ್ಲ. ನಿನ್ನನ್ನೇ ನಂಬಿರುವ ನಿನ್ನ ಹೆಂಡತಿಯ ಯೋಚನೆ ಇಲ್ಲವೇ? ನನ್ನೊಂದಿಗೆ ಲೈಂಗಿಕ ಸಂಬಂಧ ಹೊಂದಲು ಬಯಸುತ್ತೀಯಾ? ನೀಚ ಮಹಿಳೆಯೊಂದಿಗೆ ಸಂಬಂಧ ಇಟ್ಟುಕೊಂಡರೆ, ನೀನು ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಕಟ್ಟುವನಾಗುತ್ತೀಯಾ"ಎನ್ನುತ್ತಾ ತನ್ನ ಮಾತುಗಳನ್ನು ಮುಗಿಸಿ ಅವನಿಗೆ ಬೇಗನೇ ಮನೆಗೆ ಹೋಗುವಂತೆ ಸಲಹೆ ನೀಡಿದಳು. ಆದರೆ, ಮಾಧವ ಆ ಸ್ಥಳದಿಂದ ಕದಲಲಿಲ್ಲ. ಕೊನೆಗೆ ಕುಂತಲ ಇನ್ನೊಂದು ಪ್ರಯತ್ನ ಮಾಡಲು ನಿರ್ಧರಿಸಿದಳು.

"ಮಹಾತ್ಮ!ಸೃಷ್ಟಿಯ ಸಲುವಾಗಿ, ಭಗವಂತನು ಜೀವಿಗಳನ್ನು ಗಂಡು ಮತ್ತು ಹೆಣ್ಣು ಎಂದು ವಿಂಗಡಿಸಿದನು. ಮಾನವ ಸಮಾಜವು ಸಕ್ರಮದಿಂದ ಕಾರ್ಯನಿರ್ವಹಿಸಲು ನಾಲ್ಕು ಜಾತಿಗಳ ವ್ಯವಸ್ಥೆಯನ್ನು ಮಾಡಿದನು.ಯಾವುದೇ ಜಾತಿಯ ಪುರುಷನು ಅದೇ ಜಾತಿಯ ಮಹಿಳೆಯನ್ನು ಮದುವೆಯಾದರೆ, ಅಂತಹ ವ್ಯಕ್ತಿಯ ಸಂತತಿಯು ಸಂತೋಷವಾಗಿರುತ್ತದೆ ಎಂಬ ಉತ್ತಮ ವ್ಯವಸ್ಥೆಯನ್ನು ಸಹ ಅವನು ಜಾರಿಗೆ ತಂದನು.

ಅಲ್ಲದೆ, ಯಾವುದೇ ಜಾತಿಗಾಗಲೀ, ಪರಸ್ತ್ರೀಸಂಗ ಅಥವಾ ಪರಪುರುಷಸಂಗವು ಧರ್ಮಕ್ಕೆ ವಿರುದ್ಧವಾಗಿದೆ. ನೀವು ಬ್ರಾಹ್ಮಣರು. ನೀವು ಇತರರಿಗಿಂತ ಧರ್ಮವನ್ನು ಚೆನ್ನಾಗಿ ತಿಳಿದಿದ್ದೀರಿ. ಚಾಂಡಾಲ ಸ್ತ್ರೀಯೊಂದಿಗೆ ಸಂಭೋಗವು ಸೂಕ್ತವಲ್ಲ ಎಂದು ನಿಮಗೆ ಚೆನ್ನಾಗಿ ತಿಳಿದಿದೆ. ಆದರೂ ಒಂದು ಮಾತು. ಹುಟ್ಟಿನಿಂದಲೇ ನೀವು ಪ್ರಥಮ ಜಾತಿಯಲ್ಲಿ ಜನಿಸಿದ್ದೀರಿ. ನಿಮ್ಮ ದೇಹವು ವೇದಗಳಿಂದ ಮಾಡಲ್ಪಟ್ಟಿದೆ ಮತ್ತು ಸತ್ಕ್ರಿಯ





ಗಳ ಕಾರಣದಿಂದ ನೀವು ಪರಮಪವಿತ್ರರು. ಆದರೆ ನಾನು ಪಂಚಮಕುಲದವಳು. ಅಪವಿತ್ರಳು,ಯಾವುದೇ ವಿಧದಲ್ಲಿ ನೋಡಿದರೂ ನಿಮ್ಮೊಂದಿಗೆ ಸಂಬಂಧ ಬೆಳೆಸಲು ನಾನು ಯೋಗ್ಯಳಲ್ಲ.

ಕುಂತಲಳ ಮಾತುಗಳು ಮಾಧವನಲ್ಲಿ ಯಾವುದೇ ಪರಿವರ್ತನೆಯನ್ನು ತರಲಿಲ್ಲ. ಅವರು ನದಿಯ ದಡವನ್ನು ತಲುಪುತ್ತಿದ್ದಂತೆ, ಮಾಧವ ಅವಳನ್ನು ಬರಸೆಳೆದುಕೊಳ್ಳಲು ಮುಂದಾದನು. ಅಲ್ಲಿನ ಏಕಾಂತತೆಯು ಮಾಧವನಿಗೆ ಅಪಾರ ಧೈರ್ಯವನ್ನು ನೀಡಿತು. ಇದನ್ನೆಲ್ಲಾ ನೋಡಿದ ಕುಂತಲ ಕೊನೆಗೆ "ಓ ದೇವತೆಗಳೇ ! ಶಿಷ್ಟ ಬ್ರಾಹ್ಮಣನೊಬ್ಬನು ತನ್ನ ಕರ್ಮದ ಫಲವಾಗಿ ನನ್ನ ಸಂಗವನ್ನು ಬಯಸುತ್ತಿದ್ದಾನೆ. ಅವನು ತಿಳಿದೂ ತಿಳಿದೂ ನರಕದ ಕೂಪಕ್ಕೆ ಬೀಳಲು ಸಿದ್ಧನಾಗಿದ್ದಾನೆ. ನನ್ನಿಂದ ಯಾವುದೇ ಲೋಪವೆಸಗಿಲ್ಲ. ಇದಕ್ಕೆ ನೀವೇ ಸಾಕ್ಷಿ" ಎಂದು ನಿವೇದನೆ ಮಾಡಿದಳು. ಆದರೆ, ಮಾಧವ ಹೇಳಿದ, "ಭಾಮಾ! ನನ್ನ ತಪಸ್ಸು ಇಂದು ಫಲಿಸಿದೆ" ನಿನ್ನ ಯೌವನದ ಸೌಂದರ್ಯವನ್ನು ನದಿಯ ತೀರದಲ್ಲಿ ನೋಡಿದ್ದೇನೆ.

ನಿನ್ನನ್ನು ಪಡೆಯಲು ಕಾತರದಿಂದ ಬಂದಿದ್ದೇನೆ. ನನ್ನನ್ನು ಅನಾದರಿಸಬೇಡ. ನಿನ್ನೊಂದಿಗೆ ಕಾಮದ ಸುಖವನ್ನು ನೀಡು ಎಂದು ಅವನು ಹತ್ತಿರ ಬಂದನು. ಕೊನೆಯ ಬಾರಿಗೆ ಅವಳು ನೀನು ಕಾಮಸುಖಕ್ಕಾಗಿ ಬರುವುದು ಸರಿಯಲ್ಲ. ಈ ಸುಖವನ್ನು ಧರ್ಮನಿಷ್ಠ ರೀತಿಯಲ್ಲಿ ಹೆಂಡತಿಯಲ್ಲಿ ಮೂಲಕವೂ ಪಡೆಯಬಹುದು. ಇದು ತಪ್ಪಲ್ಲ. ಇದು ಶಾಸ್ತ್ರಗಳಿಂದಲೂ ಸಮ್ಮತಿಸಲ್ಪಟ್ಟಿದೆ. ಇದು ನಿನಗಲ್ಲ. ಇಡೀ ಬ್ರಾಹ್ಮಣ ಕುಲಕ್ಕೇ ಅಪಖ್ಯಾತಿ ಬರುತ್ತದೆ.

"ನೀನು ನನ್ನನ್ನು ಮೋಹಿಸಬೇಡ,ನನ್ನನ್ನು ಮುಟ್ಟಬೇಡ" ಎಂದು ಬೇಡಿಕೊಂಡಳು. ಆದರೆ ಮಾಧವ ಅವಳನ್ನು ತನ್ನ ದಾಗಿಸಿಕೊಂಡನು. ಅಸಹಾಯಕಳಾಗಿ ಅವಳು, "ವಿಪ್ರ ನೀನು ಕುಲಭ್ರಷ್ಟನಾದೆ. ಇನ್ನೂ ಪವಿತ್ರವಾದ ಯಜ್ಞೋಪವೀತವೇಕೆ? ನಿನ್ನ ಜೀವನದುದ್ದಕ್ಕೂ ಆಹಾರ ವಿಹಾರಾದಿಗಳೊಂದಿಗೆ ಅಧಮ ಜೀವನವನ್ನು ನಡೆಸು" ಮಾಧವ, ಅವಳು ಹೇಳುವುದಕ್ಕೂ ಮುಂಚೆಯೇ ಯಜ್ಞೋಪವೀತವನ್ನು ತ್ಯಜಿಸಿದ್ದನು. ಸಹಜವಾಗಿ ಬ್ರಾಹ್ಮಣ ಆಚರಣೆಗಳನ್ನು ತ್ಯಜಿಸಿದನು.

ನಿತ್ಯ ನೂತನ ಆಕಾಂಕ್ಷೆಗಳಿಗೆ ಹಂಬಲಿಸುತ್ತಾ ಕುಂತಳಳೊಂದಿಗೆ ಹನ್ನೆರಡು ವರ್ಷಗಳನ್ನು ಕೃಷ್ಣಾ ನದಿಯ ದಡದಲ್ಲಿ ಕಳೆದನು. ಕುಂತಳ ಸತ್ತಳು. ಅವಳಿಲ್ಲದ ಜೀವನ ಅವನಿಗೆ ವ್ಯರ್ಥವೆನಿಸಿತು. "ಎಲ್ಲರೂ ಆದರಿಸುವ ಬ್ರಾಹ್ಮಣ ಕುಟುಂಬದಲ್ಲಿ ನಾನು ಜನಿಸಿದರೂ, ಮಾಡಬಾರದ ಪಾಪಗಳನ್ನು ಮಾಡಿದ್ದೇನೆ. ಶ್ರೀಹರಿ ಮಾತ್ರ ನನ್ನ ರಕ್ಷಕ" ಎಂದು ದುಃಖಿಸಿದನು.

ಅದೇ ಸಮಯಕ್ಕೆ ಸರಿಯಾಗಿ, ಕೆಲವು ರಾಜರು ಮತ್ತು ಅವರ ಪರಿವಾರದವರು ವೆಂಕಟಾದ್ರಿಗೆ ಹೋಗುತ್ತಿರುವುದನ್ನು ಮಾಧವ ಗಮನಿಸಿದನು. ಆ ಗುಂಪಿನಲ್ಲಿ ಸೇರಿಕೊಂಡನು. ಅವರು ಊಟ ಮಾಡುವಾಗ ಎಸೆದ ಅನ್ನವನ್ನು ಬೇಡಿ ತಿಂದನು. ದೇಹದ ಮೇಲಿನ ವ್ಯಾಮೋಹವನ್ನು ತ್ಯಜಿಸಿದನು. ಕೊನೆಗೆ, ರಾಜಮನೆತನದವರು ಕಪಿಲ ತೀರ್ಥದಲ್ಲಿ ಪವಿತ್ರ ಸ್ನಾನ ಮಾಡುತ್ತಿದ್ದಾಗ, ಅವನು ಸಹ ಸ್ನಾನ ಮಾಡಲು ಇಚ್ಛಿಸಿದನು. ಅವರಂತೆಯೇ ಅಲ್ಲಿ ತನ್ನ ಕೂದಲನ್ನು ಅರ್ಪಿಸಿದನು.

ಸ್ನಾನದ ನಂತರ, ಅವರಂತೆಯೇ ಪಿಂಡಪ್ರದಾನ ಮಾಡಿದನು. ಪಿತೃದೇವತೆಗಳು ಸಂತೋಷಪಡುತ್ತಾರೆ. ಎಂದು ಅವನೂ ಸಂತೋಷಪಟ್ಟನು. ಕುಲಪುರೋಹಿತ ಶತಾನಂದರು ಜನಕ ಮಹಾರಾಜನಿಗೆ ಈ ಕಥೆಯನ್ನು ಹೇಳುತ್ತಿರುವಾಗ ವಿದೇಹಾಧಿಪತಿ ಒಂದು ಪ್ರಶ್ನೆಯನ್ನು ಕೇಳಿದನು.

(- ಮುಂದುವರೆಯುತ್ತದೆ. )



# ಆಳ್ವಾರುಗಳು ಕಂಡ ತಿರುವೇಂಗಡ

– ಎಂ. ಆರ್. ನರಸಿಂಹನ್

**ಕಳೆದ ಸಂಚಿಕೆಯಿಂದ**

ಇನ್ನೊಂದು ಪಾಶುರದ ನಿರೂಪಣೆ ಇನ್ನೂ ಮೋಹಕವಾಗಿದೆ. "ಎಲೈ ವೇಂಗಡದೊಡೆಯನೆ! ಭೋಗ್ಯ ಸ್ಥಾನವೆನಿಸಲ್ಪಡುವ ವಡವೇಂಗಡವನ್ನು ಸೇರಿಕೊಂಡು ಅಲ್ಲಿನ ಶ್ರೀವೈಷ್ಣವರಿಂದ ಸೇವಿಸಲ್ಪಟ್ಟವನಾಗಿ ನನ್ನನ್ನು ಸಂಪೂರ್ಣವಾಗಿ ಮನಸ್ಸಿನಿಂದ ತ್ಯಜಿಸೇಬಿಟ್ಟಿರುವೆಯಾ?ಹೀಗೆ ವಿಪರೀತ ಬಾಧೆಗೆ ಗುರಿಪಡಿಸಿ ನೀನು ಮಾತ್ರ ತೆಪ್ಪಗೆ ಕುಳಿತಿರುವೆಯಲ್ಲ? ಇದು ನಿನಗೇ ಸರಿಯೇ? ನಿನ್ನನ್ನೇ ನಂಬಿದ್ದೆ. ಹಾಗೆ ನನ್ನನ್ನು ನಂಬಿಸಿದವನೂ ನೀನೇ ಅಲ್ಲವೆ? ನಾನು ಎಷ್ಟು ಬಿನ್ನವಿಸಿಕೊಂಡರೂ ಅದು ನಿನಗೆ ಈಗ ಕೇಳಿಸುತ್ತಲೇ ಇಲ್ಲ. ಆದರೆ ನನಗೆ ಮಾತ್ರ ನಿನ್ನ ನೆನಪೇ ಪೆಡಂಭೂತದಂತೆ ಕಾಡುತ್ತಿದೆ. ಎಷ್ಟು ಸಮಾಳಿಸಿ ಕೊಂಡರೂ ಆಗುವುದೇ ಇಲ್ಲ. ನನ್ನ ಮನಸ್ಸು ನನ್ನ ಹಿಡತಕ್ಕೆ ಒಳಪಡುವುದೇ ಇಲ್ಲ. ನಾನೆಷ್ಟು ಪಾಪಿಷ್ಟಳು. ಹೀಗೆ ನನ್ನನ್ನು ಆಕರ್ಷಿಸಿರುವುದಾದರೂ ಯಾವುದು?ನಿನ್ನಲ್ಲಿನ ಗುಣವೈಶಿಷ್ಟ್ಯವೋ, ಸೌಂದರ್ಯ ವೈಶಿಷ್ಟ್ಯವೋ, ಮುಖ ಸೌಂದರ್ಯವೋ ಸ್ವರಮಾಧುರ್ಯವೋ, ಅಧರ ಶೋಭೆಯೋ,ಮೈಕಾಂತಿಯೋ ಯಾವುದೆಂದು ತಿಳಿಯದಲ್ಲ. ನನ್ನನ್ನು ಆಕರ್ಷಿಸಿರುವ ನಿನ್ನಲ್ಲಿನ ವಿಶೇಷ ಯಾವುದು ಹೇಳು" ಎಂದು ಆಳ್ವಾರ್ ಆರ್ದ್ರವಾಗಿ ಬೇಡುತ್ತಾರೆ. ಇದು ಅತ್ಯಂತ ಹೃದಯ ಸ್ಪರ್ಶಿಯಾದ ನಿರೂಪಣೆ ಎಂದು ಕಂಡು ಬರುತ್ತದೆಯಲ್ಲವೆ?

ಸಖಿಯು,ಬೇಟೆಯಾಡಲು ಬಂದ ನಾಯಕನನ್ನು ತಡೆದು ಹಿಯ್ಯಾಳಿಸುವ ಚಾತುರ್ಯವೂ ಅದ್ಭುತ ರಮ್ಯ ಚಿತ್ರಣ. ಇದನ್ನು ತಮಿಳು ಲಕ್ಷಣಶಾಸ್ತ್ರದಲ್ಲಿ 'ವೇಳಂವಿನಾದಲ್' ಎಂದು ಕರೆಯುತ್ತಾರಂತೆ. ನಾಯಕನು ನಾಯಕಿಯ ಸಖಿಯನ್ನು 'ತಾನು ಆನೆಯ ಬೇಟೆಗಾಗಿ ಬಂದಿದ್ದು, ಆನೆಯು ತಪ್ಪಿಸಿಕೊಂಡು ಹೋಯಿತು. ಅದು ಯಾವ ಕಡೆಗೆ ಹೋಯಿತು' ಎಂದು ಪ್ರಶ್ನಿಸುತ್ತಲೇ ಆ ಸಖಿಯನ್ನೂ, ಅವಳ ಒಡತಿಯನ್ನೂ ಸಂಭಾಷಣೆಗೆ ಎಳೆದು ಅವರನ್ನು ತನ್ನತ್ತ ಆಕರ್ಷಿಸಿಕೊಳ್ಳುವ ಚಾತುರ್ಯಕ್ಕೆ 'ಕಳಿರುವಿನಾದಲ್' ಎಂದು ಅಲಂಕಾರಿಕರು ಕರೆಯುವರಂತೆ. ಇವೆಲ್ಲಾ ತಮಿಳು ಅಲಂಕಾರ ಶಾಸ್ತ್ರದಲ್ಲಿನ ಪ್ರಕರಣಗಳು. ಇದನ್ನು ಗಮನಿಸಿದಾಗ ಆಳ್ವಾರ್ ಈ ಕಾವ್ಯ ಪ್ರತಿಭೆಯಲ್ಲಿ ಸಿದ್ಧ ಹಸ್ತರೆಂಬುದು ಗೋಚರಕ್ಕೆ ಬಾರದೇ ಇರದು.

ಮೇಘಗಳೊಂದಿಗೆ ಸಂದೇಶ ಹೇಳಿ ಕಳುಹಿಸುವ ಪಾಶುರವೂ ಕವಿಯ ಜಾಣ್ಮೆಗೆ ನಿದರ್ಶನ. ಇದರಲ್ಲಿ ಮೇಘಗಳು

ತಲೆಯ ಮೇಲೆ ಸಾಗುವಾಗ ಅವುಗಳ ಸ್ಪರ್ಶವು ಕೆಳಗೆ ನಿಂತ ತನಗೆ ಆಗುವುದೆಂದು ಭಾವಿಸುವುದು ಒಂದು ಅರ್ಥ. ಮೊದಲನೇ ಪಾಶುರದಲ್ಲಿ ಹೇಳಿದಂತೆ ಭಾಗವತೋತ್ತಮರು ಆಳ್ವಾರ್ ಅವರ ಭಗವತ್ಪ್ರಾವೀಣ್ಯವನ್ನು ಗುರುತಿಸದೇ ತಿರುಮಲೆಗೆ ತೆರಳಲು ಆಳ್ವಾರ್ ತಮಗೆ ಆ ಭಾಗವತರ ಪುರುಷಕಾರಿಕೆಯಿಂದಲಾದರೂ ಭಗವಲ್ಲಾಭವಾಗಲಿ ಎಂಬ ಹಂಬಲದಿಂದ ಅವರ ಶ್ರೀಪಾದಗಳನ್ನು ಶಿರದಲ್ಲಿ ಧರಿಸುವುದೇ ಉಪಾಯವೆಂದು ಅರಿತುಕೊಂಡು ಅವರಿಗೆ ಶಿರಬಾಗುತ್ತಾರೆ. ಮೇಘಕ್ಕೆ ಭಾಗವತ ಸ್ಥಾನ ಕಲ್ಪಿಸಿ ಅವು ವೆಂಕಟೇಶನನ್ನು ಓಲೈಸುವ ಕೈಂಕರ್ಯಕ್ಕೆ ಆಳ್ವಾರ್ ಮನಸೋಲುವುದನ್ನು ಕಂಡಾಗ ಆಳ್ವಾರ್ ಅವರ ಭಕ್ತಿಯ ಪರಾಕಾಷ್ಠತೆಯ ಅರಿವಾಗುತ್ತದೆ. ಭಾವುಕತೆಯು ನಮ್ಮ ಮನಸ್ಸನ್ನು ಸೂರೆಗೊಳ್ಳುವುದರಲ್ಲಿ ಸಂದೇಹವಿಲ್ಲ!

ಈ ರೀತಿಯ ಸ್ವಾಪದೇಶ, ಅನ್ಯಾಪದೇಶ ಚಮತ್ಕಾರಗಳನ್ನು ತಿರುಮಲೆಯ ವಿಚಾರವಾಗಿ ಬರುವ ಈ ಎಂಟು ಪಾಶುರಗಳಲ್ಲೇ ನಾವು ಕಂಡುಕೊಂಡು ಆನಂದಿಸುವಾಗ ಇಡೀ ತಿರುವಿರುತ್ತಂನ ಉದ್ದಕ್ಕೂ ತುಂಬಿರುವ ಈ ಸ್ವಾರಸ್ಯವನ್ನು ಆಸ್ವಾದಿಸಿದಾಗ ನಮಗೆ ಇನ್ನೆಷ್ಟು ಆನಂದವುಂಟಾಗುತ್ತದೆ ಎಂಬುದನ್ನು ಊಹಿಸಬಹುದು.

ನಮ್ಮಾಳ್ವಾರ್ ಅವರ ದಿವ್ಯ ಪ್ರಬಂಧಗಳಲ್ಲಿ "ನಂಬಿಳ್ಳೈ" ಎನ್ನುವ ಮಹಾನುಭಾವರು ಸ್ವಾರಸ್ಯವಾದ ಸಾಮರಸ್ಯವನ್ನು ಮಾಡಿದ್ದಾರೆ.

ಸೋದರಮಾವನ ಮನೆಯಿಂದ ಶ್ರೀರಾಮನ ಕೈಂಕರ್ಯವನ್ನು ಕೈಕೊಳ್ಳುವೆನೆಂಬ ಮಹದಾಸೆಯಿಂದ ಹಿಂತಿರುಗಿ ಬಂದ ಭರತನನ್ನು ಕೈಕೇಯಿಯು "ಉತ್ತಿಷ್ಠೋತ್ತಿಷ್ಠ ಕಿಂ ಶೇಷೇ ರಾಜನ್‌ಪುತ್ರ ಮಹಾಯಶಃ" ಎಂಬುದಾಗಿ ಮೇಲೆಬ್ಬಿಸುತ್ತಾಳೆ.

ಅಯೋಧ್ಯೆಯ ವಿದ್ಯಮಾನವನ್ನೆಲ್ಲಾ ಈ ವೇಳೆಗೆ ಅರಿತಿದ್ದ ಭರತನು ರಾಮನ ವಿರಹಾತುರದಿಂದಲೂ, ತಂದೆಯ ಮರಣಕ್ಕೆ ತಾಯಿಯೇ ಹೊಣೆಯೆಂಬುದನ್ನೂ,ರಾಮನ ಅರಣ್ಯಗಮನಕ್ಕೆ ತಾಯಿಯೇ ಕಾರಣವೆಂಬುದನ್ನೂ ಅರಿತಿದ್ದರಿಂದಲೂ, ತಾಯಿಯ ಈ ಸಂಬೋಧನೆಯು ಆತನಿಗೆ ಮರ್ಮಬೇಧಕವಾಗಿ ಇರಿದಂತೆ ಭಾಸವಾಯಿತು. ಆಗ ಭರತನು ಅನುಭವಿಸಿದ ಪಾಡಿನಂತೆ ತಿರುವಿರುತ್ತಂನಲ್ಲಿ ಆಳ್ವಾರ್ ಪಟ್ಟ ಸ್ಥಿತಿ ! ಚಿತ್ರಕೂಟದಲ್ಲಿ ರಾಮನಿರುವುದಾಗಿ ತಿಳಿದ ಭರತನು, "ಏಭಿಶ್ಚ ಸಚಿವೈಸ್ಸಾರ್ಥಂ ಶಿರಸಾ ಯಾಚಿತೋಮಯಾ ಭ್ರಾತುಃ ಶಿಷ್ಯಸ್ಯ ದಾಸಸ್ಯ ಪ್ರಸಾದಂ ಕರ್ತುಮರ್ಹತಿ" ಎಂಬ ಭರವಸೆಯನ್ನು ಹೊತ್ತುಕೊಂಡು ಹೊರಟಾಗಣ ಸ್ಥಿತಿಯಂತಿರುವುದಂತೆ ಆಳ್ವಾರರ ತಿರುವಾಶಿರಿಯಂನಲ್ಲಿ ಪ್ರತಿಪಾದಿತವಾಗಿರುವ ಮನೋವೃತ್ತಿ. ನನ್ನೊಬ್ಬನ ಕಣ್ಣೀರನ್ನೇ ಸಹಿಸದವನು ತನ್ನ ವಿರಹದಿಂದ ಕಣ್ಣೀರ್ಗರೆಯುತ್ತಿರುವ ಇಷ್ಟು ಜನರ ಶೋಕವನ್ನು ಕಂಡಾಗ ಹಿಂತಿರುಗದೇ ಇರುವನೇ? ತಮ್ಮನೂ, ಶಿಷ್ಯನೂ, ದಾಸನೂ ಆದ ನನ್ನ ಕೋರಿಕೆಯನ್ನು ಖಂಡಿತ ನಡೆಸಿಯೇ ಕೊಡುವನು ಎಂಬ ಭರವಸೆಯನ್ನು ಹೊತ್ತ ಭರತನು ತನ್ನ ಆಸೆ ತೀರದೇ ಹೋಗಲು ನಿರಾಶೆಯಿಂದ ಹಿಂತಿರುಗಿ ಬಂದು ನಂದಿ ಗ್ರಾಮದಲ್ಲಿ ನೆಲಸಿ ರಾಮಾಗಮನವನ್ನು ಒಂದು ತಪಸ್ಯೆಯಂತೆ ಭಾವಿಸಿ ರಾಮಪಾದುಕೆಗಳಿಗೆ ತನ್ನ ದೈನಂದಿನ ಕಾರ್ಯಗಳನ್ನು ನಿವೇದಿಸುತ್ತಾ ಅವನ ಅಗಲಿಕೆಯಿಂದ ನೊಂದು ಹದಿನಾಲ್ಕು ವರ್ಷಗಳ ದೀರ್ಘಕಾಲ ತನ್ನ ಕೈಂಕರ್ಯ ಮನೋಭಾವವನ್ನು ಬೆಳಸಿಕೊಂಡಂತಿದೆ, ಪೆರಿಯ ತಿರುವಂದಾದಿಯಲ್ಲಿ ಆಳ್ವಾರ್ ಮಾನಸಿಕ ಸ್ಥಿತಿ. ವನವಾಸವನ್ನು ಮುಗಿಸಿಕೊಂಡು ಅಯೋಧ್ಯೆಗೆ ಹಿಂತಿರುಗಿ ಬಂದ ರಾಮಚಂದ್ರನನ್ನು ಭರತನು ನಮಿಸಲು ಮುಂದಾದಾಗ ಆತನು ವಿಶ್ವಾಸದಿಂದ "ಅಂಕೇ ಭರತ ಮಾರೋಪ್ಯಮುದಿತ ಪರಿಷಸ್ವಜೇ" ಎಂದು ವಾಲ್ಮೀಕಿ ಮಹರ್ಷಿಗಳು ವರ್ಣಿಸಿರುವಂತೆ ಆಲಂಗಿಸಿಕೊಂಡು ಸಂತೋಷಿಸುತ್ತಾನೆ. ಭರತನ ಅಭೀಷ್ಟದಂತೆಯೇ ಆತ ನಯನಾಭಿರಾಮನಾಗಿ ಕಾಣಿಸಿಕೊಂಡು ಪಟ್ಟಾಭಿಷೇಕವನ್ನು ಮಾಡಲ್ಪಟ್ಟವನಾಗಿ ಸಕಲ ಜನರಿಗೂ ಆನಂದವನ್ನು ಉಂಟು ಮಾಡುತ್ತಾನೆ.ಈ ಸ್ಥಿತಿಯಲ್ಲಿ ಭರತನು ಪಡೆದ ಸ್ವರೂಪಾನುರೂಪ ಫಲ ಸ್ವರೂಪದಂತಿದೆ ತಿರುವಾಯ್ಮೊಳಿಯೊಳಗಣ ಆಳ್ವಾರ್‌ರವರ ಫಲಸಿದ್ಧಿ.

ಈ ಸುಂದರ ಮಹೋಪಮೆಯ ಹಿಂದೆ ನಮ್ಮಾಳ್ವಾರ್ ಅವರ ಪ್ರಪತ್ತಿ ಮಾರ್ಗದ ವಿವಿಧ ಮಜಲುಗಳನ್ನೂ, ಅನುಭಾವವನ್ನೂ ನಾವು ದರ್ಶಿಸಬಹುದು.

ಇನ್ನೂ ನಮ್ಮಾಳ್ವಾರ್ ಅವರ ಪೆರಿಯ ತಿರುವಂದಾದಿಯಲ್ಲಿ 87 ಪಾಶುರಗಳಿದ್ದು 68 ನೇ ಪಾಶುರದಲ್ಲಿ ಇವರು ತಿರುವೇಂಗಡವನ್ನು ಮಂಗಳಾಶಾಸನ ಮಾಡಿದ್ದಾರೆಂದು ತಿಳಿಯುತ್ತದೆ. ಆದರೆ ಈ ಪಾಶುರದಲ್ಲಿ ಇವರು ಈ ಮಲೆಯ ಸಂಬೋಧನ ವಾಚಕಗಳಾದ ವೇಂಗಡವೆಂದಾಗಲೀ ತಿರುವೇಂಗಡವೆಂದಾಗಲೀ ಹೇಳದೆ ಕೇವಲ"ಕಲ್ಲುಂ" ಎಂದು ಹೇಳಿರುವುದನ್ನೇ ತಿರುವೇಂಗಡವನ್ನು ಕುರಿತ ವಿಶೇಷಣವೆಂದು ವಿಶ್ಲೇಷಣೆ ಮಾಡಿದ್ದಾರೆ.



- ಮುಂದುವರೆಯುತ್ತದೆ.

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ|| ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

**ಕಳೆದ ಸಂಚಿಕೆಯಿಂದ**

ಪ್ರಾಚೀನ ಕಾಲದ ಸಾಳುವ ನರಸಿಂಹ ರಾಯನು ರಾಜನಾಗಿ ರಾಜ್ಯಭಾರ ಮಾಡಿದ ಮ್ಲೇಚ್ಛ ದಂಡಯಾತ್ರೆಯುಂಟಾಗಿ ಅವನ ರಾಜ್ಯಕ್ಕೆ ಒಂದು ದೇವ ಬ್ರಾಹ್ಮಣರನ್ನು ಹಿಂಸೆ ಮಾಡುತ್ತಿರಲು ಆಗ ವೀರನರ ಸಿಂಹರಾಯರು, ಶ್ರೀವೇಂಕಟಾಚಲಪತಿ ಪಾದಾರವಿಂದಗಳಲ್ಲಿ ಭಕ್ತಿಯುಳ್ಳವನಾಗಿ ಬೆಟ್ಟದ ಮೇಲಿರುವ ಪೆರುಮಾಳ್, ಗೋವಿಂದರಾಜುಸ್ವಾಮಿ ಮೊದಲಾದವರಿಗೆ ಶ್ರೀಭಂಡಾರವನ್ನು (ಧನಾಗಾರವನ್ನು ಪಾಪವಿನಾಶನ ತೀರ್ಥದಿಂದ ಪೂರ್ವಕ್ಕೆ ಅತಿ ಗೋಪ್ಯವಾದ ಗುಹೆಯಲ್ಲಿ ವಿಜಯ ಮಾಡಿ ತಪ್ಪದೇ ನಿತ್ಯಾರಾಧನೆ ಮಾಡುವಂತೆ ಹಿರಿಯ ಪೆರುಮಾಳ್ ವಿಗ್ರಹದ ರಕ್ಷಣೆಗಾಗಿ ಬೆಟ್ಟದ ಮೇಲೆ ಒಂದು ಶಿಲಾಪ್ರಾಕಾರವನ್ನು ಕಟ್ಟಿಸಿರಲು ದೋಚಗಳ್ಳರು ಬೆಟ್ಟದ ಸಮೀಪಕ್ಕೆ ಬಂದಿರಲು ರಾಜ ಸಂಹರಿಸಲು ಶಕ್ತಿಯಿಲ್ಲದೇ ಒಂದು ದಿನ ಶ್ರೀವೇಂಕಟೇಶ್ವರ ಸನ್ನಿಧಾನಕ್ಕೆ ಬಂದು "ಸ್ವಾಮಿ! ನೀವೇ ಈ ದೋಚುಗಳ್ಳರ ಉಪದ್ರವವನ್ನು ಹೋಗಲಾಡಿಸಬೇಕು" ಎಂದು ವಿನಂತಿಸಲು ಮರುದಿನ ರಾತ್ರಿ ರಾಜನ ಕನಸಿನಲ್ಲಿ ಶ್ರೀವೇಂಕಟಾದ್ರಿ ಸಿಂಹನಾದ ಶ್ರೀಸುಂದರ ನರಸಿಂಹ ಸ್ವಾಮಿ ಸಾಕ್ಷಾತ್ಕರಿಸಿ "ಓ! ನರಪತಿ, ಹಿಂದಿನ ಕಾಲದಲ್ಲಿ ನಾವು ಒಬ್ಬಾನೊಬ್ಬ ಭಕ್ತನ ಆಪಾದನೆಯನ್ನು ತೊಲಗಿಸಲು ನಮ್ಮ ಅಸಾಧಾರಣ ಶಕ್ತಿಯುಳ್ಳ ಶಂಖ ಚಕ್ರಗಳನ್ನು ಆ ಭಕ್ತನಿಗೆ ಸಾಧಿಸುವುದರ ಮೂಲಕ ನಮ್ಮ ಸರ್ವೇಶ್ವರ ತತ್ವವು ಹೋಗಲಾಡಿಸಿ ನಮ್ಮ ಹಾಗೂ ದೇವತೆಗಳ ಅಂತರವನ್ನು ತಳದ ಪಾಮರ ಜನರನ್ನೂ ಶಾಸ್ತ್ರ ಚಕ್ರಗಳನ್ನು ಕೊಟ್ಟು ತನ್ನ ಸಾರ್ವಭೌಮತ್ವವನ್ನು ಪ್ರಕಾಶಪಡಿಸಿ ನಮ್ಮ ವಿಗ್ರಹಗಳಿಗೂ, ಸಂಪತ್ತುಗಳಿಗೂ ರಕ್ಷಕನಾಗಿ ನಮ್ಮ ಈ ದಿವ್ಯ ಕ್ಷೇತ್ರಕ್ಕೆ ಬಂದಿರುವ ಆಪಾದನೆಗಳನ್ನು ತೊಲಗಿಸುವವರಾಗಿ ಶ್ರೀಭಗವದ್ರಾಮಾನುಜರ ಮುದ್ರೆಗಳಿಗೆ ಧರ್ಮಾಧಿಕಾರಿಯಾದ ಶ್ರೀವೈಷ್ಣವರನ್ನು ಮಾತ್ರ ಸಾಧನೆಯನ್ನಾಗಿ ಮಾಡಿಕೊಂಡು ಮ್ಲೇಚ್ಛೋಪ ದ್ರವಗಳನ್ನು ಪರಿಹರಿಸುವುದು. ಅವರೊಡನೆ ನಿಮ್ಮ ಚತುರಂಗ ಸೈನ್ಯವನ್ನು ಕೂಡಿಸಿ, ಅವರಿಗೆ ನರವಾಹನಗಳನ್ನು ಕೊಟ್ಟು ಮ್ಲೇಚ್ಛೊಗಳೆದುರಿಗೆ ಹೋಗುವಂತೆ ಕಳಿಸಿದೆಯಾದರೆ ಅವರ ಸಮಸ್ತ ಪಾಪಗಳು ತೊಳೆದು ಹೋದಂತೆಯೇ" ಎಂದು ಆಜ್ಞಾಪಿಸಿಲು ರಾಜನು ಆ ಸ್ವಪ್ನವನ್ನು ಸ್ಮರಿಸಿ ಸಂತುಷ್ಟನಾಗಿರುವಾಗಲೇ ಶ್ರೀಮದ್ರಾಮಾನುಜ ಮುದ್ರಾ



ನಿರ್ವಾಹಕರಾಗಿ ನರಸಿಂಹ ಮಂತ್ರ ಜಪದ ಮೂಲಕ ಭಗವದ್ ಸಾಕ್ಷಾತ್ಕಾರ ಹೊಂದಿದವರಾಗಿ ನರಸಿಂಹಜಿಯ್ಯರ್ ಎಂಬ ಪ್ರಖ್ಯಾತಿಯನ್ನೊಳಗೊಂಡ ಶ್ರೀವೈಷ್ಣವರಿಗೆ ಮಾತ್ರವೇ ತನ್ನ ಚತುರಂಗ ಸೈನ್ಯವನ್ನು ಸೇರಿಸಿ ಪಲ್ಲಕ್ಕಿ ಯನ್ನು ಕೊಟ್ಟು ಕಳಿಸಲು ಆ ದಿನರಾತ್ರಿ ಆಮ್ಲೇಚ್ಛನು ತನ್ನ ಸ್ವಪ್ನದಲ್ಲಿ ಒಬ್ಬ ಸನ್ಯಾಸಿಯು ನರಸಿಂಹಾವತಾರ ನಾಗಿ ಚದುರಂಗ ಬಲ ಸೈನ್ಯ ದೊಡನೆ ಒಂದು ತನ್ನ ಸೇನೆಯನ್ನೆಲ್ಲಾ ಸಂಹರಿಸಿದಂತೆ ತನ್ನ ಕಣ್ಣುಗಳಿಂದಲೇ ಬಾಣ ಬಿಟ್ಟು ಅವು ಬಂದು ತನ್ನನ್ನು ತಗಲಿದ್ದನ್ನು ಕಂಡು ತಾನೂ ಓಡಿ ಹೋಗಿದ್ದಾನೆ. ಇಷ್ಟಾದ ಮೇಲೆ ದರೋಡೆ ಕೋರರ ತೊಂದರೆ ತೊಲಗಿದೆ. ಒಂದಾನೊಂದು ಕಾಲದಲ್ಲಿ ಓಢ್ರ ದೇಶದ ಜನರ ಉಪದ್ರವವೇರ್ಪಟ್ಟು ಅವರಿಂದ ಭಯ ಭೀತಿಯುಂಟಾಗಿ ಊರ ರಾಜರು ಶ್ರೀವೈಷ್ಣವರಿಗೆ ಮಾತ್ರ “ಪಲ್ಲಕ್ಕಿ ಹತ್ತಿಕೊಂಡು ಹೋಗಿ ಮೊದಲು ಸ್ವಾಮಿ ಕೈಂಕರ್ಯಗಳನ್ನು ನೆರ ವೇರಿಸಿ ಬನ್ನಿ” ಎಂದು ಕಟ್ಟಪ್ಪಣೆ ಮಾಡಿದರು. ಆ ದಿನವೇ ಆ ಪಟ್ಟಣ ದಲ್ಲಿದ್ದವರಲ್ಲಿ ಒಬ್ಬರು ಪಲ್ಲಕ್ಕಿಯನ್ನು ಹತ್ತಿಕೊಂಡು ಹೋಗಿ ಸ್ವಾಮಿಯ ನಿತ್ಯ ಕೈಂಕರ್ಯಗಳನ್ನು ಮಾಡುತ್ತಿದ್ದರು.

ನಂತರ ಮತ್ತೊಂದು ಕಾಲದಲ್ಲಿ ಒಡಿಶಿಗಳು ಉಪದ್ರವ ಏರ್ಪ ಡಲು ಅವರ ಕಾರಣಕ್ಕಾಗಿಯೇ ತಿರುಮಲೆಗೆ ಆಪತ್ತು ಸಂಭವಿಸುವ ಸಮಯದಲ್ಲಿ ಆದೇಶಾಧಿಪತಿಯಾದ ಸದಾಶಿವರಾಯನು “ಓಢ್ರನು ದೈವವೈದಿಕವನ್ನೂ ದೇವ ಬ್ರಾಹ್ಮಣ ಹಿಂಸೆಯನ್ನು ಮಾಡಲು ಬಂದು ಆಕ್ರಮಿಸಿರುವ ಆತನೊಂದಿಗೆ ಯುದ್ಧ ಮಾಡುವುದು.” ಎಂದು ನಿರ್ಣ ಯಿಸಿ ಮುಂದೊಮ್ಮೆ ಮ್ಲೇಚ್ಛೋಪದ್ರವುಂಟಾದಾಗ ಬರಿಯ ರಾಜಮೂಲದ ವರನ್ನೊಂದೇ ಅಲ್ಲದೇ ಭಕ್ತ ಜನಗಳನ್ನು ಸಾಧನೆಯನ್ನಾಗಿ ಮಾಡಿ ಕೊಂಡು ಬಂದಿ ರುವ ಆಪತ್ತನ್ನು ಹೋಗಲಾಡಿಸಿದ ಐತಿಹ್ಯವನ್ನು ಕೇಳಿದವನಾಗಿ ಆ ರೀತಿಯಲ್ಲೇ ಈಗಲೂ ಕೂಡ ಭಕ್ತ ಮೂಲವೆಂಬ ಭಯವನ್ನು ತೊಡೆದು ಹಾಕುವಂತೆ ಮಾಡಬೇಕೆಂದು ನಿಶ್ಚಯಿಸಿ ಆ ಸಮಯದಲ್ಲಿ ಶ್ರೀವೇಂಕಟೇಶ್ವರಸ್ವಾಮಿ ಶ್ರೀ ಧನಾಗಾರಕ್ಕೆ ಧರ್ಮಾ ಧಿಕಾರಿಯಾಗಿ ದೇವಾಲಯ ವಿಚಾರಕರ್ತರಾದ ತಿರುವೇಂಗಡಜಿಯ್ಯರು ಸಕಲ ಶಾಸ್ತ್ರ ಪ್ರವರ್ತಕರಾಗಿ ರಾಜ ವಲ್ಲಭರಾಗಿರುವಾಗಲೇ ಏಕೈಕ ಶ್ರೀವೈಷ್ಣವರಾದ ತಿರುವೇಂಗಡಜಿಯ್ಯರಿಗೆ ಪಲ್ಲಕಿಯನ್ನು ಕೊಟ್ಟು ತಾವು ಈ ರಾಜಗೋಷ್ಠಿಗೆ ಪ್ರತಿನಿಧಿಯಾಗಿರುವುದರಿಂದಲೂ ಈ ಯಜಮಾನಿಕೆಯನ್ನು ಹೊತ್ತು ಶ್ರೀವೈಷ್ಣವ ಸಂಪ್ರ ದಾಯದಂತೆ ಹೊರಟು ಒಡಿಶ ದೇಶಾಧಿಪತಿಯಾದ ಜಗನ್ನಾಥದೇವನನ್ನು ಆಶೀರ್ವದಿಸಿ.

ಈ ಸ್ಥಳಕ್ಕೆ ಯಾವುದೇ ಆಪತ್ತು ಬಾರದಂತೆ ಮಾಡಿಕೊಂಡು ಬರಬೇಕೆಂದು ಹೇಳಿ ಕಳುಹಿಸಲು ಜಿಯ್ಯರು ಹಾಗೆಯೇ ಪಲ್ಲಕ್ಕಿಯನ್ನಾರೋಹಿಸಿ ಹೊರಟು ಓಢ್ರ ರಾಜನನ್ನು ಹರಸಿ, ಶ್ರೀನಿವಾಸ ಸ್ವಾಮಿಯ ವೈಭವವನ್ನು ಹಂತಹಂತವಾಗಿ ಬಣ್ಣಿಸು ತ್ತಿರಲು ಆತನು ಅದನ್ನು ಕೇಳಿ ಭಯ ಭಕ್ತಿಯುಳ್ಳವ ನಾಗಿ ತಿರುಮಲೆಕ್ಕೆ ಬಂದು ಸ್ವಾಮಿಗೆ ಸೇವಾ ಸಂತುಷ್ಟ ನಾಗಿ ಸ್ವಾಭಿಮಾನವೆನ್ನೆತ್ತಿ ಹಿಡಿಯಲು ಸ್ವಾಮಿಗೆ ಒಂದು ವಜ್ರದ ಕಿರೀಟವನ್ನು ಮಾಡಿಸಿ ಸಮರ್ಪಿಸಿ, ಕೃತಾರ್ಥನಾಗಿ ದಿಗ್ವಿಜಯ ಮಾಡಿಕೊಂಡು ಬಂದಂಥವನಾಗಿ ತಿರುಮಲೆ ಪುಣ್ಯಕ್ಷೇತ್ರವಾಗಿರುವು ದರಿಂದ ಪ್ರಾಕಾರದಲ್ಲಿ ಒಂದು ವಿಜಯ ಸ್ತಂಭವನ್ನು ಪ್ರತಿಷ್ಠಾಪಿಸಿ, ಸೇತುದರ್ಶನವನ್ನು ಮಾಡಿಕೊಂಡು ಮರಳಿ ಹೋದನು.

(ಮುಂದುವರೆಯುತ್ತದೆ)

## ಡಿಸೆಂಬರ್ ತಿಂಗಳ ರಸಪ್ರಶ್ನೆಯ ಉತ್ತರಗಳು

01. ಕಾರ್ತೀಕ ಮಾಸ
02. ಮಹಾಲಕ್ಷ್ಮೀ
03. ಸಮುದ್ರರಾಜನ
04. ಬಂಗಾರದ ಪುಷ್ಪಗಳನ್ನು
05. ಶ್ರೀ ಪದ್ಮನಾಭ ತೀರ್ಥರು
06. ಗಂಗಾಪುತ್ರರಾದ ಭೀಷ್ಮರು
07. ಮಾರುತಿ
08. ಶುಕ್ರವಾರ
09. ಆಯುರ್ವೇದ
10. ಕನ್ಯೆ
11. ವೆಂಕಟಾದ್ರಿ
12. ಯಾದವ
13. ಮಹಾಲಕ್ಷ್ಮೀ
14. ಸುಮಾರು ಇನ್ನೂರಕ್ಕಿಂತಲೂ ಹೆಚ್ಚು
15. ಗಾಂಧರ್ವ ವಿವಾಹ

# ಕಾಳಿಚ್ಚೀರಾಮವಿಣ್ಣಗರಂ

**(ಶೀರ್ಕಾಳಿ - ತಾಡಾಳನ್ ಕೋಯಿಲ್)**

**ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**
**ಅನುವಾದ : ಸೂರ್ಯವಂಶಿ**

ಶ್ರೀಯಃಪತಿಯಾದ ಶ್ರೀಮನ್ನಾರಾಯಣನು ಈ ಭೂಲೋಕದಲ್ಲಿ ಅರ್ಚಾರೂಪನಾಗಿ ವೈಕುಂಠಕ್ಕೆ ಸಮಾನವಾದ ದಿವ್ಯ ದೇಶಗಳಲ್ಲಿ ನೆಲೆಸಿದ್ದಾನೆ. ಅದರಲ್ಲಿ ಮುಖ್ಯವಾಗಿ ವಿಣ್ಣಗರಂ ಎಂಬ ಹೆಸರು ಕೇಳಿ ಬರುತ್ತದೆ. ಅಂದರೆ ಮೇಲಿನ ಲೋಕದಲ್ಲಿರುವ ಅದ್ಭುತವಾದ ನಗರ ಎಂದರ್ಥ! ಆ ಹೆಸರು ಇಲ್ಲಿ ಭೂಲೋಕದಲ್ಲಿ ವೈಗುಂಡವಿಣ್ಣಗರಂ, ಅರಿಮೇಯವಿಣ್ಣಗರಂ,ನಂದಿಪುರವಿಣ್ಣಗರಂ,ಕಾಳಿಚ್ಚೀರಾಮವಿಣ್ಣಗರಂ, ಪರಮೇಶ್ವರವಿಣ್ಣಗರಂ ಎಂಬ ವಿಶೇಷವಾಗಿ ಕರೆಯಲಾಗುತ್ತದೆ. ಈಗ ಕಾಳಿಚ್ಚೀರಾಮವಿಣ್ಣಗರಂ ಎಂಬ ದಿವ್ಯದೇಶವು ಶೀರ್ಕಾಳಿ, ತಾಡಾಳನ್ ಕೋಯಿಲ್ ಎಂಬ ಹೆಸರುಗಳಿಂದ ಮಯಿಲಾಡುದುರೈ (ಮಾಯವರಂ) ಪ್ರಾಂತಕ್ಕೆ ಉತ್ತರ ದಿಕ್ಕಿನಲ್ಲಿ 21 ಕಿ.ಮೀ. ದೂರದಲ್ಲಿ, ಎರಡು ಪ್ರಾಕಾರಗಳಿಂದ 3 ಅಂತಸ್ತುಗಳ ರಾಜಗೋಪುರದೊಂದಿಗೆ ಅರ್ಧ ಮಂಟಪ, ಮಹಾಮಂಟಪಗಳಿಂದ ಕೂಡಿದ್ದು, ಪಾಟಲೀಕವನ, ಉತ್ತಮ ಕ್ಷೇತ್ರ ಎಂಬ ಹೆಸರುಗಳಿಂದ ಕರೆಯಲ್ಪಡುತ್ತಾ ಪ್ರಸಿದ್ಧಿಯನ್ನು ಪಡೆದಿದೆ.

### ತಾಡಾಳನ್ ಎಂಬ ಹೆಸರಿನ ಸಾರ್ಥಕತೆ

ಭಗವಂತನು ವಾಮನಾವತಾರವನ್ನು ಧರಿಸಿ ತ್ರಿವಿಕ್ರಮನಾಗಿ ತನ್ನ ಮೊದಲ ಪಾದದಿಂದ ಈ ಭೂಲೋಕವನ್ನೇ ಅಳೆದನಲ್ಲವೇ! ಆ ರೀತಿ ಅಳೆದ ಪ್ರದೇಶವೇ **'ಕಾಳಿಚ್ಚೀರಾಮವಿಣ್ಣಗರಂ'** ಎಂದು ಕರೆಯಲ್ಪಡುತ್ತಿದೆ. ಮೂರು ಪಾದಗಳಿಂದ ಮುಲ್ಲೋಕಗಳನ್ನು ಅಳೆದವನಾದ್ದರಿಂದ 'ತಾಳಾಲ್ ಅಳಂದವನ್ ತಾಡಾಳನ್' ಎಂದು ಅವನನ್ನು 'ತಾಡಾಳನ್' ಎಂಬ ಹೆಸರಿನಿಂದ ಕರೆಯಲಾಗುತ್ತಿದೆ.

### ಶೀರ್ಕಾಳಿ (ಕಾಳಿಚ್ಚೀರಾಮವಿಣ್ಣಗರಂ)

ಶೀರ್+ಕಾಜಿ ಎನ್ನುವ ಈ ಹೆಸರು ಶೀರ್ಕಾಳಿಯಾಗಿ ಬದಲಾಗಿದೆ. **'ಶೀರ್'** ಎಂಬ ಶಬ್ದಕ್ಕೆ ಉತ್ತಮ ಎಂದು ಅರ್ಥ! 'ಕಾಜಿ' ಎಂಬ ಶಬ್ದಕ್ಕೆ ದೃಢ,ಉತ್ಕೃಷ್ಟ ಎಂಬ ಅರ್ಥಗಳೂ ಇವೆ. ಇಲ್ಲಿ ಕೋದಂಡ ರಾಮನು ಪ್ರತ್ಯೇಕವಾದ ಸನ್ನಿಧಿಯಲ್ಲಿ ನೆಲೆಸಿದ್ದಾನೆ. ಆದ್ದರಿಂದ ಶ್ರೀರಾಮ ಎಂಬ ಹೆಸರು ತಮಿಳಿನಲ್ಲಿ **'ಚ್ಚೀರಾಮ'** ಎಂದು ಪರಿವರ್ತನೆ ಗೊಂಡು ಶ್ರೀರಾಮನು ನೆಲೆಸಿರುವ ಸ್ಥಳವಾದ್ದರಿಂದ ಈ ದಿವ್ಯ ದೇಶಕ್ಕೆ ಕಾಳಿಚ್ಚೀರಾಮವಿಣ್ಣಗರಂ ಎಂಬ ಹೆಸರು ಬಂದಿದೆ. ಮೂಲಮೂರ್ತಿಯಾದ ತ್ರಿವಿಕ್ರಮನು ತನ್ನ ಎಡಪಾದವನ್ನು ಮೇಲಕ್ಕೆ ಎತ್ತಿ, ಅದಕ್ಕೆ ಸಮಾನವಾಗಿ ತನ್ನ ಎಡಗೈಹಸ್ತವನ್ನೂ ಮೇಲಕ್ಕೆತ್ತಿ, ಬಲಪಾದವನ್ನು ಚೆನ್ನಾಗಿ ಕೆಳಗೆ ಇರಿಸಿ ಬಲಗೈನಿಂದ ದಾನವನ್ನು ಮಾಡುತ್ತಿರುವ ಬಲಿಚಕ್ರವರ್ತಿಯು ಬಳಿ ದಾನವನ್ನು ತೆಗೆದುಕೊಳ್ಳುತ್ತಿರುವಂತೆ ಪಂಚಾಯುಧಗಳಿಂದ ಮೂರು ಅಡಿಗಳ ಭೂಮಿಯನ್ನು ಯಾಚಿಸುತ್ತಿರುವಂತೆ ಪೂರ್ವದಿಕ್ಕನ್ನು ನೋಡುತ್ತಾ ದೇವದೇವನು ನೆಲೆಸಿದ್ದಾನೆ. ಉತ್ಸವ ಮೂರ್ತಿ ತ್ರಿವಿಕ್ರಮ ತಾಡಾಳ ನಾರಾಯಣನ್,ಅಮ್ಮನವರು ಲೋಕನಾಯಕಿ ಮೂಲ ಮೂರ್ತಿ, ಉತ್ಸವ ಮೂರ್ತಿಯಾಗಿ ಮಟ್ಟವಿಳ್ಳುಳಲೀ ಎಂಬ ಹೆಸರಿನಿಂದ ನೆಲೆಸಿದ್ದಾರೆ. ಶಂಖಪುಷ್ಕರಿಣಿ,ಚಕ್ರತೀರ್ಥ,ಪುಷ್ಕಲಾವರ್ತ ವಿಮಾನ ಛಾಯೆಯಲ್ಲಿ ದೇವದೇವನು ಪ್ರಾಚೀದಿಕ್ಕನ್ನು ನೋಡುತ್ತಾ ತ್ರಿವಿಕ್ರಮ ಸ್ವರೂಪದಲ್ಲಿ ನೆಲೆಸಿದ್ದಾನೆ.

### ಸ್ಥಳಪುರಾಣ

ರೋಮಶಮುನಿ,ಅಷ್ಟಾವಕ್ರ ಇಬ್ಬರೂ ಮಹರ್ಷಿಗಳು ಈ ಕಾಳಿಚ್ಚೀರಾಮವಿಣ್ಣಗರ ದಿವ್ಯದೇಶದಲ್ಲಿ ನೆಲೆಸಿದ್ದಾರೆ. ಈ ವಿಷಯವನ್ನು ಬ್ರಹ್ಮಾಂಡಪುರಾಣದಲ್ಲಿ ತಿಳಿಸಿದ್ದಾರೆ. ಬ್ರಹ್ಮದೇವನು ತಾನೇ ಸೃಷ್ಟಿಕರ್ತನೆಂಬ ಅಹಂಕಾರದಿಂದ ಮರೆಯುತ್ತಿದ್ದಾಗ, ಪರಂಧಾಮನು ಅವನ ಅಹಂಕಾರವನ್ನು ನೆಲಸಮ ಮಾಡುವ ಉದ್ದೇಶದಿಂದಾಗಿ ರೋಮಶ ಮುನಿಯ ತಪಸ್ಸಿನ ಫಲವಾಗಿ ಆತನಿಗೆ ಅಸಂಖ್ಯಾತವಾದ ಆಯಸ್ಸನ್ನು ಅನುಗ್ರಹಿಸಿದ. ರೋಮಶ ಮುನಿಯ ಒಂದೊಂದು ಕೇಶವು ಕೆಳಗೆ ಬಿದ್ದಾಗ ಬ್ರಹ್ಮದೇವನ ಒಂದು ಆಯಸ್ಸಿನ ಕಾಲ ಪರಿಪೂರ್ಣವಾಗುತ್ತದೆಂದು ತಿಳಿಸಿದ,ಇದರ ಬಗೆಗೆ ಬ್ರಹ್ಮ ದೇವನು ರೋಮಶಮುನಿಯೊಂದಿಗೆ ಮಾತನಾಡಿದಾಗ ರೋಮಶಮುನಿಯು "ಹೇ ಬ್ರಹ್ಮದೇವಾ! ನಿನ್ನ ಆಯಸ್ಸು ನನ್ನ ಕೇಶದೊಂದಿಗೆ ಸಮಾನ" ಎಂದು ಹೇಳಿದಾಗ, ಬ್ರಹ್ಮದೇವನು ನಾಚಿಕೆಯಿಂದ ತನ್ನ ತಪ್ಪನ್ನು ತಿಳಿದುಕೊಂಡು ಭಗವಂತನನ್ನು ಶರಣುಬೇಡಿದನು. ಆದ್ದರಿಂದ ತನ್ನ ತಪಸ್ಸಿನಿಂದ ಬ್ರಹ್ಮದೇವನ ಅಹಂಕಾರವನ್ನು ಕಳೆದ ರೋಮಶಮುನಿಯನ್ನು ಅನು ಗ್ರಹಿಸುವುದಕ್ಕಾಗಿ ಭಗವಂತನು ಈ ದಿವ್ಯ ದೇಶದಲ್ಲಿ ತ್ರಿವಿಕ್ರಮನಾಗಿ ದರ್ಶನವನ್ನು ನೀಡಿದ.

### ಅಷ್ಟಾವಕ್ರನ ಚರಿತ್ರೆ

ಅಷ್ಟಾವಕ್ರನು ತನ್ನ ತಾಯಿಯ ಗರ್ಭದಲ್ಲಿದ್ದ ಸಮಯದಲ್ಲಿ ತಂದೆಯಾದ ಕಹೋಲನು ವೇದವನ್ನು ಅಪಸ್ವರದಲ್ಲಿ ಹೇಳುತ್ತಿದ್ದಾಗ ತಂದೆಯಾದ ಕಹೋಲನ ಅಪಸ್ವರವನ್ನು ಖಂಡಿಸಿದ. ಇದರೊಂದಿಗೆ ಕೋಪೋದ್ರಿಕ್ತನಾದ ಕಹೋಲನು ಎಂಟು ವಕ್ರಗಳೊಂದಿಗೆ ನೀನು ಜನಿಸುವೆ ಎಂದು ಆ ಮಗುವಿಗೆ ಶಾಪವನ್ನು ನೀಡಿದ. ಆದ್ದರಿಂದ ಆ ಮಗು ಎಂಟು ವಕ್ರಗಳೊಂದಿಗೆ ಹುಟ್ಟಿದ. ಆದ್ದರಿಂದ ಅವನಿಗೆ ಅಷ್ಟಾವಕ್ರ ಎಂದು ಹೆಸರು ಬಂತು. ತನ್ನ ತಂದೆಯಲ್ಲಿ ಅಚಂಚಲವಾದ ಭಕ್ತಿ ವಿಶ್ವಾಸಗಳನ್ನು ಹೊಂದಿದ್ದ. ಒಮ್ಮೆ ಜನಕ ಮಹಾರಾಜನ ಸಭೆಯಲ್ಲಿ ಇದ್ದ ವಂದಿ ಎಂಬ ಒಬ್ಬ ಪಂಡಿತನಿಂದ ತನ್ನ ತಂದೆ ಕಹೋಲನು ಅಪನಿಂದೆಯನ್ನು ಎದುರಿಸಿದ ವಿಷಯವನ್ನು ತಿಳಿದುಕೊಂಡು, ಸಭೆಗೆ ಹೋಗಿ ಆ ವಂದಿ ಎಂಬ ಪಂಡಿತನೊಂದಿಗೆ ವಾದವನ್ನು ಮಾಡಿ, ಅವನನ್ನು ಜಯಿಸಿ, ವರುಣಲೋಕದಲ್ಲಿ ಅಡಗಿಸಿಟ್ಟ ತನ್ನ ತಂದೆ ಕಹೋಲನನ್ನು "ತಾಡಾಳನ್" ಎಂಬ ಈ ದೇವನ ಅನುಗ್ರಹದಿಂದ ಕರೆತಂದ, ಆದ್ದರಿಂದ ತನ್ನ ತಂದೆ ಕಹೋಲನನ್ನು ಅನುಗ್ರಹಿಸಿದ ತ್ರಿವಿಕ್ರಮ ಸ್ವಾಮಿಯನ್ನು ಅಷ್ಟಾವಕ್ರ ಅದೇ ಪ್ರಕಾರ ಸೇವಾಭಾಗ್ಯವನ್ನು ಉಂಟು ಮಾಡಬೇಕೆಂದು ಪ್ರಾರ್ಥಿಸಿದಾಗ, ದೇವದೇವನು ಹಾಗೇ ಆಗಲಿ ಎಂದು ಅವನನ್ನು ಅನುಗ್ರಹಿಸಿ ಭಕ್ತರನ್ನೂ ಅನುಗ್ರಹಿಸುತ್ತಿದ್ದಾನೆ. ಶೈವಸಿದ್ಧಾಂತದಲ್ಲಿ 64

ನಾಯನಾರ್‌ಗಳು ಇದ್ದಾರೆ. ಶ್ರೀ ವೈಷ್ಣವ ಸಿದ್ಧಾಂತದಲ್ಲಿ ಪನ್ನಿದ್ದರು ಆಳ್ವಾರರು ಇರುತ್ತಾರೋ ಹಾಗೇ 64 ಜನ ನಾಯನಾರ್‌ಗಳಲ್ಲಿ ನಾಲ್ವರು ಬಹು ಮುಖ್ಯರು. ಒಬ್ಬರು ತಿರುಜ್ಞಾನ ಸಂಬಂಧರ್, ಎರಡನೆಯವರು ತಿರುನಾವುಕ್ಕರ್‌ಶರ್, ಮೂರನೆಯವರು ಸುಂದರಮೂರ್ತಿ, ನಾಲ್ಕನೆಯವರು ಮಾಣಿಕ್ಯ ವಾಚಕರ್. ಈ ನಾಲ್ವರು ಶೈವ ಸಿದ್ಧಾಂತಕ್ಕೆ ಮೂಲ ಸ್ತಂಭದಂತಹವರು. **'ತೇವಾರ'** ಎಂಬ ಅದ್ಭುತ ಗ್ರಂಥವನ್ನು ರಚಿಸಿದ್ದಾರೆ. ನಾಲ್ವರರಲ್ಲಿ ತಿರುಜ್ಞಾನ ಸಂಬಂಧರ್ ಈ ದಿವ್ಯದೇಶದಲ್ಲಿ ಜನಿಸಿದರು.

| | |
|---|---|
| **ಭಗವಂತ:** | **ಮೂಲವರ್ ತ್ರಿವಿಕ್ರಮ, ತಾಡಾಳನ್ ಪಂಚಾಯುಧವಿಶಿಷ್ಟನು** |
| **ಉತ್ಸವ ಮೂರ್ತಿ :** | **ತ್ರಿವಿಕ್ರಮನಾರಾಯಣನ್** |
| **ಅಮ್ಮನವರು :** | **ಮೂಲಮೂರ್ತಿ ಲೋಕನಾಯಕಿ, ಉತ್ಸವ ಮೂರ್ತಿ ಮಟ್ಟವಿಳ್ಳುಕಲೀ** |
| **ತೀರ್ಥ :** | **ಶಂಖಪುಷ್ಕರಿಣಿ, ಚಕ್ರತೀರ್ಥ** |
| **ವಿಮಾನ:** | **ಪುಷ್ಕಲಾವರ್ತ ವಿಮಾನ** |
| **ಪ್ರತ್ಯಕ್ಷ :** | **ರೋಮಶಮುನಿ, ಅಷ್ಟಾವಕ್ರ** |
| **ಮಂಗಳಾಶಾಸನ :** | **ತಿರುಮಂಗೈ ಆಳ್ವಾರರು** |
| **ಆಗಮ ಶಾಸ್ತ್ರ:** | **ವೈಖಾನಸ ಆಗಮ ಶಾಸ್ತ್ರ** |

### ತಿರುಮಂಗೈ ಆಳ್ವಾರ್ ವೃತ್ತಾಂತ :

ಪರಕಾಲನ್ ಎಂಬ ಈ ಆಳ್ವಾರರು ಸಾಲಗ್ರಾಮ, ಬದರಿಕಾಶ್ರಮ ಹೀಗೆ ಉತ್ತರ ದಿವ್ಯ ದೇಶಗಳ ಯಾತ್ರೆಯನ್ನು ಮಾಡುತ್ತಾ ಈ ಕಾಳಿಚ್ಚೀರಾಮವಿಣ್ಣಗರಂಗೆ ಬಂದರು. ಈ ಆಳ್ವಾರರಿಗೆ ನಾಲ್ಕು ಜನ ಶಿಷ್ಯರಿದ್ದರು. ಅವರು ಈ ಆಳ್ವಾರರ ಬಿರುದುಗಳನ್ನು ಸದಾ ಘೋಷಿಸುತ್ತಿದ್ದರು, ಈ ಆಳ್ವಾರರಿಗೆ ಆಳಿನಾಡನ್, ಅರುಳ್‌ಮಾರಿ, ಅರಟ್ಟಮುಕ್ಕಿ, ಅಡಯಾರ್ ಶಿಯಮ್ ಮೊದಲಾದ ಆ ಬಿರುದಗಳನ್ನು ಘೋಷಿಸುತ್ತಿರುವಾಗ ತಿರುಜ್ಞಾನಸಂಬಂಧರ್ ಶಿಷ್ಯರು ಅವರನ್ನು ಅಡ್ಡಿಪಡಿಸಿದರು.

ನಂತರ ತಿರುಮಂಗೈ ಆಳ್ವಾರರು ತಿರುಜ್ಞಾನಸಂಬಂಧರ್ ಇವರಿಬ್ಬರೂ ಭೇಟಿಯಾದ ಸಂದರ್ಭದಲ್ಲಿ "ಈ ದಿವ್ಯದೇಶದ ಸ್ವಾಮಿಯನ್ನು ಅದ್ಭುತವಾದ ಹಾಡಿನಿಂದ ಸ್ತುತಿಸಬೇಕು" ಎಂದು ತಿರುಜ್ಞಾನ ಸಂಬಂಧರ್ ಹೇಳಿದಾಗ ಆಳ್ವಾರರು ತಮ್ಮದೇ ಆದ ಶೈಲಿಯಲ್ಲಿ ಚಿತ್ರ ಕವಿತ್ವದ ಮೂಲಕ ಈ ಸ್ವಾಮಿಯನ್ನು ಸ್ತುತಿಸಿದರು. ಇದನ್ನು ಕೇಳಿಸಿಕೊಂಡ ನಂತರ ತಿರುಜ್ಞಾನಸಂಬಂಧರ್ ನಿಮ್ಮ ಶಿಷ್ಯರು ನಿಮಗೆ ಬಿರುದುಗಳನ್ನು ಕೀರ್ತಿಸುವುದರಲ್ಲಿ ಬಹಳ ಉಚಿತವಾಗಿದೆ. ಆದ್ದರಿಂದ ಎಂದಾದರೂ, ಎಲ್ಲಾದರೂ ಈ ಬಿರುದುಗಳನ್ನು ಅವರು ಘೋಷಿಸಬಹುದು, ಎಂದು ಹೇಳುತ್ತಾ ತನ್ನ ಬಳಿ ಇರುವಂತಹಾ ಒಂದು ವೇಲ್ ಎಂಬ ಆಯುಧವನ್ನು ಬಹುಮಾನವಾಗಿ ನೀಡಿದರಂತೆ. ಐದನೆಯ ಸಿದ್ಧಾಂತಗಳಿಗೆ ಸಂಪ್ರದಾಯಗಳಿಗೆ ಕಲಹವು ಉಂಟಾದ ಸಂದರ್ಭದಲ್ಲಿ ಒಬ್ಬ ವೃದ್ಧೆಯು ಈ ತಾಡಾಳನ್ ಸ್ವಾಮಿಗೆ ಎಂತಹಾ ಕಷ್ಟ,ಭಂಗವೂ ಬರಬಾರದು ಎಂದು ಭಾವಿಸಿ ತನ್ನ ಮನೆಯಲ್ಲಿ ಇರುವಂತಹಾ ಒಂದು ಮಡಿಕೆಯಲ್ಲಿ ಸ್ವಾಮಿಯನ್ನು ಬಚ್ಚಿಟ್ಟು, ಕಾಪಾಡುತ್ತಾ ಬಂದಿದ್ದಾಳೆ. ತಿರುಮಂಗೈ ಆಳ್ವಾರರು ಈ ದಿವ್ಯ ದೇಶಗಳಿಗೆ ಬಂದ ಸಂದರ್ಭದಲ್ಲಿ ಆಕೆಯ ಕನಸಿನಲ್ಲಿ ಸ್ವಾಮಿಯು ಕಾಣಿಸಿ ಆಳ್ವಾರರಿಗೆ ಈ ಬಿಂಬವನ್ನು ನೀಡಬೇಕೆಂದು ಹೇಳಿದನಂತೆ. ನಂತರ ತಿರುಮಂಗೈ ಆಳ್ವಾರರು ಆ ವಿಗ್ರಹವನ್ನು ಇಲ್ಲಿ ಪ್ರತಿಷ್ಠಾಪನೆ ಮಾಡಿದ್ದಾರೆ. ಆದ್ದರಿಂದ ಈ ದಿವ್ಯ ದೇಶಕ್ಕೆ ಒಂದು ಒಳ್ಳೆಯ ವೈಭವವಿದೆ. ಯಾರಾದರೂ ಈ ದಿವ್ಯದೇಶದಲ್ಲಿ ಇರುವಂತಹಾ ಸ್ವಾಮಿಯನ್ನು ಸೇವಿಸುತ್ತಾರೋ ಅವರಿಗೆ ಸಕಲವಿಧವಾದಂತಹಾ ಶ್ರೇಯಸ್ಸು ದೊರೆಯುತ್ತದೆ.



### ಧ್ಯಾನಶ್ಲೋಕ

ತಾಡಾಳಾಲಯವಾಸಿನಃ ಬಲಿರಿಪೋಃ ಸೌಗಂಧ್ಯವತ್ಕುಂತಲಾ
ದೇವೀ ತತ್ರ ವಿಮಾನಮ್ ಇಷ್ಟಫಲದಂ ತತ್‌ಪುಷ್ಕಲಾವರ್ತಕಮ್।
ತೀರ್ಥಂ ಶಂಖಶರಃ ಪ್ರಸಿದ್ಧಯಶಸೇ ನಾಮ್ನಾ ಅಷ್ಟಕೋಣಾಯ ವೈ
ತಸ್ಮೈ ದುಷ್ಕರತಾಪಸಾಯ ವರದಃ ಪ್ರಾಚೀಮುಖೋ ಭಾಸತೇ ॥

ವೈಷ್ಣವ ಭಕ್ತಾಗ್ರೇಸರರಾದ ದ್ವಾದಶ ಆಳ್ವಾರರು ಪರವಶತೆಯಲ್ಲಿ ಮುಳುಗಿ ಹೋಗಿ, ತಮಿಳು ಭಾಷೆಯ ಭಕ್ತಿ ಸಾಹಿತ್ಯದಲ್ಲಿ ಶ್ರೀಮನ್ನಾರಾಯಣನನ್ನು ಹಲವಾರು ರೀತಿಯಲ್ಲಿ ಸ್ತುತಿಸಿ, ಹಾಡಿದ ಸಂಕೀರ್ತನೆಗಳನ್ನು 'ಪಾಶುರಗಳು' ಎಂದು ಕರೆಯುತ್ತಾರೆ. ಮಧುರ ಭಕ್ತಿ ಭರಿತವಾದ ಆಳ್ವಾರರ ಸಾಹಿತ್ಯವನ್ನು ತಮಿಳರು **'ದ್ರಾವಿಡ ವೇದ'** ಎಂದು ಕರೆಯುತ್ತಾರೆ. ಭೂಮಂಡಲದ ಮೇಲೆ ಇರುವ ಕೆಲವು ವೈಷ್ಣವ ಕ್ಷೇತ್ರಗಳನ್ನು ಆಳ್ವಾರರು ತಮ್ಮ ಪಾಶುರಗಳಲ್ಲಿ ಕೊಂಡಾಡಿದ್ದಾರೆ.

ಇವರು ಸ್ತುತಿಸಿದ ಪಾಶುರಗಳು ಪ್ರಪಂಚದಲ್ಲೇ ಪ್ರಸಿದ್ಧಿಯಾಗಿವೆ. ಕ್ಷೇತ್ರ (ದಿವ್ಯದೇಶ), ತೀರ್ಥ (ಪುಷ್ಕರಿಣಿ) ವಿಮಾನ (ಗರ್ಭಗುಡಿಯ ಮೇಲಿನ ಗೋಪುರ) ಮೂಲಮೂರ್ತಿ (ಪ್ರಧಾನವಾದ ವಿಗ್ರಹ) ಮತ್ತು ಉತ್ಸವಮೂರ್ತಿಗಳ ವಿಶೇಷತೆಯನ್ನು ಪಾಶುರಗಳಲ್ಲಿ ಕೊಂಡಾಡಿದ್ದಾರೆ. ಇಂತಹ ಆಲಯಗಳಿಗೆ ಆಳ್ವಾರರು ತಮ್ಮ ಮಂಗಳಾಶಾಸನಗಳನ್ನು ರಚಿಸಿದ್ದಾರೆ.

ಆಳ್ವಾರರು ಮೂಲಕ ಕೀರ್ತಿಸಲ್ಪಟ್ಟ ದಿವ್ಯದೇಶಗಳು ಪ್ರತ್ಯೇಕವಾದ ವಿಶೇಷತೆಯನ್ನು ಹೊಂದಿವೆ. ಇವುಗಳೆಲ್ಲವೂ ಪೂರ್ವಾಭಿಮುಖವಾಗಿ 79 ದೇವಾಲಯಗಳು,19 ಆಲಯಗಳು ಪಶ್ಚಿಮಾಭಿಮುಖವಾಗಿ ಇದ್ದು, ದಕ್ಷಿಣಾಭಿಮುಖವಾಗಿ 7 ಆಲಯಗಳು, ಉತ್ತರಾಭಿಮುಖವಾಗಿ 3 ಆಲಯಗಳು ಇವೆ. 12 ಆಳ್ವಾರರು ದಿವ್ಯ ದೇಶದಲ್ಲಿ ಮೂಲ ವಿಗ್ರಹವನ್ನು ತಮ್ಮ ಪಾಶುರಗಳಿಂದ ಮೆಚ್ಚಿಸಿ, ನಿರಂತರವಾಗಿ ಶ್ರೀಮನ್ನಾರಾಯಣನನ್ನು ಸ್ಮರಿಸುತ್ತಾ ಮೋಕ್ಷವನ್ನು ಪಡೆದು, ಕೊನೆಗೆ ಶ್ರೀಹರಿಯ ಸ್ಥಾನವಾದ ತಿರುಪರಮಪದವನ್ನು ಸೇರಿದರು. ಆಳ್ವಾರರು ಕೀರ್ತಿಸಿದ ವೈಷ್ಣವ ಕ್ಷೇತ್ರಗಳನ್ನು ದಿವ್ಯದೇಶಗಳು ಎಂದು ಕರೆಯುತ್ತಾರೆ. ಇವನ್ನು ದಿವ್ಯ ತಿರುಪತಿಗಳೆಂದೂ ಕರೆಯುತ್ತಾರೆ.



# ಜನವರಿ 2026
## ತಿಂಗಳ
# ರಾಶಿ ಫಲಗಳು



ಶ್ರೀಮಾತಾ ಅನುಗ್ರಹ



### ಮೇಷ

ಹೊಸ ವರ್ಷದ ಆರಂಭ ಹೊಸ ವಸ್ತ್ರಾಭರಣಗಳನ್ನು ಕೊಳ್ಳುವಿರಿ. ಅಂದುಕೊಂಡದ್ದಕ್ಕಿಂತ ಹೆಚ್ಚಾಗಿ ಪಡೆಯುವಿರಿ. ಆರೋಗ್ಯದಲ್ಲಿ ಸುಧಾರಣೆ, ಸರ್ಕಾರದ ಕೃಪೆಗೆ ಪಾತ್ರರಾಗುವಿರಿ. ಮನೆಯಲ್ಲಿ ಶುಭಕಾರ್ಯಗಳು ನೆರವೇರುವುದು. ಸಹೋದರರನಿಂದ ಸಹಾಯ. ವಿದ್ಯಾಭ್ಯಾಸದಲ್ಲಿ ಅಭ್ಯುದಯ ಉಂಟಾಗುವುದು. ನಿಮ್ಮ ತಂದೆಗೆ ಅನುಕೂಲವಾಗುವುದು.



### ವೃಷಭ

ಮಕ್ಕಳಿಂದ ಸಂತೋಷ ಉಂಟಾಗುತ್ತದೆ. ಶತ್ರುಗಳು ಸೋಲುವರು. ಸಾಮಾಜಿಕವಾಗಿ ಆರ್ಥಿಕವಾಗಿ ಅಭಿವೃದ್ಧಿ ಉಂಟಾಗುತ್ತದೆ. ಪ್ರಯಾಣದಿಂದ ಪ್ರಯೋಜನವಿದೆ. ತೀರ್ಥಯಾತ್ರೆಗೆ ಹೋಗುವಿರಿ. ಹಿರಿಯರಿಂದ ಧನಾಗಮನವಾಗುವುದು. ವಿದ್ಯಾಭ್ಯಾಸದಲ್ಲಿ ಹೊಸತನ್ನು ಸಾಧಿಸುವಿರಿ. ಕುಟುಂಬದಲ್ಲಿ ಸೌಖ್ಯವಿರುವುದು.



### ಮಿಥುನ

ಸಂಗಾತಿಗೆ ಆರೋಗ್ಯದಲ್ಲಿ ಸಮಸ್ಯೆ ಉಂಟಾಗುತ್ತದೆ. ಕೆಲಸ ಕಾರ್ಯಗಳಲ್ಲಿ ಹಿನ್ನಡೆಯಾಗುವ ಸಂಭವ ಉಂಟು. ಉಳಿತಾಯದ ಕಡೆ ಗಮನ ಕೊಡಿ. ನೀವು ನಿರೀಕ್ಷಿಸಿದ ಮಟ್ಟದಲ್ಲಿ ಆದಾಯವಿರವುದಿಲ್ಲ. ವಿದ್ಯಾರ್ಥಿಗಳು ಹೆಚ್ಚಿನ ಪರಿಶ್ರಮ ಪಡಬೇಕಾಗುತ್ತದೆ. ನವಗ್ರಹ ಶಾಂತಿ ಮಾಡಿಕೊಳ್ಳುವುದು ಒಳ್ಳೆಯದು.



### ಕರ್ಕಾಟಕ

ಶತ್ರುಗಳ ಮೇಲೆ ಜಯಸಾಧಿಸುವಿರಿ. ಕೈಗೊಂಡ ಕೆಲಸ ಕಾರ್ಯಗಳು ನೆರವೇರುತ್ತದೆ. ಮನೆಗೆ ಹೊಸ ವಸ್ತುಗಳನ್ನು ಕೊಂಡು ತರುವಿರಿ. ಆರೋಗ್ಯದಲ್ಲಿ ಸುಧಾರಣೆ ಕಂಡು ಬರುವುದು. ಮೇಲಧಿಕಾರಿಗಳಿಂದ ಅನುಕೂಲವಾಗುವುದು. ದೂರ ಪ್ರಯಾಣದಿಂದ ಲಾಭವಿರುವುದು. ವ್ಯಾಪಾರದಲ್ಲಿ ಅಭಿವೃದ್ಧಿ. ನ್ಯಾಯಾಲಯದಲ್ಲಿ ಗೆಲ್ಲುವಿರಿ.



### ಸಿಂಹ

ಮಕ್ಕಳ ಜೊತೆ ತುಂಬಾ ಪ್ರೀತಿಯ ವಾತಾವರಣ ಇರುವುದು. ಹೆಂಡತಿಯಿಂದ ಸುಖ. ವಿಭಾಗೀಯ ಪರೀಕ್ಷೆಗಳನ್ನು ಸಮರ್ಪಕವಾಗಿ ಪೂರೈಸುವಿರಿ. ಸಮಾಜದ ಉನ್ನತ ವರ್ಗದವರೊಂದಿಗೆ ಸ್ನೇಹವಾಗುವುದು. ಛಾಯಾ ಚಿತ್ರಗ್ರಾಹಕರಿಗೆ ಲಾಭದಾಯಕ. ಅಬಕಾರಿ ಇಲಾಖೆಯವರಿಗೆ ಒಳ್ಳೆಯ ಆದಾಯ ಕಂಡು ಬರುವುದು.



### ಕನ್ಯೆ

ನಿಮ್ಮ ಆಸೆ ಆಕಾಂಕ್ಷೆಗಳು ಈಡೇರುತ್ತವೆ. ಅನೇಕ ಮೂಲಗಳಿಂದ ಧನ ಲಾಭವಾಗುತ್ತದೆ. ಭೋಗ ಜೀವನವನ್ನು ನಡೆಸುವಿರಿ. ವಾಹನದಿಂದ ಲಾಭ, ಬಂಧು ಬಾಂಧವರಿಂದ ಸಹಾಯ ಸಿಗುವುದು. ಆಸ್ತಿ ಮಾಡುವಿರಿ. ಕೌಟುಂಬಿಕ ಜೀವನ ಚೆನ್ನಾಗಿರುವುದು. ವಿದ್ಯಾರ್ಥಿಗಳಿಗೆ ಉತ್ತಮ ಫಲ.



### ತುಲಾ

ಆರೋಗ್ಯವಂತರಾಗಿರುವಿರಿ. ಸಾಲದಿಂದ ಮುಕ್ತರಾಗುವಿರಿ. ಹೋರಾಟದಲ್ಲಿ ಜಯ ಕಾಣುವಿರಿ. ಸರ್ಕಾರದಿಂದ ಗೌರವ ದೊರೆಯುವುದು. ಆಕಸ್ಮಿಕ ಧನಲಾಭವಾಗುವುದು. ವಾದ ವಿವಾದಗಳಲ್ಲಿ ಗೆಲ್ಲುವಿರಿ. ಜಾಹೀರಾತು ಕ್ಷೇತ್ರದಲ್ಲಿ ಲಾಭದಾಯಕ.



### ವೃಶ್ಚಿಕ

ಭೋಗ ವಸ್ತುಗಳನ್ನು ಕೊಂಡುಕೊಳ್ಳುವಿರಿ. ಧನ ಲಾಭವಾಗುವುದು ವ್ಯಾಪಾರ ವ್ಯವಹಾರಗಳಲ್ಲಿ ಅಭಿವೃದ್ಧಿ ಉಂಟಾಗುವುದು. ಶ್ರೀಮಂತರೊಡನೆ ವ್ಯವಹಾರ ಮಾಡುವಿರಿ. ವೈಭೋಗದ ಜೀವನ ನಡೆಸುವಿರಿ. ಆದರೆ ಅಪವ್ಯಯ ಬೇಡ. ವಿದ್ಯಾರ್ಥಿಗಳು ಶ್ರಮ ವಹಿಸಿ ಓದಬೇಕಾಗುವುದು.



### ಧನಸ್ಸು

ಪ್ರಣಯ ಪ್ರಸಂಗಗಳು ಬೆಳಕಿಗೆ ಬರುತ್ತವೆ. ಅಲಂಕಾರಿಕ ವಸ್ತುಗಳನ್ನು ಕೊಳ್ಳುವಿರಿ. ಮನೆಯಲ್ಲಿ ಶುಭಕಾರ್ಯಗಳು ಉಂಟಾಗುವುವು. ಅವಿವಾಹಿತರಿಗೆ ವಿವಾಹ ಯೋಗವುಂಟಾಗುವುದು. ಸಂತಾನಾಪೇಕ್ಷಿಗಳಿಗೆ ಮಕ್ಕಳಾಗುವರು. ವಿದ್ಯೆಯಲ್ಲಿ ಪ್ರಗತಿ. ಕೈಗೊಂಡ ಕಾರ್ಯಗಳು ಫಲಿಸುತ್ತವೆ. ಉದ್ಯೋಗದಲ್ಲಿ ಸ್ಥಾನಮಾನ ಲಭಿಸುತ್ತದೆ.



### ಮಕರ

ಒಳ್ಳೆಯ ಆದಾಯ ಸ್ನೇಹಿತರಿಂದ ಸಹಕಾರ. ವಸ್ತ್ರಾಭರಣಗಳನ್ನು ಖರೀದಿಸುವಿರಿ. ಕುಟುಂಬದಲ್ಲಿ ಸೌಖ್ಯ. ಭೋಗ ವಸ್ತುಗಳ ಖರೀದಿ. ಕಲಾವಿದರುಗಳಿಗೆ ಶುಭದಾಯಕ. ಮಿತ್ರರಿಂದಲೂ ಸಹಾಯ ಸಿಗುವುದು. ನೀವು ಧೈರ್ಯದಿಂದ ಚಾಲಕತನದಿಂದ ಬೆಳೆಬಾಳುವ ವಸ್ತುಗಳನ್ನು ಕೂಡಿಟ್ಟುಕೊಳ್ಳುತ್ತೀರಿ. ಛಾಯಾ ಗ್ರಾಹಕರಿಗೆ, ಅಬಕಾರಿ ಇಲಾಖೆಯವರಿಗೆ ಲಾಭದಾಯಕ.



### ಕುಂಭ

ಆದಾಯಕ್ಕೆ ಅನೇಕ ದಾರಿಗಳಿರುವ ಕಾರಣ ದಾನ ಮಾಡುವ ಮನೋಭಾವವನ್ನು ಹೊಂದುವಿರಿ. ನಿಮ್ಮ ಚಿಂತೆ ದೂರವಾಗುತ್ತದೆ. ಶುತ್ರುಗಳ ಮೇಲೆ ಜಯಸಾಧಿಸುವಿರಿ. ಸ್ನೇಹಿತರು ನಿಮಗೆ ಸಹಾಯವನ್ನು ಮಾಡುತ್ತಾರೆ. ಒಳ್ಳೆಯ ವಾಹನ ಸೌಕರ್ಯವಿರುತ್ತದೆ. ಆರೋಗ್ಯದಲ್ಲೂ ಚೇತರಿಕೆ ಕಂಡು ಬರುತ್ತದೆ. ಕೈ ಹಾಕಿದ ಕೆಲಸ ಕಾರ್ಯಗಳೆಲ್ಲವೂ ನೆರವೇರುತ್ತದೆ.



### ಮೀನ

ಉದ್ಯೋಗದಲ್ಲಿ ಬಡ್ತಿ ದೊರೆಯುತ್ತದೆ. ಉನ್ನತ ಅಧಿಕಾರ ಪ್ರಾಪ್ತವಾಗುತ್ತದೆ. ವಿರೋಧಿಗಳು ದೂರ ಸರಿಯುವರು. ವೃತ್ತಿ ಜೀವನ ತೃಪ್ತಿಕರವಾಗಿರುತ್ತದೆ. ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗ ವಹಿಸುವಿರಿ. ನೀವೇನು ಅಂದುಕೊಂಡಿರುವರೋ ಅದನ್ನು ಸಾಧಿಸುವಿರಿ. ಆರೋಗ್ಯ ಸುಧಾರಿಸುವುದು. ಸರ್ಕಾರದಿಂದ ಸಹಾಯ ಸಿಗುವುದು.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ॥ ಅನಸೂಯ ಎಸ್. ರಾಜೀವ್

## 1. ಭೀಮ ಬಲ ಎಂದರೇನು?

**ಉತ್ತರ :** ಬಕಾಸುರ ಜರಾಸಂಧ ಕೀಚಕ ದುರ್ಯೋಧನ ಹಾಗೂ ಭೀಮಸೇನ ಈ ಐವರು ಸಮವಯಸ್ಕರು. ಇವರಲ್ಲಿ ಭೀಮನು ಹಿರಿಯವನು. ಇವರಲ್ಲಿ ಮೊದಲು ಯಾರು ಯಾರನ್ನು ಕೊಲ್ಲುವರೋ ಅವರಿಂದ ಉಳಿದ ಮೂವರು ಹತರಾಗುವರು ಎಂದು ಮಹಾಭಾರತದಲ್ಲಿ ತಿಳಿಸಿದ್ದಾರೆ. ಈ ರಹಸ್ಯ ಶ್ರೀ ಕೃಷ್ಣನಿಗೆ ಮಾತ್ರ ಗೊತ್ತಿತ್ತು. ಯಾರಿಗೂ ಗೊತ್ತಿರಲಿಲ್ಲ. ತನ್ನ ಶಕ್ತಿಯನ್ನು ಭೀಮನಿಗೆ ಧಾರೆ ಎರೆದನು. ಈ ಶಕ್ತಿಯಿಂದ ಭೀಮನು ಉಳಿದುಕೊಂಡನು. ಪ್ರತಿ ಹಂತದಲ್ಲಿಯೂ ಶ್ರೀಕೃಷ್ಣನು ಭೀಮನನ್ನು ಕಾಪಾಡಿ ಜೋಪಾನ ಮಾಡುತ್ತಿದ್ದನು. ಭೀಮ ಬಕಾಸುರ ಯುದ್ಧದಿಂದ ಹಿಡಿದು ಭೀಮ ದುರ್ಯೋಧನರ ಯುದ್ಧದವರೆಗೂ ಕೃಷ್ಣನು ಕಾಪಾಡಿಕೊಂಡು ಬಂದನು. ಭೀಮನು 10,000 ಆನೆಗಳ ತೋಳ್ಬಲ ಉಳ್ಳವನು ಎಂದು ಮಹಾಭಾರತದಲ್ಲಿ ತಿಳಿಸಿದ್ದಾರೆ.

ಭೀಮನ ಬಲದ ಬಗ್ಗೆ ಮಹಾಭಾರತದಲ್ಲಿ ಸಾಕಷ್ಟು ಪ್ರಸಂಗಗಳು ಕಂಡು ಬರುತ್ತವೆ. ಉದಾಹರಣೆಗೆ ಒಂದು ದಿನ ಆಶ್ರಮದಲ್ಲಿ ಕುಂತಿಯು ಕೆಲಸ ಮಾಡುತ್ತಿದ್ದಳು ಭೀಮನು ಒಂದು ಬಂಡೆಯ ಮೇಲೆ ಕುಳಿತಿದ್ದನು. ಪಾಂಡುರಾಜನು ಹುಲಿ ಬೇಟೆಯಾಡುತ್ತಿದ್ದಾಗ ಒಂದು ಹುಲಿಯು ಅಲ್ಲಿಗೆ ಬಂದು ಘರ್ಜಿಸಿತು. ಕುಂತಿ ಹೆದರಿ ಹೊರಗೆ ಬಂದು ಮಗುವಿಗೆ ಏನಾಯಿತು ಎಂದು ಗಾಬರಿಗೊಂಡಳು. ಆ ಬಂಡೆಯೂ ಎರಡೂ ಹೋಳಾಗಿತ್ತು, ಮಗು ಆಟವಾಡಿಕೊಂಡಿತ್ತು. ಇದು ಮಗು ಭೀಮನ ಕಥೆಯಾದರೆ ಮಹಾಭಾರತದ ಉದ್ದಕ್ಕೂ ಭೀಮನ ಬಲ ಪರಾಕ್ರಮಗಳು ಸಾಕಷ್ಟು ಕಂಡು ಬರುತ್ತದೆ. ಹಾಗಾಗಿ ಭೀಮಬಲ ಎನ್ನುವುದು ರೂಢಿಯಲ್ಲಿದೆ.

## 2. ಭಸ್ಮ ಧರಿಸುವುದರ ವಿಶಿಷ್ಟತೆ ಏನು?

**ಉತ್ತರ :** ಭಸ್ಮವನ್ನು ಸಾಮಾನ್ಯವಾಗಿ ಹಸುವಿನ ಸಗಣಿ ಕಟ್ಟಿಗೆ ಅಥವಾ ಯಜ್ಞದ ಅಗ್ನಿಯಲ್ಲಿ ಸುಟ್ಟ ಪವಿತ್ರ ವಸ್ತುಗಳಿಂದ ತಯಾರಾಗಿಸಲಾಗುತ್ತದೆ. ಇದನ್ನು ಅಗ್ನಿಯಲ್ಲಿ ಸುಡುವುದರಿಂದ ಅದು ಸಂಪೂರ್ಣವಾಗಿ ಶುದ್ಧವಾಗುತ್ತದೆ ಮತ್ತು ಎಲ್ಲಾ ಕಲ್ಮಶಗಳಿಂದ ಮುಕ್ತವಾಗುತ್ತದೆ ಎಂದು ನಂಬಲಾಗಿದೆ. ಅಗ್ನಿಯು ಪಾಪಗಳನ್ನು ಮತ್ತು ಅಶುದ್ಧತೆಯನ್ನು ಸುಡುತ್ತದೆ. ಆದ್ದರಿಂದ ಭಸ್ಮವು ಶುದ್ಧತೆಯ ಸಂಕೇತವಾಗಿದೆ. ಭಸ್ಮವು ಎಲ್ಲವೂ ಕೊನೆಗೆ ಬೂದಿಯಾಗಿ ಮಾರ್ಪಡುತ್ತದೆ ಎಂಬ ಸತ್ಯವನ್ನು ನೆನಪಿಸುತ್ತದೆ.

ಇದು ಜೀವನದ ನಶ್ವರತೆಯನ್ನು ಹಾಗೂ ದೇಹವು ಆಶಾಶ್ವತವಾದದ್ದು ಎಂಬುದನ್ನು ತಿಳಿಸುತ್ತದೆ. ಭಸ್ಮವನ್ನು ಧರಿಸುವುದರಿಂದ ನಾವು ಅಹಂಕಾರ ಲೌಕಿಕ ಆಸೆಗಳು ಹಾಗೂ ಭೌತಿಕ ಬಂಧಗಳಿಂದ ಮುಕ್ತರಾಗಲು ಪ್ರೇರೇಪಿಸುತ್ತದೆ. ಭಸ್ಮವನ್ನು ಧರಿಸುವುದರಿಂದ ಆಧ್ಯಾತ್ಮಿಕ ಶಕ್ತಿ ಹೆಚ್ಚುತ್ತದೆ ಮತ್ತು ನಕಾರಾತ್ಮಕ ಶಕ್ತಿಗಳಿಂದ ರಕ್ಷಣೆ ಸಿಗುತ್ತದೆ ಎಂದು ಹೇಳಬಹುದು.

ಇದನ್ನು ಹಣೆಯ ಮೇಲೆ ತ್ರಿಪುಂಡ್ರಾ ಹಾಗೂ ದೇಹದ ಇತರ ಭಾಗಗಳಿಗೆ ಹಚ್ಚಿಕೊಳ್ಳುವುದು ಸಾಮಾನ್ಯ. ಇದು ಧರಿಸುವವರ ಮನಸ್ಸು ಮತ್ತು ದೇಹವನ್ನು ಶುದ್ಧೀಕರಿಸುತ್ತದೆ.

ಅಜ್ಞಾಚಕ್ರ ಹಾಗೂ ಅನಾಹತ ಚಕ್ರಕ್ಕೆ ಅಂದರೆ ಹಣೆಯ ಮಧ್ಯಭಾಗ ಹಾಗೂ ಎದೆಯ ಭಾಗದಲ್ಲಿ ಹಚ್ಚುವುದರಿಂದ ಗ್ರಹಣ ಶಕ್ತಿ ಹೆಚ್ಚುತ್ತದೆ ಮತ್ತು ಮನಸ್ಸನ್ನು ಏಕಾಗ್ರಗೊಳಿಸಲು ಸಹಾಯ ಮಾಡುತ್ತದೆ. ಸ್ಕಾಂದ ಪುರಾಣದಲ್ಲಿ ಭಸ್ಮದ ಮಹತ್ವವನ್ನು ತಿಳಿಸಿರುವಂತೆ ಬ್ರಹ್ಮಕುಂಡದಿಂದ ಉತ್ಪತ್ತಿಯಾಗುವ ಭಸ್ಮವನ್ನು ಧರಿಸುವುದರಿಂದ ಪಾಪಗಳು ನಿವಾರಣೆಯಾಗಿ ಶಿವನ ಸಾನ್ನಿಧ್ಯವನ್ನು ಪಡೆಯುತ್ತೇವೆ ಎಂಬುದು ಸತ್ಯ. ಭಸ್ಮವು ಕೇವಲ ಬೂದಿಯಲ್ಲ ಇದು ಪವಿತ್ರವಾದ ಆಧ್ಯಾತ್ಮಿಕ ಮಹತ್ವವುಳ್ಳ ವಸ್ತುವಾಗಿದ್ದು ಶುದ್ಧತೆ ನಶ್ವರತೆ ಆಧ್ಯಾತ್ಮಿಕ ಶಕ್ತಿ ಮತ್ತು ಶಿವನೊಂದಿಗಿನ ಅನ್ಯೋನ್ಯತೆಯ ಸಂಕೇತವಾಗಿದೆ.

# ಗುರುವಿನ ಸೂಚನೆಗಳಿಗೆ ಬದ್ಧನಾದವನೇ ನಿಜವಾದ ಶಿಷ್ಯ

– ಎ, ಆರ್. ರಘುರಾಮ
99161 38436

ಋಷ್ಯಶೃಂಗ ಋಷಿಗಳ ಆಶ್ರಮದಲ್ಲಿ ನೂರಾರು ವಿದ್ಯಾರ್ಥಿಗಳು ವೇದಾಧ್ಯಯನ ಮಾಡುತ್ತಿದ್ದರು. ಅದು ನಿಸರ್ಗ ನಿರ್ಮಿತ ಪರಿಸರ. ನಿತ್ಯವೂ ಗುರುಮನೆ ಕೆಲಸ, ನಂತರ ಪಾಠ - ಪ್ರವಚನ. ಅಲ್ಲಿ ಬಹಳಷ್ಟು ಮಕ್ಕಳು ಹಲವು ವಿದ್ಯೆಗಳಲ್ಲಿ ಪ್ರಾವೀಣ್ಯತೆ ಗಳಿಸಿದ್ದರು. ಅಲ್ಲಿ ಮಹಿಪಾಲ ಎಂಬ ವಿದ್ಯಾರ್ಥಿ ಇದ್ದ.ಇತರ ಮಕ್ಕಳಿಗೆ ಹೋಲಿಸಿದರೆ ಹಲವು ವಿಚಾರಗಳಲ್ಲಿ ಆತ 'ದಡ್ಡ' ಎನಿಸಿ ಕೊಳ್ಳುತ್ತಿದ್ದ.

ಎಲ್ಲರೂ ಪಾಠ-ಆಟಗಳಲ್ಲಿ ಇವನಿಗಿಂತಾ ಮುಂದುವರಿದಿದ್ದರು. ಹಲವು ಬಾರಿ ಈತನಿಗೆ ವೇದ-ಶಾಸ್ತ್ರ ಪಾಠದ ಕೆಲವು ಭಾಗಗಳು ಅರ್ಥವೇ ಆಗದ ಕಾರಣ ಮೌನವಾಗಿಯೇ ಇರುತ್ತಿದ್ದ. ಆದರೂ ಗುರುಗಳು, ಗುರುಪತ್ನಿ ಹೇಳಿದ ಯಾವುದೇ ಕೆಲಸವನ್ನೂ ಶ್ರದ್ಧೆಯಿಂದಲೇ ಮಾಡುತ್ತಿದ್ದ. ಅದೇಕೋ ಗುರುಗಳಿಗೆ ಇವನನ್ನು ಕಂಡರೆ ಮಮಕಾರ ಹೆಚ್ಚು. ಇದು ಉಳಿದ ಮಕ್ಕಳಿಗೆ ಆಗಾಗ್ಗೆ ಕೊಂಚ ಮಾತ್ಸರ್ಯ ತರಿಸುತ್ತಿತ್ತು. ಮಕ್ಕಳಾದ ಕಾರಣಕ್ಕೆ ಆಗಾಗ್ಗೆ ಗೇಲಿ, ಕೊಂಕು ಮಾತು, ಆಡಿಕೊಳ್ಳುವಿಕೆ ಇದ್ದರೂ ಮರು ದಿನಕ್ಕೆ ಮತ್ತೆ ಒಂದಾಗಿ ಬಿಡುತ್ತಿದ್ದರು.

ಕಾಡಿನಲ್ಲಿ ಬಿಲ್ವಿದ್ಯೆ ಹೇಳಿಕೊಡುವಾಗ ಗುರುಗಳ ಕಾಲಿಗೆ ಒಂದು ಮುಳ್ಳು ತಾಗಿದು. ಅದು ಕೆಲ ದಿನದಲ್ಲೇ ಗಾಯವಾಯಿತು. ಕೀವು ತುಂಬಿಕೊಂಡಿತು. ದಿನದಿಂದ ದಿನಕ್ಕೆ ನೋವು ಹೆಚ್ಚಾಯಿತು ಸರಿ. ವಿದ್ಯಾರ್ಥಿಗಳು ವೈದ್ಯರನ್ನು ಕರೆತಂದರು. ಇದು ಬಹಳ ದೊಡ್ಡ ಗಾಯವಾಗುತ್ತ ಇದೆ.

ಯಾರಾದರೂ ಬಾಯಿ ಹಚ್ಚಿ ಕೀವು ಹೀರಿ ತೆಗೆದರೆ ಮಾತ್ರ ಗುರುಗಳ ನೋವು ಕಡಿಮೆ ಆಗಬಲ್ಲದು. ಆ ನಂತರ ನಾನು ಔಷಧ ಹಾಕುವೆ ಎಂದರು. ಶಿಷ್ಯರು ಅವಾಕ್ಕಾದರು. ಒಬ್ಬರಿಗಿಂತ ಒಬ್ಬರು ಹಿಂದೆ ಹಿಂದೆ ಸರಿದರು. ಛೇ, ಯಾವ ಕೆಲಸವಾದರೂ ಮಾಡಬಹುದು. ಕೀವು ತೆಗೆಯಲು ಬಾಯಿ ಹಚ್ಚುವುದೇ? ಇದು ಅತ್ಯಂತ ಅಸಹ್ಯಕರ ಕೆಲಸ ಎಂಬ ಭಾವ ಅವರಲ್ಲಿ ಮೂಡಿದ್ದು ಗುರುಗಳಿಗೆ ಕಂಡಿತು. ಎಲ್ಲರನ್ನೂ ಗುರುಗಳು ಮತ್ತು ವೈದ್ಯರು ನೋಡಿದರು.

5 ನಿಮಿಷ ನೀರವ ಮೌನ. ಹಿಂದಿನ ಸಾಲಿನಲ್ಲಿ ನಿಂತಿದ್ದ ಮಹಿಪಾಲ ಮುಂದಕ್ಕೆ ಹೆಜ್ಜೆ ಹಾಕಿದ. ಗುರುಗಳು ಮುಗುಳು ನಕ್ಕರು. ಆತ ಸೀದಾ ಗಾಯಕ್ಕೆ ಬಾಯಿ ಹಚ್ಚಿದ. ಎರಡೇ ನಿಮಿಷದಲ್ಲಿ ಎಲ್ಲ ಕೀವನ್ನೂ ಹೀರಿ ಬಿಟ್ಟ. ಒಂದಿನಿತೂ ಉಗಿಯಲಿಲ್ಲ. ಎಲ್ಲವನ್ನೂ ಕುಡಿದೇ ಬಿಟ್ಟಿದ್ದ!ಎಲ್ಲ ವಿದ್ಯಾರ್ಥಿಗಳೂ ಮನದಲ್ಲೇ ಅಂದು ಕೊಂಡರು.

ಇವನು ಇಂದು ಸಂಪೂರ್ಣ ಪೆದ್ದ ಎಂಬ ಕೀರ್ತಿಗಳಿಸಿದ ಎಂದು. ಮಹಿಪಾಲ ಆನಂದದಿಂದಲೇ ಮೇಲೆ ಎದ್ದರು. ಗುರುಗಳೂ ಎದ್ದರು ಈತನ ಮೇಲೆ ಯಾಕೆ ನನಗೆ ಕಾರುಣ್ಯ ಹೆಚ್ಚು ಎಂದು ನೀವೆಲ್ಲಾ ಆಗಾಗ್ಗೆ ಕೇಳುತ್ತ ಇದ್ದೀರಿ. ಇಂದು ಉತ್ತರ ನಿಮಗೇ ಈ ಪ್ರಸಂಗದಿಂದ ಕಂಡಿತಲ್ಲವೇ ಎಂದರು. ಯಾರೂ ಮಾತನಾಡಲಿಲ್ಲ.

ಮಕ್ಕಳೇ ನನಗೆ ನಿಮ್ಮನ್ನು ಪರೀಕ್ಷೆ ಮಾಡಬೇಕು ಎನಿಸಿತು. ಹಾಗಾಗಿ ಒಂದು ರಸಭರಿತ ಮಾವಿನ ಹಣ್ಣನ್ನು ಕಟ್ಟಿಕೊಂಡಿದ್ದೆ. ಕೀವು ಎಂದು ಹೇಳಿದಾಗಲೂ ಅಸಹ್ಯ ಮಾಡದೇ ಮಹಿಪಾಲನು ಹೀರಲು ಮುಂದಾದ. ಅವನಿಗೆ ಅಂತರಂಗದಲ್ಲಿ ಇರುವ ಗುರುಭಕ್ತಿ ಫಲವಾಗಿ ಹಣ್ಣಿನ ರಸವನ್ನೇ ಕುಡಿದಿದ್ದಾನೆ. ಪಾಠ, ಪ್ರವಚನ ಕೇಳಿ ಗಳಿಸಿದ ಪಾಂಡಿತ್ಯಕ್ಕೆ ಎಲ್ಲೆಡೆ ಮನ್ನಣೆ, ಗೌರವ ಇದೆ. ಆದರೆ ಮಾನವೀಯತೆ, ಗುರುಭಕ್ತಿ , ಗುಣ ಮತ್ತು ಹಿರಿಯರ ಹಿತ ಬಯಸುವ ಗುಣಕ್ಕೆ ಬೆಲೆ ಕಟ್ಟಲಾಗದು ಎಂದರು.

ಪೆದ್ದ ಎನಿಸಿಕೊಂಡಿದ್ದ ಮಹಿಪಾಲ ಅಂದು ಮಾನವೀಯ ಮೂರ್ತಿಯಾಗಿದ್ದ. ಪರೀಕ್ಷೆಯಲ್ಲಿ ಗೆದ್ದ ಶಿಷ್ಯನನ್ನು ಗುರುಗಳು ತಬ್ಬಿಕೊಂಡರು. ಆತನಿಗೆ ಧಾರಾಕಾರ ಕಣ್ಣೀರು. ಗುರುಗಳಿಗೆ ಆನಂದಬಾಷ್ಪ. ವರ್ಷ ಕಳೆದಂತೆ ಆತನೂ ಪಂಡಿತನಾಗಿ ಹೊರಬಂದ. ರಾಜನ ಆಸ್ಥಾನದಲ್ಲಿ ಮನ್ನಣೆ ಪಡೆದ. ಜ್ಞಾನದೊಂದಿಗೆ ಮಾನವೀಯ ಗುಣವೂ ಇದ್ದ ಕಾರಣ ಆತನ ಕೀರ್ತಿ ದೇಶದೆಲ್ಲೆಡೆ ಹಬ್ಬಿತು.

**ನೀತಿ :** ಗುರುವಿನ ಸೂಚನೆ ಅನುಸರಿಸಿದವನೇ ನಿಜವಾದ ಶಿಷ್ಯನಾಗುತ್ತಾನೆ.



# ಪುಟಾಣಿ ಮಕ್ಕಳಿಗಾಗಿ

ಈ ಗೊಂಬೆಗೆ
ಚುಕ್ಕಿಯನ್ನು ಸೇರಿಸಿ
ಹಾಗೂ ಬಣ್ಣವನ್ನು
ತುಂಬಿರಿ.






ಬಣ್ಣವನ್ನು ತುಂಬಿರಿ.


## ಮಾರ್ಗ ಅನ್ವೇಷಣೆ

ಮಕ್ಕಳೇ, ಇಲ್ಲಿರುವ ಹುಡುಗ ಯಾವ ಹಾದಿಯಲ್ಲಿ ಹೋಗಿ ಗಾಳಿಪಟವನ್ನು ಸೇರುತ್ತಾನೆ ಎಂದು ಕಂಡು ಹಿಡಿಯಿರಿ ನೋಡೋಣ !



## ಈ ಕಬ್ಬನ್ನು ಗಮನಿಸಿ

ಈ ಕಬ್ಬಿನಲ್ಲಿ ಯಾವುದು ವಿಭಿನ್ನವಾಗಿವೆ ಎಂದು ಕಂಡು ಹಿಡಿಯಿರಿ ಮಕ್ಕಳೆ ನೋಡೋಣ



ಉತ್ತರಗಳು: ಮೊದಲನೆ ಸಾಲಿನಲ್ಲಿ ಮೂರನೆಯದು ಹಾಗೂ ಐದನೆಯದು, ಎರಡನೆಯ ಸಾಲಿನಲ್ಲಿ ನಾಲ್ಕನೆಯದು, ಮೂರನೆಯ ಸಾಲಿನಲ್ಲಿ ಮೊದಲನೆಯದು ಹಾಗೂ ಎರಡನೆಯದು.

ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ

## ರಸ ಪ್ರಶ್ನೆಗಳು

01. ಶೀರೂರು ಮಠವು ಯಾವುದಕ್ಕೆ ಸಂಕೇತವಾಗಿದೆ?..............................................................................
02. ಸಂಕ್ರಾಂತಿ ಹಬ್ಬವನ್ನು ತಮಿಳುನಾಡಿನಲ್ಲಿ ಏನೆಂದು ಕರೆಯುತ್ತಾರೆ?..............................................................
03. ಆಂಡಾಳ್ ರಚಿಸಿ ಹಾಡಿರುವ ಒಂದು ಭಕ್ತಿ ಕಾವ್ಯ ಯಾವುದು?.............................................................
04. ಷಡ್ರಸಗಳು ಯಾವುವು? ..............................................................................................
05. ಸೂರ್ಯದೇವರು ಸಪ್ತಾಶ್ವ ರಥಾರೊಢನಾಗಿ ದಕ್ಷಿಣದಿಂದ ಉತ್ತರ ದಿಕ್ಕಿಗೆ ಪಯಣ ಪ್ರಾರಂಭಿಸುತ್ತಾನೆ ಈ ದಿನವನ್ನೇ ಏನೆಂದು ಕರೆಯಲಾಗುತ್ತದೆ?
06. ಶ್ರೀ ವೆಂಕಟೇಶ್ವರ ಸುಪ್ರಭಾತವು ಎಷ್ಟು ಭಾಗಗಳಾಗಿವೆ?.........................................................................
07. ದೇವತೆಗಳಿಗೆ ಹಗಲು ಯಾವುದು?.......................................................................................
08. ಉಳಿದ ಯಜ್ಞಗಳ ಮೂಲಕ ಈ ಶರೀರವನ್ನು ಯಾವುದಕ್ಕೆ ಪ್ರಾಪ್ತಿಗೆ ಅರ್ಹವಾಗಿಸುತ್ತಾರೆ? ...................................................
09. ಆಚಾರ್ಯ ಮಧ್ವರ ಜೀವನ ಚರಿತ್ರೆಯನ್ನು ಯಾವ ಗ್ರಂಥದಲ್ಲಿ ದಾಖಲಿಸಿದ್ದಾರೆ? .......................................................
10. ನಮ್ಮಾಳ್ವಾರ್ ಅವರ ದಿವ್ಯ ಪ್ರಬಂಧ ಯಾವುದು? ...............................................................................
11. ಯಾವ ರಾಜನು ಸ್ವಾಮಿಗೆ ಒಂದು ವಜ್ರದ ಕಿರೀಟವನ್ನು ಮಾಡಿಸಿ ಸಮರ್ಪಿಸಿದನು? .......................................................
12. ಶ್ರೀಯಃ ಪತಿ ಯಾರು?..................................................................................................
13. ಭಸ್ಮವನ್ನು ಧರಿಸುವುದರಿಂದ ಯಾವ ಶಕ್ತಿ ಹೆಚ್ಚುತ್ತದೆ? .........................................................................
14. ಋಷ್ಯಶೃಂಗ ಋಷಿಗಳ ಆಶ್ರಮದಲ್ಲಿ ಮಹಿಪಾಲ ಎಂಬ ವಿದ್ಯಾರ್ಥಿ ಹೇಗೆ ಇದ್ದನು? .........................................................
15. ಹೆಣ್ಣು ಗಂಡು, ಪರಸ್ಪರ ಪ್ರೀತಿಸಿ ಅನುರಕ್ತರಾಗಿ ವಿವಾಹವಾಗುವುದನ್ನು ಏನೆಂದು ಕರೆಯುತ್ತಾರೆ? ..........................................

## ಸೂಚನೆಗಳು


**42 ಕ್ವಿಜ್**

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಪ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.


**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ : |





ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ.



1) ಪೊಂಗಲ್ 2) ಸೂರ್ಯ 3) ಸಂಕ್ರಮಣ 4) ಎಳ್ಳು ಬೆಲ್ಲ 5) ಪೊಂಗಲ್ 6) ಸುಗ್ಗಿಯ ಹಬ್ಬ
7) ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಸೂರ್ಯನ ಪ್ರಯಾಣ 8) ಗಾಳಿಪಟ ಹಾರಾಟ

ಮಕ್ಕಳೇ! ಈ ಚಿತ್ರದಲ್ಲಿರುವ ರಬ್ಬರ್‌ನಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ಪೆನ್ಸಿಲ್ ಬಾಕ್ಸ್‌ನಲ್ಲಿ ಸರಿ ಹೊಂದುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ !




1) v 2) iv 3) i 4) vi 5) iii



ಮಕ್ಕಳೇ ನಾನು ಕೆಂಪು ಬಣ್ಣದಲ್ಲಿ ಇರುತ್ತೇನೆ. ನಾನು ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಅಸ್ತಮಿಸುತ್ತೇನೆ. ನಾನು ಯಾರೆಂದು ಹೇಳಿ ನೋಡೋಣ.


ಪುಟಾಣಿಗಳೇ ನಾನು ಮೇಲೆ ಹೇಳಿದ ಮತ್ತು ಮೇಲಿರುವ ಚಿತ್ರವನ್ನು ನೋಡಿ ನಾನು ಯಾರು ಎಂದು ಕಂಡು ಹಿಡಿಯಿರಿ ನೋಡೋಣ!


ಸೂರ್ಯ

ಚಿತ್ರಕಥೆ

# ಅಂತಿಮ ಉಪದೇಶ

**ಕಥೆ : ತಮಿಳು ಮೂಲ :**
ಶ್ರೀನಿಧಿ
**ಅನುವಾದ :** ಆರ್.ಕೆ.ವಿ.
**ಚಿತ್ರಗಳು :** ಕೆ.ಕೆ.








ನೀತಿ : ಶಾಂತವಾಗಿ ಯೋಚಿಸಿದ ನಂತರ ಅವನಿಗೆ ವಿವರಣೆ ಸಿಕ್ಕಿತು. ಸಾವಿನ ಭಯವಿಲ್ಲದೆ ಜೀವನದ ಕೊನೆಯ ಕ್ಷಣಗಳನ್ನು ಸಹ ಸವಿಯಲು ಕಲಿಯಿರಿ.

ಚಿತ್ರಕಥೆ

# ಪಶ್ಚಾತ್ತಾಪ

**ಕಥೆ : ತಮಿಳು ಮೂಲ :** ಶ್ರೀನಿಧಿ
**ಅನುವಾದ :** ಆರ್.ಕೆ.ವಿ.
**ಚಿತ್ರಗಳು :** ಕೆ.ಕೆ.




**ನೀತಿ :** ಪಶ್ಚಾತ್ತಾಪಕ್ಕಿಂತ ದೊಡ್ಡ ಪ್ರಾಯಶ್ಚಿತ್ತ ಇನ್ನೊಂದಿಲ್ಲ ! ಮೇಲಿನ ಕಥೆಯ ನೀತಿಯೆಂದರೆ ಯಾವುದೇ ಸಮಯದಲ್ಲಿ ಯಾವುದೇ ಇತರ ಜೀವಿಗಳನ್ನು ಕೀಳಾಗಿ ನೋಡದೆ ಅಥವಾ ಹಾನಿ ಮಾಡದೆ ಎಲ್ಲರ ಬಗ್ಗೆ ಪ್ರೀತಿ ಮತ್ತು ದಯೆಯನ್ನು ಹೊಂದಿರುವುದು ಈ ಕಥೆಯ ನೀತಿ.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್ : 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

## ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and and Published by Dr. V. G. Chokkalingam, M.A., Ph.D. on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.



20-11-2025 ರಂದು ಭಾರತದ ರಾಷ್ಟ್ರಪತಿ ಗೌ॥ ಶ್ರೀಮತಿ ದ್ರೌಪದಿ ಮುರ್ಮು ಅವರು ಗುರುವಾರ ಸಂಜೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ದರ್ಶನ ಪಡೆದರು. ದರ್ಶನಾನಂತರ ರಾಷ್ಟ್ರಪತಿಯವರಿಗೆ ಅಮ್ಮನವರ ಚಿತ್ರಪಟವನ್ನು ನೀಡುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್ ಕುಮಾರ್ ಸಿಂಘಾಲ್, ಐ.ಎ.ಎಸ್., ರವರು ಮತ್ತು ಆಂಧ್ರಪ್ರದೇಶದ ರಾಜ್ಯ ದತ್ತಿ ಇಲಾಖೆಯ ಮಂತ್ರಿಗಳಾದ ಶ್ರೀ. ಎ. ರಾಮನಾರಾಯಣರೆಡ್ಡಿಯವರು ಮತ್ತು ತಿ.ತಿ.ದೇ., ಆಡಳಿತ ಮಂಡಳಿಯ ಸದಸ್ಯರು ಶ್ರೀ ಭಾನುಪ್ರಕಾಶ್ ರೆಡ್ಡಿಯವರು



21-11-2025 ರಂದು ಭಾರತದ ರಾಷ್ಟ್ರಪತಿ ಗೌ॥ ಶ್ರೀಮತಿ ದ್ರೌಪದಿ ಮುರ್ಮು ಅವರು ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ದರ್ಶನ ಪಡೆದರು. ದರ್ಶನಾನಂತರ ರಾಷ್ಟ್ರಪತಿಯವರಿಗೆ ಸ್ವಾಮಿಯವರ ಚಿತ್ರಪಟವನ್ನು ನೀಡುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯುಡು ರವರು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಮತ್ತು ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಮತ್ತು ಆಂಧ್ರಪ್ರದೇಶದ ರಾಜ್ಯ ದತ್ತಿ ಇಲಾಖೆಯ ಮಂತ್ರಿಗಳು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.



17-11-2025 ರಂದು ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ಕಾರ್ತೀಕ ಬ್ರಹ್ಮೋತ್ಸವಗಳ ಸಂದರ್ಭವಾಗಿ ಆಂಧ್ರಪ್ರದೇಶದ ವತಿಯಿಂದ ದತ್ತಿ ಇಲಾಖೆಯ ಮಂತ್ರಿಗಳಾದ ಶ್ರೀ ಎ. ರಾಮನಾರಾಯಣ ರೆಡ್ಡಿ ಯವರು ಅಮ್ಮನವರಿಗೆ ರೇಷ್ಮೆವಸ್ತ್ರಗಳನ್ನು ಸಮರ್ಪಿಸಿದರು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ರವರು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.



25-11-2025 ರಂದು ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳಲ್ಲಿ ಕೊನೆಯ ದಿನ ಪಂಚಮಿ ತೀರ್ಥ ಸಂದರ್ಭವಾಗಿ ತಿರುಮಲೆ ಸ್ವಾಮಿಯವರ ಆಲಯದಿಂದ ಅಮ್ಮನವರಿಗೆ ಬಾಗಿನವನ್ನು ತರುತ್ತಿರುವ ತಿ.ತಿ.ದೇ., ಜೀಯರ್‌ಗಳು, ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ, ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ, ತಿ.ತಿ.ದೇ., ಆಡಳಿತ ಮಂಡಳಿಯ ಸದಸ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.



01-12-2025 ರಂದು ತಮಿಳುನಾಡಿನಲ್ಲಿರುವ ಪ್ರಮುಖ ವೈಷ್ಣವ ಕ್ಷೇತ್ರವಾದ ಶ್ರೀರಂಗದಲ್ಲಿರುವ ಶ್ರೀರಂಗನಾಥ ಸ್ವಾಮಿಯವರಿಗೆ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ದೃಶ್ಯಮಾಲಿಕೆ.



02-12-2025 ರಂದು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಗೌ॥ ಶ್ರೀ. ನಾರಾಚಂದ್ರಬಾಬು ನಾಯುಡುರವರ ಆದೇಶದ ಮೇರೆಗೆ ಶ್ರೀವಾರಿ ಸೇವೆಯನ್ನು ಬಲಪಡಿಸುವ ಭಾಗವಾಗಿ ತರಬೇತಿ ಪಡೆಯುವವರ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವ ಕಾರ್ಯಕ್ರಮದ ಬಗ್ಗೆ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ. ಎಚ್. ವೆಂಕಯ್ಯಚೌದರಿ, ಐ.ಆರ್.ಎಸ್. ರವರು ಶ್ರೀವಾರಿ ಸೇವಕರನ್ನು ಉದ್ದೇಶಿಸಿ ಮಾತಾಡುತ್ತಿರುವ ದೃಶ್ಯಮಾಲಿಕೆ.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-12–2025 and Posting at Tirupati RMS.Regd. with the Registrar of News papers for India under RNI.No.APKAN/2021/80589. Postal Regd.No.TRP/156/2024-2026 "Licenced to Post Without Prepayment No. PMGK/RNP/WPP-04(6) / 2024-2026" Posting on 1st of Every Month



ತಿರುಮಲೆ
ಶ್ರೀ ಮಲೆಯಪ್ಪ ಸ್ವಾಮಿಯವರ
ಪಾರ್ವೇಟು ಉತ್ಸವ 16-01-2026